“ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು”

ಪಿಹೆಚ್.ಡಿ ಪದವಿಗಾಗಿ ಮಹಾ ಪ್ರಬಂಧ

*

ಶ್ರೀಮತಿ. ಹೆಚ್.ಆರ್. ಶಾಂತ

ಸಂಶೋಧನಾ ವಿದ್ಯಾರ್ಥಿನಿ

ಡಾ. ಚಂದ್ರಿಕಾ ಡಿ.ಆರ್.

ಮಾರ್ಗದರ್ಶಕರು

ಯೋಗ ಸಂಸ್ಕೃತಮ್ ವಿಶ್ವವಿದ್ಯಾಲಯ

ಫ್ಲೋರಿಡಾ (ಯು.ಎಸ್.ಎ)

ಬೆಂಗಳೂರು

2023

Scanned with OKEN Scanner

ಶ್ರೀ ಗುರುಭ್ಯೋ ನಮಃ

“ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು”

ಪಿಹೆಚ್.ಡಿ ಪದವಿಗಾಗಿ ಮಹಾ ಪ್ರಬಂಧ.

ಶ್ರೀಮತಿ. ಹೆಚ್.ಆರ್. ಶಾಂತ

ಸಂಶೋಧನಾ ವಿದ್ಯಾರ್ಥಿನಿ.

ಡಾ. ಚಂದ್ರಿಕಾ ಡಿ.ಆರ್.

ಮಾರ್ಗದರ್ಶಕರು

ಯೋಗ ಸಂಸ್ಕೃತಮ್ ವಿಶ್ವವಿದ್ಯಾಲಯ

ಫ್ಲೋರಿಡಾ (ಯು.ಎಸ್.ಎ)

ಬೆಂಗಳೂರು

2023

ಸಂಶೋಧನ ವಿದ್ಯಾರ್ಥಿನಿಯ ಪ್ರಮಾಣ ಪತ್ರ

"ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು" ಎಂಬ ಸಂಶೋಧನಾ ಪ್ರಬಂಧವನ್ನು ಡಾ. ಚಂದ್ರಿಕಾ ಡಿ.ಆರ್. ಇವರ ಮಾರ್ಗದರ್ಶನದಲ್ಲಿ, ಪಿಎಚ್.ಡಿ ಪದವಿಗಾಗಿ ವೈ.ಎಸ್.ಎ.ಎಮ್. ವಿಶ್ವವಿದ್ಯಾಲಯ, ಲಲಿತಕಲಾ ವಿಭಾಗ, ಬೆಂಗಳೂರು ಇಲ್ಲಿಗೆ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಈ ವಿಷಯವನ್ನು ಕುರಿತು ಸಂಪೂರ್ಣವಾಗಿ ಅಥವಾ ಭಾಗಶಃ ಇದುವರೆಗೂ ಎಲ್ಲಿಯೂ ನಾನು ಪ್ರಕಟಿಸಿರುವುದಿಲ್ಲವೆಂದು ಪ್ರಮಾಣೀಕರಿಸಿದ್ದೇನೆ.

H.R. Shantha

ದಿನಾಂಕ: 10.11.2023
ಸ್ಥಳ: ಬೆಂಗಳೂರು

ಶ್ರೀಮತಿ. ಹೆಚ್.ಆರ್.ಶಾಂತ
ಮೊ.ಸಂ.: 9535884314
ಪಿಹೆಚ್.ಡಿ ಸಂಶೋಧನಾ ವಿದ್ಯಾರ್ಥಿನಿ
ಲಲಿತಕಲಾ ವಿಭಾಗ
ವೈ.ಎಸ್.ಎ.ಎಮ್. ವಿಶ್ವವಿದ್ಯಾಲಯ
ಬೆಂಗಳೂರು

Scanned with OKEN Scanner

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ. ಶಾಂತ.ಹೆಚ್.ಆರ್. ಇವರು "ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು" ಎಂಬ ಶೀರ್ಷಿಕೆಯಡಿಯಲ್ಲಿ ನನ್ನ ಮಾರ್ಗದರ್ಶನದಲ್ಲಿ ಈ ಮಹಾ ಪ್ರಬಂಧವನ್ನು ವೈ.ಎಸ್.ಎ.ಎಮ್.ವಿಶ್ವವಿದ್ಯಾಲಯ ಲಲಿತಕಲಾ ವಿಭಾಗ, ಇಲ್ಲಿಗೆ ಮಹಾ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಮಹಾ ಪ್ರಬಂಧದ ವಿಷಯವನ್ನು ಈ ಶೀರ್ಷಿಕೆಯಡಿಯಲ್ಲಿ ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಿದ್ದೇನೆ.

D.R. Chandrika

ದಿನಾಂಕ: 15–11–2023
ಸ್ಥಳ : ಬೆಂಗಳೂರು

ಡಾ.ಚಂದ್ರಿಕಾ ಡಿ.ಆರ್.
ಶ್ರೀ ಸರಸ್ವತಿ ಸಂಗೀತ ಕಲಾಕೇಂದ್ರ
ಮೊ.ಸಂ. 9243438635

Scanned with OKEN Scanner

ಅರಿಕೆ

"ಮನೆಯೇ ಮೊದಲ ಪಾಠಶಾಲೆ; ತಾಯಿಯೇ ಮೊದಲ ಗುರು"

ಮಗು ತನ್ನ ಮೊದಲ ದಿನಗಳನ್ನು ಕಳೆಯುವುದು ಮನೆಯಲ್ಲಿ, ತಾಯಿಯ ಆರೈಕೆಯಲ್ಲಿ. ಮನೆ ಮಗುವಿಗೆ ಸುರಕ್ಷತೆಯನ್ನು ಒದಗಿಸಿದರೆ, ತಾಯಿ ಮಗು ಮನೆಯಿಂದ ಹೊರಗೆ ಕಾಲಿಡುವ ಮೊದಲು, ಮಗುವಿಗೆ ಮಾತು ಕಲಿಸುವುದು. ಅಂತೆಯೇ ನನ್ನ ತಾಯಿಯವರಾದ ಸರೋಜಮ್ಮನವರು ಮತ್ತು ತಂದೆ ಹೆಚ್.ಜಿ.ಪರಶುರಾಮ ಭಟ್, ನನ್ನ ಬಾಲ್ಯದಲ್ಲಿಯೇ ಕರ್ನಾಟಕ ಸಂಗೀತವನ್ನು ಕಲಿಯಲು ಪ್ರೇರೇಪಿಸಿ, ಪ್ರೋತ್ಸಾಹಿಸಿ ಬೆಳೆಯುವಂತೆ ಮಾಡಿದ ಮೂಲ ಕರ್ತೃ.

ತಿಳುವಳಿಕೆಯೇ ಇಲ್ಲದ ವಯಸ್ಸಿನಲ್ಲಿ ಸಾಧನೆಯ ಹಾದಿಯಲ್ಲಿ ಕ್ರಮಿಸುವಂತೆ ಮಾಡಿ ಸಂಗೀತ ವಿದ್ಯೆಯನ್ನು ಧಾರೆ ಎರೆದವರು, ನನ್ನ ಪ್ರಥಮ ಗುರು, ವಿದೂಷಿ ಶ್ರೀಮತಿ. ತ್ರಿಪುರಾಂಬರವರು. (ಚಿಂತಾಮಣಿ ಕೋಲಾರ ಜಿಲ್ಲೆ, ಕರ್ನಾಟಕ, ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ)

ಕಾರಣಾಂತರಗಳಿಂದ ಈ ಕ್ಷೇತ್ರದಲ್ಲಿ ಅಧ್ಯಯನವನ್ನು ಮುಂದುವರೆಸಲು ಆಗದೆ ಕುಂಠಿತವಾಗಿದ್ದ ನನ್ನ ಕಲಿಕೆಯ ಹಾದಿಯನ್ನು ಪುನರ್ ಪ್ರಾರಂಭಿಸಲು ಸಹಾಯಕರಾದವರು ನನ್ನ ಸಹೋದರಿ. **ಹೆಚ್.ಪಿ.ಉಮಾ** ಮತ್ತು ನನ್ನ ಕುಟುಂಬದವರು.

ವಿದುಷಿ ರಜನಿ (ಮಲ್ಲೇಶ್ವರಂ, ಬೆಂಗಳೂರು) ಅವರಿಂದ ಪುನರ್ ಪ್ರಾರಂಭಗೊಂಡ ನನ್ನ ಅಧ್ಯಯನವು ನನ್ನ ಗೆಳತಿಯರ ಸಹಕಾರ ಮತ್ತು ಬೆಂಬಲಗಳಿಂದ ಮುಂದುವರಿಯಿತು ಮತ್ತು ಚಿಂತಲಪಲ್ಲಿ ವಂಶಸ್ಥರಾದ ಸಂಗೀತ ವಿದ್ವಾನ್ **ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ**ಯವರು ನಡೆಸಿಕೊಂಡು ಬರುತ್ತಿದ್ದ ಸಂಗೀತ ಕಾರ್ಯಾಗಾರಗಳು. ಗಾನ ಕಲಾಭೂಷಣ ಪ್ರಶಸ್ತಿ ವಿಜೇತರಾದ ವಿದ್ವಾನ್ ಆರ್.ಕೆ.ಪದ್ಮನಾಭರವರು ನಡೆಸಿಕೊಂಡು ಬರುತ್ತಿದ್ದ ಗೋಷ್ಠಿ ಗಾಯನಗಳು ನನ್ನ ಕಲಿಕೆಯ ಹಾದಿಯಲ್ಲಿ ಮಹತ್ವಪೂರ್ಣವಾದುದೆನಿಸುತ್ತದೆ.

ದ್ವಿತೀಯ ಹಂತದ ನನ್ನ ಸಂಗೀತದ ಪಯಣದಲ್ಲಿ ನನ್ನನ್ನು ಬೆರಗುಗೊಳಿಸಿದ ವಿಷಯವೆಂದರೆ ರಾಗಗಳನ್ನು, ಅವುಗಳ ಗಮಕಗಳಿಂದ ಸ್ವರಗುಚ್ಛಗಳಿಂದ ಗುರುತಿಸುವುದು ಮತ್ತು ಕೃತಿಗಳನ್ನು ರಾಗಮಾಲಿಕೆಯಲ್ಲಿ ಹಾಡುವುದು.

ನಂತರದ ದಿನಗಳಲ್ಲಿ ವಿದ್ವಾನ್ ಶ್ರೀ ಬಾಲಗುರು ಮತ್ತು ಲಕ್ಷ್ಮಿ ಬಾಲಗುರು ದಂಪತಿಗಳು ನಡೆಸಿಕೊಂಡು ಬರುತ್ತಿದ್ದ ಸಂಗೀತ ತರಗತಿಗಳಲ್ಲಿ ವಿಫುಲವಾಗಿ ರಾಗಮಾಲಿಕೆಗಳ ಪರಿಚಯವಾಯಿತು. ಕನ್ನಡ, ಸಂಸ್ಕೃತ, ತಮಿಳು ಭಾಷೆಗಳನ್ನು ಒಳಗೊಂಡಿದ್ದ ಸ್ವರಚನೆಗಳನ್ನೂ ಬಹಳವಾಗಿ ಕಲಿಸುತ್ತಿದ್ದರು. ಈ ವಿಶಿಷ್ಟ ರಚನೆಗಳಿಂದ ಪ್ರಭಾವಿತಳಾದ ನನಗೆ ರಾಗಮಾಲಿಕೆಗಳಾಗಿ ರಚಿತವಾಗಿರುವ ಕೃತಿಗಳನ್ನು, ವರ್ಣಗಳನ್ನು ಮತ್ತು ದೇವರನಾಮಗಳನ್ನು ಅಭ್ಯಾಸ ಮಾಡುವುದು ಸಂಗೀತ ವಿದ್ಯಾರ್ಥಿಗಳಿಗೆ ಒಂದು ದೊಡ್ಡ ಸವಾಲು ಎನ್ನಿಸಿದ್ದು ಸುಳ್ಳಲ್ಲ.

ಇದೇ ಸಮಯದಲ್ಲಿ ಅನೇಕ ಸಂಗೀತ ಕಛೇರಿಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ದೊರೆತಿದ್ದು, ಪ್ರಪಂಚದಾದ್ಯಂತ ಶುದ್ಧ ಕರ್ನಾಟಕ ಸಂಗೀತವನ್ನು ಪ್ರಚಾರ ಮಾಡಲು ಸಂಪೂರ್ಣವಾಗಿ ಸಮರ್ಪಿತವಾಗಿದ್ದ ಸಂಗೀತದ ಗುಂಪಿನಲ್ಲಿ ಸದಸ್ಯಳಾಗಿ ರಾಗ ತಾಳ ಪಲ್ಲವಿಗಳನ್ನು (RTP) ಮತ್ತು ಕೃತಿಗಳನ್ನು, ಅತ್ಯಂತ ಉತ್ಕೃಷ್ಟ ವಿದ್ವಾಂಸರುಗಳಿಂದ ಹಾಡಲ್ಪಟ್ಟಿದ್ದ ಅರಿಯ ಕುಡಿ ರಾಮಾನುಜ ಅಯ್ಯಂಗಾರ್, ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್., ಆರ್.ಕೆ.ಶ್ರೀಕಂಠನ್, ಎಂ.ಎಸ್. ಸುಬ್ಬುಲಕ್ಷ್ಮಿ, ಎಂ.ಎಲ್. ವಸಂತಕುಮಾರಿ, ಡಿ.ಕೆ.ಪಟ್ಟಮ್ಮಾಳ್, ನಾಗಮಣಿ ಶ್ರೀನಾಥ್, ಎಂ.ಎಸ್.ಶೀಲ ಇನ್ನೂ ಮುಂತಾದ ಹಿರಿಯ ಮತ್ತು ಕಿರಿಯ ವಿದ್ವಾಂಸರುಗಳ ಪ್ರಭುದ್ಧ ಸಂಗೀತವನ್ನು ಪ್ರತಿನಿತ್ಯವೂ ಕೇಳುವ ಭಾಗ್ಯ ದೊರೆಕಿತು.

ಅಂದಿನಿಂದಲೂ ರಾಗಮಾಲಿಕೆ ರಚನೆಗಳನ್ನು ಕಲಿಯುವ ಉತ್ಸುಕತೆಯಲ್ಲಿ ಇದ್ದ ನನಗೆ ಅವುಗಳ ಬಗ್ಗೆ ಸುಧೀರ್ಘ ವಿವರಣೆಗಳನ್ನು ಕಳುಹಿಸಿಕೊಟ್ಟು ಪೋಷಿಸಿದವರು ನನ್ನ ಗುರುಗಳು ಹಾಗೂ ಗೆಳತಿಯೂ ಆದ ಎಚ್.ಕೆ.ನಿರ್ಮಲರವರು (ಬೆಂಗಳೂರು) ಮತ್ತು ನಾಗಲಕ್ಷ್ಮಿಯವರು (ಬೆಂಗಳೂರು).

ಈ ನಿಟ್ಟಿನಲ್ಲಿ ಶಾಸ್ತ್ರೀಯ ಸಂಗೀತದ ರಾಗಮಾಲಿಕೆಗಳನ್ನು ವಿಶ್ಲೇಷಿಸಿ ಅವುಗಳ ಬಗ್ಗೆ ಸುದೀರ್ಘವಾದ ವಿವರಣೆ ನೀಡಿ ತಿಳಿಸಿಕೊಟ್ಟವರು "ಕಲೈಮಾಮಣಿ" ಶ್ರೀಮತಿ "ಡಾ॥ಗಾಯತ್ರಿ ಗಿರೀಶ್" ಮತ್ತು ವಿದ್ವಾನ್ ಆರ್.ಕೆ. ಶ್ರೀರಾಮ್ ಕುಮಾರ್ (ಪಿಟೀಲು ವಾದಕರು). ಅವರುಗಳು ನಡೆಸಿಕೊಟ್ಟ ರಾಗಮಾಲಿಕಾ ಕಾರ್ಯಗಾರಗಳಲ್ಲಿ ಭಾಗವಹಿಸುವ ಸೌಭಾಗ್ಯ ನನಗೆ ಒದಗಿ ಬಂದಿತು.

ಅಂದಿನಿಂದಲೂ "ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು" ಎಂಬುದರ ಬಗ್ಗೆ ಸಂಶೋಧನೆ ಮಾಡಬೇಕೆಂಬ ಹಂಬಲ ಹುಟ್ಟಿಕೊಂಡಿತು. ಈ ರಚನೆಗಳ ಅರಿವು ಉಂಟಾಗುವಂತೆ ಹಾಗೂ ಎಲೆಮರೆಯ ಕಾಯಿಗಳಂತೆ ಅಡಗಿರುವ ವಾಗ್ಗೇಯಕಾರರುಗಳ ಉತ್ಕೃಷ್ಟ ರಚನೆಗಳಲ್ಲಿರುವ ವಿಶೇಷತೆಗಳನ್ನು ಸುಲಭ ಸರಳ ರೀತಿಯಲ್ಲಿ ಜನ ಮುಟ್ಟುವಂತೆ ಮಾಡಿ, ಈ ಚಮತ್ಕಾರಿ ರಚನೆಗಳ ಅಧ್ಯಯನದಿಂದ ಅಭ್ಯರ್ಥಿಗಳು ಸಂಗೀತ ಕ್ಷೇತ್ರದಲ್ಲಿ ಪ್ರಬುದ್ಧತೆಯನ್ನು ಪಡೆಯಲು ಸಹಕಾರಿಯಾಗಿರುವಂತೆ ಮಾಡುವ ಉದ್ದೇಶ ಮೊಳಕೆಯೊಡೆದಿತ್ತು.

ಇದಕ್ಕೆ ಮೂರ್ತ ಸ್ವರೂಪ ದೊರಕಿದ್ದು ಶ್ರೀಮತಿ ಡಾ॥ ಚಂದ್ರಿಕಾರವರಿಂದ.

ಇದಕ್ಕೆ ಪೂರಕವಾಗಿ ನನಗಿದ್ದ ಸಂಗೀತ ಶಾಸ್ತ್ರದ ಲಕ್ಷ್ಯ ಲಕ್ಷಣಗಳ ಪುಸ್ತಕಗಳ ಸಂಗ್ರಹಣೆಯ ಒಲವು.

ಈ ಸಂಶೋಧನೆಯ ಬಗ್ಗೆ ಖ್ಯಾತ ವಿದುಷಿ ಡಾ॥ ಸುಕನ್ಯಾ ಪ್ರಭಾಕರ್ ಅವರಲ್ಲಿ ಸಲಹೆಗಳನ್ನು ಕೇಳಿದಾಗ ತಮ್ಮ ತುಂಬು ಹೃದಯದಿಂದ ಆಶೀರ್ವದಿಸಿ ನನ್ನಲ್ಲಿ ಆತ್ಮ ವಿಶ್ವಾಸವನ್ನು ತುಂಬಿ ಮುನ್ನಡೆಯಲು ತಿಳಿಸಿದರು. ಇವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು ಮತ್ತು ಬಹಳ ವರ್ಷಗಳ ಹಿಂದೆಯೇ ನನ್ನಲ್ಲಿದ್ದ ಸಂಗೀತದ ಬಗ್ಗೆ ನನ್ನಲ್ಲಿದ್ದ ಆಸಕ್ತಿಯನ್ನು ಗುರುತಿಸಿ ಹೃತ್ಪೂರ್ವಕವಾಗಿ ಆಶೀರ್ವಚಿಸಿದ ದಿ.ಶ್ರೀ.ಬಾಲಗುರುಗಳಿಗೆ ನಾನು ಚಿರಋಣಿಯಾಗಿದ್ದೇನೆ.

ಕೆಲವು ಅಪರೂಪದ ಸಂಗೀತದ ಪುಸ್ತಕಗಳನ್ನು ನನ್ನ ಬರವಣಿಗೆಗೆ ಸಹಾಯವಾಗುವುದೆಂದು ತಿಳಿಸಿ ನನಗಿತ್ತು ಸಹಕರಿಸಿದ, ಹಾಗೂ ಪ್ರತಿ ಹೆಜ್ಜೆಗೂ ಬರವಣಿಗೆಯ ಬಗ್ಗೆ ಸಲಹೆ ಮತ್ತು ಮಾರ್ಗದರ್ಶನಗಳನ್ನಿತ್ತ ಶ್ರೀಮತಿ. ಡಾ॥ ಚಂದ್ರಿಕಾ, ಶ್ರೀಮತಿ. ಹೆಚ್.ಕೆ.ನಿರ್ಮಲರವರಿಗೂ ಶ್ರೀಮತಿ.ಸುನಂದರವರಿಗೂ ಮತ್ತು ತಾಂತ್ರಿಕವಾಗಿ ಪ್ರತಿ ಹಂತದಲ್ಲೂ ಸಹಕರಿಸಿದ ನನ್ನ ಸಹೋದರಿಯರಿಗೂ ವಿಶೇಷವಾದ ಧನ್ಯವಾದಗಳು.

ಶ್ರೀ ಗುರುದೇವತಾ ಅನುಗ್ರಹಗಳಿಂದ ಈ ಸಂಶೋಧನೆಯನ್ನು ಮಂಡಿಸಲು ಈ ಹಂತದವರೆಗೆ ಧೈರ್ಯ ತುಂಬಿ ಸತತವಾಗಿ ಪ್ರೋತ್ಸಾಹಿಸಿ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ನನ್ನ ಕುಟುಂಬದ ಸದಸ್ಯರಿಗೂ ಎಲ್ಲಾ ಮಿತ್ರವೃಂದದವರಿಗೂ ನನ್ನ ಅನಂತಾನಂತ ಧನ್ಯವಾದಗಳು.

ಹೆಚ್.ಆರ್. ಶಾಂತ
ಸಂಶೋಧನಾ ವಿದ್ಯಾರ್ಥಿನಿ

ಪರಿವಿಡಿ

	ವಿವರ	ಪುಟ ಸಂಖ್ಯೆ
ಅಧ್ಯಾಯ–1	ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ	2–5
ಅಧ್ಯಾಯ–2	ಕಲೆಗಳು–ಸಂಗೀತ–ಭಾರತೀಯ ಸಂಗೀತದ ಹುಟ್ಟು–ಮಾರ್ಗ ಸಂಗೀತ–ದೇಶಿ ಸಂಗೀತ–ಸಂಗೀತದ ಬೆಳವಣಿಗೆ	6–15
ಅಧ್ಯಾಯ–3	ಕರ್ನಾಟಕ ಸಂಗೀತದ ವೈಶಿಷ್ಟ್ಯ	16–18
ಅಧ್ಯಾಯ–4	ನಾದ–ಸ್ವರ–ಶೃತಿ	19–23
ಅಧ್ಯಾಯ–5	ರಾಗಗಳು–ಗಮಕಗಳು–ರಾಗಗಳ ವರ್ಗೀಕರಣ,ಜನಕರಾಗಗಳು–ಜನ್ಯರಾಗಗಳು–ರಾಗ ಮತ್ತು ರಸ, ಸಂಗೀತದ ಮುದ್ರೆಗಳು	24–38
ಅಧ್ಯಾಯ–6	ಕರ್ನಾಟಕ ಶಾಸ್ತ್ರೀಯ ಸಂಗೀತ ರಚನೆಗಳು	39–44
ಅಧ್ಯಾಯ–7	ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು ರಾಗಮಾಲಿಕೆಯ ಪ್ರಮುಖ ಲಕ್ಷಣಗಳು–ರಾಗಮಾಲಿಕೆಯ ವಿಧಾನಗಳು	45–49
ಅಧ್ಯಾಯ–8	ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳ ಪರಿಕಲ್ಪನೆ	50–55
ಅಧ್ಯಾಯ–9	ಪ್ರಸಿದ್ಧ ವಾಗ್ಗೇಯಕಾರರುಗಳ ರಾಗಮಾಲಿಕಾ ರಚನೆಗಳು ಮತ್ತು ಸಂಗೀತ ಕಛೇರಿಗಳಲ್ಲಿ ಕಾಣಬರುವ ಗೇಯ ರಚನೆಗಳು	56–96
ಅಧ್ಯಾಯ–10	ಸಂಗೀತ ವಿದ್ವಾಂಸರುಗಳು ಪ್ರಸಿದ್ಧಿಗೊಳಿಸಿರುವ ಹಾಗೂ ಜನಪ್ರಿಯವಾಗಿರುವ ಕೆಲವು ರಾಗಮಾಲಿಕೆಗಳು	97–100
ಅಧ್ಯಾಯ–11	ಪ್ರಸಿದ್ಧ ರಾಗಮಾಲಿಕೆಗಳು ಹಾಗೂ ರಾಗಮಾಲಿಕಾ ರಚನೆಗಳ ಸಾಹಿತ್ಯ	101–115

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಪ್ರಸ್ತಾವನೆ.

ಸಂಗೀತವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಇದು ಮನುಕುಲದಷ್ಟೇ ಹಳೆಯದು.

"ಕಾವ್ಯೇಷು ಕೋಮಲಧಿಯೋ ವಯಮೇವ ನಾನ್ಯೇ ತರ್ಕೇಷು ಕರ್ಕಶಧಿಯೋ ವಯಮೇವ ನಾನ್ಯೇ।

ತನ್ತ್ರೇಷು ಯನ್ತ್ರಿತಧಿಯೋ ವಯಮೇವ ನಾನ್ಯೇ ಶಬ್ದೇಷು ಸೂಕ್ತಧಿಯೋ ವಯಮೇವ ನಾನ್ಯೇ ॥"

ಇದರ ಅರ್ಥ: "ಸುಂದರವಾದ ನವಿರಾದ ಕವಿತೆಗಳನ್ನು ಬರೆಯುವುದರಲ್ಲಿ ನಾವು ಅತ್ಯುತ್ತಮರು, ಕಠಿಣವಾದ ಕಠಿಣ ತಾರ್ಕಿಕ ವಾದಗಳಲ್ಲಿ ನಾವು ಅತ್ಯುತ್ತಮರು ॥

ತಂತ್ರಗಳನ್ನು ಅಭ್ಯಾಸ ಮಾಡುವಲ್ಲಿ ನಾವು ಅತ್ಯುತ್ತಮರು, ಪದಗಳ ಪರಿಪೂರ್ಣ ಬಳಕೆಯಲ್ಲಿ ನಾವು ಅತ್ಯುತ್ತಮರು ॥

ನಮ್ಮ ಪ್ರಾಚೀನ ಸಂಸ್ಕೃತ ವಿದ್ವಾಂಸರ ಸರ್ವಾಂಗೀಣ ಸಾಮರ್ಥ್ಯಗಳನ್ನು ಪ್ರದರ್ಶಿಸುವ ದೃಷ್ಟಿಯಿಂದ ಈ ಪದ್ಯವು ಸಾಕಷ್ಟು ಉತ್ತಮವಾಗಿದೆ.

"ಶಿಕ್ಷಾರ್ಥಂ ವಿನೋದಾರ್ಥಂ ಚ, ಮೋದ ಸದನಂ, ಮೋಕ್ಷ ಸದನಂ ಚ" ಎಂದು ಕೃತಿಯಲ್ಲಿ ಶಾಸ್ತ್ರೀಯ ಸಂಗೀತವನ್ನು ವ್ಯಾಖ್ಯಾನಿಸಲಾಗಿದೆ, ಇದು ಜನಪ್ರಿಯ, ಕಲಾತ್ಮಕ, ಕಲಿಸುವ ಮತ್ತು ಆಧ್ಯಾತ್ಮಿಕ ಮತ್ತು ಅತೀಂದ್ರಿಯಗಳ ಮಿಶ್ರಣವಾಗಿದೆ. ಇದು ಇಂದಿಗೂ ಶಾಸ್ತ್ರೀಯ ಸಂಗೀತದ ವ್ಯಾಖ್ಯಾನವಾಗಿದೆ. "ಗಾಯನಕ್ಕೆ ಮನಸೋಲದ ಜನ ಜಗತ್ತಿನಲ್ಲಿಲ್ಲ". ಆದರೆ ಜನಾಂಗದ ಮನೋವೃತ್ತಿ, ಪ್ರಕೃತಿ, ಪ್ರತಿಭೆಗಳನ್ನು ಅನುಸರಿಸಿ ಅಲ್ಲಿಯ ಸಂಗೀತ ಪದ್ಧತಿ ಬದಲಾಗುತ್ತದೆ.

ದಕ್ಷಿಣ ಭಾರತದಲ್ಲಿ ಪ್ರಸಿದ್ಧಿಯಾಗಿರುವ ಕರ್ನಾಟಕ ಸಂಗೀತ ತನ್ನ ಮೂಲ ಪಾವಿತ್ರ್ಯವನ್ನು ಬಹುಮಟ್ಟಿಗೆ ಉಳಿಸಿಕೊಂಡು ಮುಂದುವರಿಯುತ್ತಿದೆ. ನಮ್ಮ ಕರ್ನಾಟಕ ಸಂಗೀತದಲ್ಲಿ ಪ್ರಧಾನವಾಗಿ ಎರಡು ವಿಭಾಗಗಳಿವೆ. ಕಲ್ಪಿತ ಸಂಗೀತ ಮತ್ತು ಕಲ್ಪನಾ ಸಂಗೀತ.

(ಮನೋಧರ್ಮ ಸಂಗೀತ) ಸಂಗೀತದಲ್ಲಿ ಸ್ವರಜತಿ, ವರ್ಣ, ಕೀರ್ತನೆ ಮೊದಲಾದ ವಾಗ್ಗೆಯಕಾರರುಗಳ ರಚನೆಗಳನ್ನು, ರಚಿಸಲ್ಪಟ್ಟವನ ವಿಧಾನಕ್ಕೆ ವ್ಯತ್ಯಾಸ ಮಾಡಿ ಹಾಡಲು ಕಲಾವಿದರುಗಳಿಗೆ ಸ್ವಾತಂತ್ರ್ಯವಿಲ್ಲ. ಈ ರಚನೆಗಳನ್ನು ಅಭ್ಯಾಸ ಮಾಡುವುದು ಮನೋಧರ್ಮ ಸಂಗೀತಕ್ಕೆ ಪೂರಕವಾಗಿರುತ್ತದೆ. "ರಾಗಮಾಲಿಕೆ" ಎಂಬುದು ಎರಡು ವಿಧವಾದ ಸಂಗೀತದಲ್ಲೂ ಸಾಧ್ಯ .

ಕಲಾಭಿವೃದ್ಧಿಗೆ ಯಾವಾಗಲೂ ಸ್ವಾತಂತ್ರ್ಯವಿರುವುದನ್ನು ನಾವು ಚರಿತ್ರೆಯ ಉದ್ದಕ್ಕೂ ಕಾಣುತ್ತೇವೆ. ಒಂದೇ ವಿಷಯದ ಸಾಹಿತ್ಯಕ್ಕೆ ಅನೇಕ ರಾಗಗಳ ಬೇರೆ ಬೇರೆ ಹೂಗಳನ್ನು ಕೂದು ಕಟ್ಟಿರುವ ಹಾರದಂತೆ, ಹೊಂದಿಕೊಂಡಿರುವುದಕ್ಕೆ "ರಾಗಮಾಲಿಕೆ" ಎಂದು ಹೆಸರು. ಇದು ತಾಳಕ್ಕೆ ಅನುಗುಣವಾಗಿಯೂ ರಸ ಭಾವಗಳಿಂದ ಕೂಡಿರುತ್ತದೆ.

"ಸಂಗೀತಂ ಪರಮಾನಂದಂ, ಶಾಂತ ರಸ ಪ್ರವರ್ತಕಂ." "(सङ्गीतं परमानन्दं, शान्त रस प्रवर्तकं.)" ಅನುವಾದ: "ಸಂಗೀತವು ಅಂತಿಮ ಆನಂದ, ಶಾಂತಿ ಮತ್ತು ನೆಮ್ಮದಿಯ ಸೃಷ್ಟಿಕರ್ತ."

ಸಂಗೀತ ವಿದ್ಯೆಯು ಪ್ರಯೋಗ ಮತ್ತು ಅನುಷ್ಠಾನಗಳ ಶಾಸ್ತ್ರ. ಸುಳಾದಿ, ಗೀತೆಗಳು, ವರ್ಣ, ಕೃತಿಗಳು ರಚಿತ ಸಂಗೀತವಾದರೆ, ಶ್ಲೋಕಗಳನ್ನು ಹಾಡುವುದು, ಪಲ್ಲವಿಯಲ್ಲಿ ಸ್ವರಕಲ್ಪನೆ, ಗ್ರಹಭೇದ ಮಾಡುವುದು ಮನೋಧರ್ಮ ಸಂಗೀತವಾಗುತ್ತದೆ.

"ರಸಭಾವಂ ಭವಂ ಸರ್ವಂ, ರಸಭಾವಂ ವಿನಶ್ಯತಿ."

"(रसभावं भावं सर्वं, रसभावं विनश्यति.)"

ಅನುವಾದ: "ಎಲ್ಲವೂ ಭಾವನೆಯ ಅಭಿವ್ಯಕ್ತಿಯಾಗಿದೆ ಮತ್ತು ಅದು ಭಾವನೆಯ ಅನುಪಸ್ಥಿತಿಯಲ್ಲಿ ನಾಶವಾಗುತ್ತದೆ.

ರಾಗಮಾಲಿಕೆಯು, ವಾಗ್ಗೇಯಕಾರನ ಚಮತ್ಕಾರದ ರಚನೆಯನ್ನು ಕಲಾವಿದನು ಪೂರ್ಣ ಪ್ರತಿಭೆಯೊಂದಿಗೆ ಪ್ರದರ್ಶಿಸುವ ರೂಪವಾಗಿದೆ. ಒಂದು ರಾಗಮಾಲಿಕೆಯನ್ನು ರಚನೆ ಮಾಡುವಾಗ ಕಲೆಗಾರ **"ಸ್ವಲ್ಪದರಲ್ಲಿ ಸ್ವಾರಸ್ಯ"** ಎಂಬ ಸೂಕ್ತಿಯಂತೆ ರಾಗಮಾಲಿಕೆಯು ತಳಹದಿಯನ್ನಾಗಿಸಿ ತನ್ನ ಕುಶಲತೆಯನ್ನು ತೋರಿಸುತ್ತಾನೆ.

"ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆ"ಗಳ ಅಧ್ಯಯನವು ಈ ಎಲ್ಲದರ ಅನ್ವೇಷಣೆಗೆ ದಾರಿಯಗಿದೆ. ಇಂದಿನ ದಿನಗಳಲ್ಲಿ ಕಲಾವಿದರುಗಳು, ಸಂಗೀತಗಾರರು ಹಿಂದಿನ ವಾಗ್ಗೇಯಕಾರರಿಂದ ರಚಿತವಾದ ರಾಗಮಾಲಿಕೆಗಳನ್ನು ಹಾಡುವುದು ತುಂಬಾ ಅಪರೂಪವಾಗುತ್ತಿದೆ. ಹಳೆಯ ಗ್ರಂಥಗಳನ್ನು ಹುಡುಕಿದಾಗ ಅನೇಕ ರಾಗಮಾಲಿಕೆಗಳು ಕಾಣಬರುತ್ತದೆ. ವಿದ್ವಾಂಸರುಗಳು ಇವುಗಳನ್ನು ಸಂಶೋಧಿಸಿ, ಅಭ್ಯಾಸ ಮಾಡಿ, ವೇದಿಕೆಯ ಮೇಲೆ ಪ್ರಚಾರ ಮಾಡಿ ಹಳೆಯದನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೊರಬೇಕು. ಆಗ ಮಾತ್ರ ಈ ರಚನೆಗಳು ಮುಂದಿನ ಪೀಳಿಗೆಗೂ ಉಳಿದು ಬರುತ್ತವೆ.

ಕೆಲವು ವಿಶಿಷ್ಟವಾದ ರಾಗಮಾಲಿಕೆಗಳ ಕಿರು ಪರಿಚಯದೊಂದಿಗೆ ಹಿಂದಿನ ದಿನಗಳಲಿ ್ಲಜನಪ್ರಿಯವಾಗಿದ್ದ ಮತ್ತು ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗಿರುವ ರಾಗಮಾಲಿಕೆಗಳ, ರಾಗ ತಾನ ಪಲ್ಲವಿಗಳ ಪಕ್ಷಿನೋಟವೇ ಈ ಪ್ರಬಂಧಕ್ಕೆ ಮೂಲ ರೂಪ.

ಕೆಲವರು ಸಂತೋಷಕ್ಕಾಗಿ ಸಂಗೀತಾಭ್ಯಾಸ ಮಾಡಿದರೆ ಮತ್ತೆ ಕೆಲವರು ತಾವು ಕಲಿಸುವುದನ್ನು ಯಥಾವತ್ತಾಗಿ ಹಾಡಿ ಇತರರಿಗೂ ಆ ಜ್ಞಾನಧಾರೆಯನ್ನು ಹರಿಸಿ ಕೃತಾರ್ಥರಾಗುತ್ತಾರೆ.

ಅಪೂರ್ವರಾಗಮಾಲಿಕೆಗಳ ಸಂಯೋಜನೆಗಳೊಂದಿಗೆ, ಹಲವಾರು ವಾಗ್ಗೇಯಕಾರರ ಕೆಲವು ರಚನೆಗಳು ಮತ್ತು ರಾಗ ತಾನ ಪಲ್ಲವಿಗಳ ಅಧ್ಯಯನವೇ ಮೂಲ ಉದ್ದೇಶವಾಗಿದೆ.

ಈ ಸಂಶೋಧನೆಯಲ್ಲಿ ಪ್ರಮುಖವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ವಾಗ್ಗೇಯಕಾರರುಗಳಿಂದ ರಚಿಸಲ್ಪಟ್ಟ, ಹಾಗೂ ಸಂಗೀತ ವಿದ್ವಾಂಸರುಗಳಿಂದ ಸಂಯೋಜಿಸಲ್ಪಟ್ಟ ಪ್ರಖ್ಯಾತವಾದ, ಜನಪ್ರಿಯವಾದ, ಕೆಲವು ವಿಭಿನ್ನ ಲಕ್ಷಣಗಳನ್ನು ಹೊಂದಿರುವ ರಾಗಮಾಲಿಕೆಗಳ ವಿವರಣೆಗಳನ್ನು ಸೇರಿಸಲಾಗಿದೆ.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆ ಎನ್ನುವಲ್ಲಿ "ಸಂಗೀತ" ಎಂದರೆ ಶಾಸ್ತ್ರೀಯ ಸಂಗೀತ ಎಂಬ ಪರಿಮಿತಿಯ ಅರ್ಥವನ್ನು ಇಟ್ಟುಕೊಂಡಿದೆ. ಸುಗಮ ಸಂಗೀತ, ಭಕ್ತಿ ಗೀತೆಗಳು, ಚಲನಚಿತ್ರ ಗೀತೆಗಳು, ದೇವತಾ ಸ್ತೋತ್ರಗಳ ರಾಗಮಾಲಿಕೆಗಳ ವಿವರಗಳನ್ನು ಈ ಅಧ್ಯಯನ ಭಾಗಕ್ಕೆ ಹೊಂದಿಸಿಕೊಂಡಿಲ್ಲ.

ಮಾತು ಮತ್ತು ಧಾತುಗಳನ್ನು ಹೊಂದಿದ್ದು, ಪ್ರಖ್ಯಾತ ವಿದ್ವಾಂಸರ ಕೆಲವು ಸಂಯೋಜನೆಗಳ, ದೇವತಾ ಸ್ತೋತ್ರಗಳ (ಉದಾಹರಣೆ: ಮೈಸೂರು ವಾಸುದೇವಾಚಾರ್ಯ) ಕೆಲವು ಸಂಯೋಜನೆಗಳ ಬಗ್ಗೆ ಹೇಳಲಾಗಿದೆ.

ಕರ್ನಾಟಕ ಸಂಗೀತವು ವಿಶಿಷ್ಟವಾದ ಗಮಕಗಳಿಂದ ಕೂಡಿದ ರಾಗ ಭಂಡಾರವಾಗಿದೆ ಹಾಗೂ ವಿಭಿನ್ನ ತಾಳಗಳ ಸಮ್ಮೇಳನದಿಂದ ಬೇರೆಲ್ಲ ಸಂಗೀತಗಳಿಗಿಂತಲೂ ಪ್ರಖ್ಯಾತವಾಗಿದೆ. ಕರ್ನಾಟಕ ಸಂಗೀತದ ಮನೋಧರ್ಮ ಪ್ರಾಕಾರಗಳಲ್ಲಿ ಒಳಗೊಂಡಿರುವ ರಾಗಮಾಲಿಕೆಗಳ ಪರಿಕಲ್ಪನೆಯನ್ನು ಪರಿಶೀಲಿಸಿದಾಗ ರಾಗ ತಾನ ಪಲ್ಲವಿಗಳ ಹಾಡುಗಾರಿಕೆಯಲ್ಲಿ ಕಂಡು ಬರುವ ವಿಶೇಷವಾದ ಅಂಶವೆಂದರೆ– ಕಲಾವಿದರು (ಗಾಯಕ, ವಾದಕರು) ತಮ್ಮ ಪರಿಪಕ್ವವಾದ ವಿದ್ವತ್ ಪೂರ್ಣ ಕಲಾ ಪ್ರೌಢಿಮೆಯನ್ನು ಕಲಾರಸಿಕರೊಂದಿಗೆ ಹಂಚಿಕೊಂಡಾಗ ಪಡೆಯುವ ಆತ್ಮಾನಂದವು ಮಹನೀಯವಾದುದು. ಈ ಸಂತೋಷವು ಕಲಾವಿದರುಗಳಿಗೆ ಮತ್ತು ಕಲಾರಸಿಕರಿಬ್ಬರಿಗೂ ಅವಿಸ್ಮರಣೀಯವಾದದು.

ಈ ನಿಟ್ಟಿನಲ್ಲಿ ಸಂಗೀತ ಅಭ್ಯಾಸಿಗಳಿಗೆ ಅವರ ಪ್ರಾರಂಭಿಕ ಅಭ್ಯಾಸಗಳಲ್ಲಿ ರಾಗಮಾಲಾ ಗೀತೆಗಳನ್ನು, ರಾಗಮಾಲಿಕಾ ಸ್ವರಜತಿಗಳನ್ನು, ವರ್ಣಗಳನ್ನು ಮತ್ತು ಕೃತಿಗಳನ್ನು ಅಧ್ಯಯನದ ಭಾಗಗಳಲ್ಲಿ ಸೇರ್ಪಡೆ ಮಾಡಿದಾಗ, ಅವುಗಳನ್ನು ವಿಶ್ಲೇಷಿಸಿ ಹೇಳಿಕೊಟ್ಟಾಗ ವಿದ್ಯಾರ್ಥಿಯು ಮನೋಧರ್ಮ ಸಂಗೀತದಲ್ಲಿ ಪ್ರಬುದ್ಧತೆಯನ್ನು ಪಡೆಯಲು ಸುಲಭ ಸಾಧ್ಯ.

"ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಯ ಅಧ್ಯಯನವು" ಈ ಪ್ರಾಕಾರಗಳಲ್ಲಿ ಪರಿಣಾಮಕಾರಿ ಅಂಶವಾಗಬಲ್ಲದು ಎನ್ನುವುದರಿಂದ ಈ ಪ್ರಬಂಧದ ಅಧ್ಯಯನದ ಚಿಂತನೆಯನ್ನು ಮಾಡಲಾಗಿದೆ.

ಅಧ್ಯಾಯ ಎರಡು

ಕಲೆಗಳು–ಸಂಗೀತ–ಭಾರತೀಯ ಸಂಗೀತದ ಹುಟ್ಟು–ಮಾರ್ಗ ಸಂಗೀತ–ದೇಶಿ ಸಂಗೀತ–ಸಂಗೀತದ ಬೆಳವಣಿಗೆ

ಕಲೆಗಳು:

ಕಲೆಯು ಮನುಷ್ಯ ಜೀವನದ ಅವಿಭಾಜ್ಯಅಂಗ. ಕಲೆಗಳಲ್ಲಿ 64 ಬಗೆಗಳಿವೆ ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಈ ಕಲೆ ಭಾರತೀಯರ ಜೀವನದ ಮೇಲೆ ಮಹತ್ವಪೂರ್ಣ ಪರಿಣಾಮವನ್ನು ಬೀರಿವೆ. ಈ ಕಲೆಗಳನ್ನು ಸುಲಭವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು.

1. ಲಲಿತ ಕಲೆ ಮತ್ತು 2. ಸಾಮಾನ್ಯ ಕಲೆ

ಲಲಿತಕಲೆ – ಕಲಾವಿದನ ಕಲ್ಪನೆಯ ಸಂಪೂರ್ಣ ಅಭಿವ್ಯಕ್ತಿ ಹಾಗೂ ಪ್ರದರ್ಶನಕ್ಕೆ ಅವಕಾಶ ನೀಡುವಂತಹುದು ಮತ್ತು ಆತ್ಮತೃಪ್ತಿ ತಿಳುವಳಿಕೆ ಮನಸ್ಸಿಗೆ ಶಾಂತಿ ಸಂತೋಷಗಳನ್ನು ಕೊಡುವಂತಹುದು.

ಸಾಮಾನ್ಯ ಕಲೆ – ಮೇಲ್ಕಂಡಂತೆ ಇರದೇ ಕೇವಲ ಜೀವನವಾಗಿರುವುದು.

ಇತಿಹಾಸಿಕವಾಗಿ ಐದು ಮುಖ್ಯ ಕಲೆಗಳಿವೆ.

ಅವು ಯಾವುವೆಂದರೆ :

1. ಸಂಗೀತ
2. ಚಿತ್ರ ಕಲೆ
3. ಶಿಲ್ಪಕಲೆ
4. ವಾಸ್ತು ಶಿಲ್ಪ
5. ಕಾವ್ಯ ಸಂಗೀತ

ನಮ್ಮ ನಾಡಿನ ಸಂಸ್ಕೃತಿಯನ್ನು ಪ್ರತಿನಿಧಿಸುವ ವಿಷಯಗಳಲ್ಲಿ ಲೋಕರಂಜನೆ, ಭವಭಂಜನೆಗಳೆರೆಡನ್ನು ಗುರಿಯಾಗಿ ಹೊಂದಿದ ಸಂಗೀತಕಲೆಯು ಪ್ರಧಾನವಾದದ್ದು. ಸಂಗೀತವು ಹೃದಯದ ಭಾಷೆ. ಮಾನವನ ಭಾವನೆಗಳಿಗೆ ಸ್ಪಂದಿಸುತ್ತದೆ. ಭಾರತೀಯ ಸಂಗೀತವು ಮಾನವನ ಹೃದಯಾಂತರಾಳವನ್ನು ಮುಟ್ಟುತ್ತದೆ.

ಸಂಗೀತವು 1500–2000 ವರ್ಷಗಳ ಅವಧಿಯಲ್ಲಿ ನಿರಂತರವಾಗಿ ವಿಕಸನಗೊಂಡಿದೆ. ಇಂದು ನಾವು ತಿಳಿದಿರುವ ಮತ್ತು ಅರ್ಥಮಾಡಿಕೊಳ್ಳುತ್ತಿರುವ ಹಾಗೆ ಇರಲಿಲ್ಲ. ದೀರ್ಘ ವಿಕಸನದ ಹೊರತಾಗಿಯೂ, ಇದು ತನ್ನ ಮೂಲಭೂತ ಗುರುತು ಮತ್ತು ತತ್ವಗಳನ್ನು ಉಳಿಸಿಕೊಂಡಿದೆ.

ಭಾರತೀಯ ಸಂಗೀತದ ಹುಟ್ಟು.

ಜಗತ್ತಿನ ಸೃಷ್ಟಿಯಲ್ಲಿ ಮನುಷ್ಯ ಜೀವಿಯ ಹುಟ್ಟು ಬೆಳವಣಿಗೆಯ ವಿಕಾಸದ ಪರಂಪರೆ ವಿಸ್ಮಯಕಾರಿಯಾದದು. ತನ್ನೊಳಗಿನ ಭಾವನೆಗಳನ್ನು ಮತ್ತೊಬ್ಬರಿಗೆ ಸಂವಹನಗೊಳಿಸಲು ಸಾಧ್ಯವಾಗುವಂತೆ ನಿರ್ದಿಷ್ಟ ಶಾಬ್ದಿಕ ರೂಪಗಳನ್ನು ಸೃಷ್ಟಿಸಿಕೊಂಡಾಗ ಭಾಷಾ ವಿಧಾನವು ಆತನ ಭವಿಷ್ಯತ್ತಿನ ಅಗಾಧದ ಬೆಳವಣಿಗೆಗೆ ಮತ್ತು ಬದಲಾವಣೆಗೆ ಕಾರಣವಾಯಿತು. ಹೀಗೆ ಹುಟ್ಟಿಕೊಂಡ ಶಾಬ್ದಿಕ ರೂಪವೇ ವಿಕಾಸದ ಹಾದಿಯಲ್ಲಿದ್ದ ಆದಿ ಮಾನವನ ಅಂತಸ್ಥ ಸಂಗೀತದ ಮೊದಲ ಅಭಿವ್ಯಕ್ತಿಯಾಯಿತು.

ಪ್ರಪಂಚದ ಎಲ್ಲಾ ದೇಶಗಳ ಸಂಗೀತದ ಮೂಲವನ್ನು ಸ್ಫೋಟ ಅಥವಾ ಶಬ್ದ ಬ್ರಹ್ಮದಲ್ಲಿ ಕಾಣಬಹುದೆಂದು ಸಿದ್ಧಾಂತ ಮಾಡಿದ್ದಾರೆ. ಪತಂಜಲಿಯ ಮಹಾಭಾಷ್ಯದಲ್ಲಿ ಸ್ಫೋಟ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. “ಸಂಗೀತವೇ ಎಲ್ಲಾ ಕಲೆಗಳಲ್ಲಿ ಅತ್ಯಂತ ಪ್ರಾಚೀನವೂ ಮತ್ತು ಪ್ರಭಾವಶಾಲಿಯೂ ಆಗಿದೆ”.

ಮಾನವನ ಜ್ಞಾನವು ವಿಕಾಸಗೊಂಡ ಹಾಗೆ ಅವನ ಅವಶ್ಯವಾದ ಶೋಧವು ಲಭಿಸುವಂಥಾಯ್ತು ಈ ಶೋಧದಲ್ಲಿ ಕಲೆಯು ಸೇರಿರುವುದು ಗಣನೆಗೆ ಬರುವ ಸಂಗತಿ ಕಲೆಯಲ್ಲಿ ಸಂಗೀತವು ಸೇರಿದೆ ಅಂದಮೇಲೆ ಮಾನವ ಸೃಷ್ಟಿ ಕಾಲದಿಂದಲೇ ಸಂಗೀತವು

ಹುಟ್ಟಿರಬಹುದು ಎಂದು ಊಹಿಸಬಹುದು **"ಭೂಮಿಯ ಎಲ್ಲಾ ಶಬ್ದಗಳು ಸಂಗೀತದಂತೆ. – ಆಸ್ಕರ್ ಹ್ಯಾಮರ್ ಸ್ಟೈನ್"*** ಎಂದು ಹೇಳಿದ್ದಾರೆ.

ಸಂಗೀತ, ಇದು ಸಂಸ್ಕೃತ ಮೂಲದಿಂದ ಬಂದ ಪದವಾಗಿದೆ. ಶಬ್ದ ಕೋಶದಲ್ಲಿ ಸಂಗೀತ ಎಂಬ ಪದಕ್ಕೆ ನೃತ್ಯ,ವಾದ್ಯ, ಗೀತೆಗಳ ಸಂಗಮ ಎನ್ನಲಾಗಿದೆ. ಒಟ್ಟುಗೂಡಿ ಹಾಡುವಿಕೆ ಗಾಯನ ಹಾಡುಗಾರಿಕೆ ಎಂಬರ್ಥಗಳಿವೆ. ಆರಂಭದಲ್ಲಿ ಸಂಗೀತವೆಂದರೆ ನೃತ್ಯ ವಾದ್ಯ ಗೀತೆಗಳ ತ್ರಿವಳಿ ಸಂಗಮವಾಗಿತ್ತು. ನಂತರದಲ್ಲಿ ವ್ಯಕ್ತಿನಿಷ್ಠ ಹಾಡುಗಾರಿಕೆಯು ಸಂಗೀತವೆಂಬ ಅರ್ಥದಲ್ಲಿ ಪ್ರಚಾರವಾಯಿತು. ರಾಗ ತಾಳಗಳ ಕಲ್ಪನೆಗಳಿಂದ ಕ್ರಿಯಾಶೀಲವಾಗಿರುವುದನ್ನು ಸಂಗೀತ ಎನ್ನಬಹುದು. ಸಂಗೀತವು "ಗೀತ" ಶಬ್ದಕ್ಕೆ "ಸಂ" ಎಂಬ ಉಪಸರ್ಗವು ಸೇರಿದುದರಿಂದ **"ಸಂಗೀತ"** ಶಬ್ದವಾಗಿದೆ. ಸಂಸ್ಕೃತದಲ್ಲಿ ಕಾಳಿದಾಸನು ಸಂಗೀತವನ್ನು "ಹಾಡು" ಎಂಬ ಅರ್ಥದಲ್ಲಿ ಮಾತ್ರ ಬಳಸುತ್ತಾನೆ.

ಪ್ರಕೃತಿಯಲ್ಲಿ ಅಥವಾ ಧ್ವನಿಯಲ್ಲಿ ಕಂಡು ಬರುವ ನಾದ ವಿಶೇಷಗಳನ್ನು, ಲಯ ವಿಶೇಷಗಳನ್ನು ಪ್ರತ್ಯೇಕವಾಗಿ ಗುರುತಿಸಿ ಅವುಗಳ ವ್ಯವಸ್ಥಿತ ಜೋಡಣೆಯಲ್ಲಿ ತತ್ವವನ್ನು ಕಂಡುಕೊಂಡಾಗ, ಇಂತಹ ಸೌಂದರ್ಯದ ಸಾಕ್ಷಾತ್ಕಾರದಲ್ಲಿ ಮಾನವನು ತೊಡಗಿದಾಗ ಸಂಗೀತವು ಹುಟ್ಟಿತು ಎನ್ನಬಹುದು.

ಕೆಲವು ಪ್ರಾಚೀನ ಪುರಾಣಗಳಲ್ಲಿಯೂ ಸಂಗೀತ ಎಂಬ ಮಾತಿನ ಉಲ್ಲೇಖವಿದೆ. ರಾಮಾಯಣ ಮತ್ತು ಮಹಾಭಾರತದಂತಹ ಕೃತಿಗಳ ಭಾಗಗಳು ವಾದ್ಯಗಳು ತಾಳಗಳಂತಹ ಉಲ್ಲೇಖಗಳನ್ನು ಹೊಂದಿವೆ. ಸಂಗೀತದ ಕುರಿತು ಅಧಿಕೃತವಾಗಿ ನಮಗೆ ತಿಳಿದುಬರುವುದು ವೇದಗಳಿಂದ.

ವೇದಗಳಲ್ಲಿ ಮೊದಲನೆಯದು ಋಗ್ವೇದ ಅನಂತರದವು ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದ. ಋಗ್ವೇದದ ಕಾಲದಲ್ಲಿ ಸಂಗೀತದ ಬೆಳವಣಿಗೆ ಮನೆಯೊಳಗೆ ನಡೆದಷ್ಟು ಹೊರಗಡೆ ನಡೆಯಲಿಲ್ಲ. ಸಂಗೀತ ಪ್ರದರ್ಶನ ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ಆಗುತ್ತಿತ್ತು. ಸಂಜೆಯ ಸಮಯದಲ್ಲಿ ತಮ್ಮ ಇಷ್ಟ ದೇವತೆಗಳ ಆರಾಧನೆಯನ್ನು ಸಂಗೀತಮಯ ಪ್ರಾರ್ಥನೆಗಳಿಂದ ಮಾಡುತ್ತಿದ್ದರು.

(ಉಲ್ಲೇಖ ಪ್ರೊ: ಬಿ.ಡಿ ಪಾಠಕ್) ಯಜ್ಞ ಯಾಗಾದಿಗಳ ವೇಳೆಯಲ್ಲಿ ಅಲ್ಲಿಯೇ ಗಾತ್ರಗಳನ್ನು ನಿರ್ಮಿಸಿ ಹಾಡಬೇಕಾಗುತ್ತಿತ್ತು. ಮುಂಜಾನೆಯ ವೇಳೆ ಮಂದಗತಿಯಲ್ಲೂ ಮಧ್ಯಾಹ್ನದಲ್ಲಿ ಸ್ವಲ್ಪವೇ ವೇಗವಾಗಿಯೂ ಮತ್ತು ಸಾಯಂಕಾಲದಲ್ಲಿ ವೇಗಗತಿಯಲ್ಲಿಯೂ ಹಾಡಬೇಕೆಂಬ ನಿಯಮವಿದೆ. ಹಾಡುವಾಗ ಅಥವಾ ಅಭ್ಯಾಸಿಸುವಾಗ ಕಿಂಚಿತ್ ತಪ್ಪಿದರೆ ಪೂರ್ಣ ಯಾಗವು ಧ್ಯೇಯವಿಲ್ಲದಂತಾಗುತ್ತಿತು. "(ಉಲ್ಲೇಖ:ಡಾ॥ಆರ್.ಎನ್.ಶ್ರೀಲತಾ ಪೂರ್ವೋಕ್ತ) ಯಜುರ್ವೇದದ ಕಾಲದಲ್ಲಿಯೂ ಯಾಗ-ಯಜ್ಞ ಮುಂತಾದ ಧಾರ್ಮಿಕ ಸಮಾರಂಭಗಳಲ್ಲಿ ಪಠಿಸುವ ಮಂತ್ರೋಚ್ಚಾರಣೆಯನ್ನು ಬಹುತೇಕ ರೂಪಗಳಲ್ಲಿ ಮಾಡಲಾಗುತ್ತಿತ್ತು. ಯಜುರ್ವೇದ ಸಂಹಿತೆಯಲ್ಲಿ ವೀಣೆ ಶಂಖ ಇತ್ಯಾದಿ ವಾದ್ಯಗಳ ಉಲ್ಲೇಖವಿದೆ.

'ಸಾಮ' ಎಂಬ ಶಬ್ದದ ಅರ್ಥ ಗಾನ ಅಥವಾ ಗೇಯ. ದೈವ ಸ್ತುತಿಗಾಗಿ ರಚಿತವಾದ ಲಲಿತ ಛಂದೋಬದ್ಧ ಕಾವ್ಯಗಳು ಸಂಗೀತಕ್ಕೆ ಉಪಯುಕ್ತವಾದವು. ಸಂಗೀತದ ದೃಷ್ಟಿಯಲ್ಲಿ ಸಾಮವೇದಕ್ಕೆ ವಿಶಿಷ್ಟವಾದ ಸ್ಥಾನವಿದೆ. ಭಾರತೀಯರ ಮಟ್ಟಿಗೆ ಸಾಮವೇದವು ಸಂಗೀತದ ಮೂಲ. ಅದು ಹಲವು ಹತ್ತು ದಿಕ್ಕುಗಳಲ್ಲಿ ವಿಹರಿಸಿ ವಿಕಾಸಗೊಂಡಾಗ **ಗಾಂಧರ್ವವೇದ** ಎಂದೆನಿಸುತ್ತದೆ. ಗಾಂಧರ್ವವೇದವು ಸಾಮವೇದದ ಉಪವೇದವಾಗಿದೆ. ಸಂಗೀತಶಾಸ್ತ್ರದ ಇತಿಹಾಸದಲ್ಲಿ ಸಾಮವೇದವು ಮೊಟ್ಟ ಮೊದಲ ಮೈಲಿಗಲ್ಲು. ಸಂಗೀತಶಾಸ್ತ್ರಕ್ಕೆ ಒಂದು ಸ್ಪಷ್ಟತೆ ದೊರೆತದ್ದು ಈ ಕಾಲದಲ್ಲಿಯೇ. ಇದು ಮುಂದಿನ ಸಂಗೀತದ ಸ್ವರೂಪವನ್ನು ಮತ್ತಷ್ಟು ಖಚಿತಗೊಳಿಸಿ ಬೆಳೆಸಿತು.

ಸಾಮವೇದವನ್ನು **"ಸಂಹಿತ"** ಅಥವಾ **"ಗಾನ"** ಎಂಬ ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ. ಗಾನಭಾಗವನ್ನು ಗ್ರಾಮಗೇಯ, ಅರಣ್ಯಗೇಯ ಮತ್ತು ಊಹ ಮತ್ತು ಊಹ್ಯಗಾನ ಎಂದು ವಿಂಗಡಿಸಿದ್ದಾರೆ.

ಸಾಮವೇದವನ್ನು ಯಜ್ಞ-ಯಾಗಾದಿಗಳಲ್ಲಿ ವೀಣೆಯೊಂದಿಗೆ ಗಾಯನ ಮಾಡುತ್ತಿದ್ದರು. ಒಂದೊಂದು ಭಾಗವನ್ನು ಗೊತ್ತಾದ ಉದ್ಗಾತರೇ ಹಾಡುತ್ತಿದ್ದರು. ಛಾಂದೋಗ್ಯ ಉಪನಿಷತ್ತಿನಲ್ಲಿ, ಸಾಮಗಾನದಲ್ಲಿ ತಾರಾ, ಉದ್ಗೀತಾ, ಪ್ರತಿಹಾರ, ಉಪದ್ರವ, ನಿಧಾನ, ಓಂಕಾರ,

ಹೀಂಕಾರ ಎಂಬ ಏಳು ಭಾಗಗಳನ್ನು ಹೇಳಿದೆ. ಆಸ್ಥಾಯಿ, ಉದ್ಗ್ರಾಹ, ಅಂತರ ಮತ್ತು ಆಭೋಗಗಳೆಂಬ 4 ಭಾಗಗಳಿಗೆ ಇವುಗಳನ್ನು ಹೋಲಿಸಬಹುದು.

ಸಾಮವೇದ ಗಾನದಲ್ಲಿ ಮೊದಲು ಮೂರೇ ಸ್ವರಗಳಿದ್ದವು. ಕಾಲಕ್ರಮದಲ್ಲಿ ಇವು ಐದು ಮತ್ತು ಏಳು ಸ್ವರಗಳಾದವು. ಸಾಮವೇದದ ಪಾರಿಭಾಷಿತ ಪದ, ಸ್ವರಗಳಿಗೆ "ಯಮಗ" ಗಳೆಂದು ಹೆಸರು. ಸಾಮಗಾನಕ್ಕೆ ಮಾರ್ಗಸಂಗೀತವೆಂದು ಹೆಸರಿದೆ. *ನಾರದೀಯ ಶಿಕ್ಷಾ ಎಂಬ ಗ್ರಂಥದಲ್ಲಿ ಹೇಳಿರುವಂತೆ ಇದರ ಮುಖ್ಯವಾದ ಸ್ವರಗಳು ಏಳು.

ಸಾಮವೇದದ "ಸ್ವರಸಪ್ತಕ" ಕರ್ನಾಟಕ ಸಂಗೀತದ ಖರಹರಪ್ರಿಯ ಸ್ವರಸಪ್ತಕವನ್ನು ಹೋಲುತ್ತದೆ ಎಂದು ವಿದ್ವಾಂಸರ ಅಭಿಪ್ರಾಯ. ಈ ಸ್ವರಗಳು ಕಾಲಕ್ರಮದಲ್ಲಿ ಆರೋಹಣ ಕ್ರಮಕ್ಕೆ ಬದಲಾವಣೆಯಾಯಿತು.

ಸಾಮಾಗಾನದಿಂದ ಮಾರ್ಗ ಅಥವಾ ಗಾಂಧರ್ವವೆಂಬ ಹಾಡುಗಳು ಉಂಟಾದವು. ಇವೇ ಜಾತಿಗಳು. ಇವುಗಳಿಂದ ಮುಂದೆ ರಾಗಗಳಿಗೆ ದಾರಿಯಾಯಿತು.

ಪರಮಾತ್ಮನ ಸ್ವರೂಪವಾದ ಶ್ರೋತ್ರಾನಂದ ಮತ್ತು ಆತ್ಮಾನಂದಕ್ಕಾಗಿ ರಚಿತವಾದ ನಾದಗಳ ರಂಜನೀಯ ಪ್ರಬಂಧಗಳಿಂದ ಸಂಭವಿಸಿದ ವಿದ್ಯೆಯೇ "ಸಂಗೀತಶಾಸ್ತ್ರ." ಉಪನಿಷತ್ತುಗಳು ಸಾಮಾವೇದದ ಪ್ರಶಂಸೆ ಮಾಡಿರುವುದು ಕಂಡು ಬರುತ್ತದೆ ಸಂಗೀತದಲ್ಲಿಯ ಗೀತಾ, ವಾದ್ಯ ಹಾಗೂ ನೃತ್ಯಗಳಿಂದ ಪ್ರಾಪ್ತವಾಗುವ ರಸಾನಂದವು ಪರಮಾನಂದಗಳಿಗೆ ಅಥವಾ ಬ್ರಹ್ಮಾನಂದಗಳಿಗೆ ಮೂಲ ಎಂದು ಉಪನಿಷತ್ತುಗಳು ಭಾವಿಸಿವೆ. ಈ ಕಾಲದಲ್ಲಿ ಸಂಗೀತವು ಬ್ರಹ್ಮಾನಂದ ಸ್ವರೂಪವೆಂದು ಸಂಗೀತಕಾರರು ಆನಂದವನ್ನು ಭೋಗಿಸುವರೆಂದು ಇವು ತಿಳಿಸುತ್ತದೆ (ಉಲ್ಲೇಖ ಪ್ರೊಫೆಸರ್ ಬಿ.ಸಿ ಪಾಠಕ್ ಪೂರ್ವೋಕ್ತ ಪುಟ 28)

ಸಂಗೀತದ ಮೂರು ಮುಖಗಳು.

1 – ಗೀತ 2– ವಾದ್ಯ 3– ನೃತ್ಯ

ಗೀತ : ಗೀತ ವಾದ್ಯ ಮತ್ತು ನೃತ್ಯ ಮೂರು ಒಂದು ಪಂಗಡಕ್ಕೆ ಸೇರಲ್ಪಟ್ಟಿವೆ. ಇವುಗಳ ಸೇರುವಿಕೆ ಸಂಗೀತವೆಂದು ವ್ಯವಹರಿಸಲ್ಪಟ್ಟಿದೆ.

ಸಂಗೀತ ರತ್ನಾಕರದಲ್ಲಿ **"ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತ ಮುಚ್ಯತೇ"** ಎಂದು ಉಲ್ಲೇಖಿಸಿದ್ದಾರೆ.

ಗೀತ ವಾದ್ಯ ಸೇರುವಿಕೆ ಮಾತ್ರ ಸಂಗೀತವೆಂಬುದು ಕೆಲವರ ಅಭಿಪ್ರಾಯವಾಗಿದೆ.

ವಾದ್ಯ: ವಾದ್ಯದಲ್ಲಿ ನಾಲ್ಕು ವಿಧ.

1. ತತ ವಾದ್ಯ
2. ಸುಶಿರ ವಾದ್ಯ
3. ಚರ್ಮ ವಾದ್ಯ
4. ಘನ ವಾದ್ಯ

ನೃತ್ಯ:

ಲಯಬದ್ಧವಾದ ಸಂಗೀತಕ್ಕೆ ದೇಹವನ್ನು ಚಲಿಸುವ ಒಂದು ಕಲೆ. ಭಾರತೀಯ ನೃತ್ಯಕಲೆಯು ವರ್ಣವೈಭವ, ರೂಪಲಾವಣ್ಯ, ಸಂಗೀತ– ರಾಗ – ಲಯ ಪದ ವಿನ್ಯಾಸ ಮತ್ತು ಕವಿಯ ಭಾವನಾ ವಿಲಾಸದ ಸಂಗಮವಾಗಿದೆ.

ಸಾಮವೇದದಿಂದ ಬ್ರಹ್ಮನು ಸಂಗೀತವನ್ನು ಗ್ರಹಿಸಿ ಲೋಕೋಪಕಾರಕ್ಕಾಗಿ ಆದಿಯಲ್ಲಿ ಭರತಮುನಿಯ ಮೂಲಕ ಪ್ರಚಾರಪಡಿಸಿದನು. ಭರತಾಚಾರ್ಯನು ಸಂಗೀತಕ್ಕೆ ಮೊದಲನೆಯ **"ಪ್ರವರ್ತಕ"**ನೆಂದು ತಿಳಿದುಬರುವುದು ಸಾಮವೇದದಿಂದ ಸಂಗೀತ ಕಲಿಕೆಯು ಪ್ರಾರಂಭವಾಯಿತೆಂದು ಅನೇಕ ಶಾಸ್ತ್ರಗಳು ಸಾರುತ್ತಿವೆ.

ವೇದವೆಂದರೆ ಸತ್, ಚಿತ್, ಆನಂದ ಅಥವಾ ರಸ ಎಂದರ್ಥ, ಸಾಮವೇದವು ಬ್ರಹ್ಮ ವಸ್ತುವಿನ ತೇಜಸನ್ನು ಸೂಚಿಸುತ್ತದೆ. ಸಾ+ ಅಮ = ಸಾಮ, ಸ ಎಂದರೆ ವಾಕ್ ಮ ಎಂದರೆ ಪ್ರಾಣ. ಇವೆರಡಕ್ಕೂ ಏಕ ಮತ ಒದಗಿದಾಗ ಸಾಮವಾಗುತ್ತದೆ. ಆದುದರಿಂದ ಸಾಮವೇದವೆಂದರೆ ಪರಬ್ರಹ್ಮನ ಸಂಗೀತ. "ಸಾಮನಿಗಮಜ ಸುಧಾಮಯ ಗಾನ" ಎಂದು

ಸದ್ಗುರು ತ್ಯಾಗರಾಜ ಸ್ವಾಮಿ ಹಾಡಿದ್ದಾರೆ. ಆದುದರಿಂದ ಸಂಗೀತಶಾಸ್ತ್ರಜ್ಞರಿಗೂ ವೇದ ವಿದ್ವಾಂಸರಿಗೂ ಸಾಮವೇದವು ಮುಖ್ಯ ವೇದವಾಗಿದೆ.

ಮಾರ್ಗ ಸಂಗೀತ ಮತ್ತು ದೇಶಿ ಸಂಗೀತ.

ಸಂಗೀತವು ಮಾರ್ಗ ಮತ್ತು ದೇಶಿ ಎಂಬ ಭೇದಗಳನ್ನು ಹೊಂದಿದೆ.

ಮಾರ್ಗ ಸಂಗೀತ:

ಬ್ರಹ್ಮಸಂಕಲ್ಪದಿಂದ ಉಂಟಾದುದು ಪರಮಶಿವನ ಸಮ್ಮುಖದಲ್ಲಿ ಭರತ ಮುನಿಯಿಂದ ಹೇಳಲ್ಪಟ್ಟಿದ್ದು ಹಾಗೂ ಮೋಕ್ಷಪ್ರದವಾದದ್ದೂ ಆದ ಸಂಗೀತವು **"ಮಾರ್ಗ ಸಂಗೀತ"** ವೆನಿಸಿಕೊಳ್ಳುತ್ತದೆ. ರಾಮಾಯಣ ಮತ್ತು ಮಹಾಭಾರತದಂತಹ ಶ್ರೇಷ್ಠ ಕೃತಿಗಳು ರಾಗಗಳು, ವಾದ್ಯಗಳು, ತಾಳಗಳಂತಹ ಉಲ್ಲೇಖಗಳನ್ನು ಹೊಂದಿವೆ. ಲವಕುಶರಿಗೆ ಸಂಗೀತ ಶಿಕ್ಷಣವು ವಾಲ್ಮೀಕಿ ಆಶ್ರಮದಲ್ಲಿ ಪ್ರಾಪ್ತವಾಯಿತು ಎಂದೂ ಶ್ರೀರಾಮಚಂದ್ರನ ಹೇಳಿಕೆಯ ಮೇರೆಗೆ ಅವರು ರಾಮಾಯಣವನ್ನು ಮಾರ್ಗ ಸಂಗೀತದ ಶೈಲಿಯಲ್ಲಿ ಪ್ರಸ್ತುತಪಡಿಸಿದರು.

ದೇಶಿ ಸಂಗೀತ:

ಆಯಾ ದೇಶಗಳಲ್ಲಿ ಜನರಂಜನೆಗಾಗಿ ಮಾಡಲ್ಪಡುವಂತಹ ಗಾನ, ವಾದ್ಯ, ಸಂಗೀತ ಮತ್ತು ನಾಟ್ಯವು **"ದೇಶಿ ಸಂಗೀತ"**ವೆನಿಸಿಕೊಳ್ಳುತ್ತದೆ. ದೇಶಿ ಸಂಗೀತದ ಪ್ರೇರಣೆ ಪ್ರಭಾವಗಳನ್ನು ಮಾರ್ಗ ಸಂಗೀತವು ಕಲಾಪ್ರಕಾರವಾಗಿ ಉಳಿಸಿಕೊಳ್ಳಲು ಚೆನ್ನಾಗಿಯೇ ಬಳಸಿಕೊಂಡಿತು.

ಸಂಗೀತದ ಬೆಳವಣಿಗೆ

ಹನ್ನೊಂದನೆಯ ಶತಮಾನದಲ್ಲಿ **"ಸಂಗೀತಮಕರಂದ"** ಗ್ರಂಥದ ಲೇಖಕ ನಾರದನು ವಿವಿಧ ರಾಗ ವರ್ಗೀಕರಣಗಳನ್ನು ಉಲ್ಲೇಖಿಸಿದ್ದಾನೆ.

12ನೇ ಶತಮಾನದಲ್ಲಿ ಶಿವಶರಣರು ರಚಿಸಿದ ಅನೇಕ ವಚನಗಳಲ್ಲಿನ ಸಂಗೀತಾತ್ಮಕ ಗುಣಗಳನ್ನು ಅಭ್ಯಾಸಿಸಿದಾಗ, ಶರಣರು ವಚನಗಳಲ್ಲಿ ಆಧ್ಯಾತ್ಮಿಕ ತತ್ವಗಳನ್ನು ವಿವರಿಸುವಾಗ ಸಂಗೀತ ಮಾಧ್ಯಮವನ್ನು ಅನುಸರಿಸಿರುವುದು ಕಂಡು ಬರುತ್ತದೆ. ಅಷ್ಟೇ ಅಲ್ಲದೆ ಆಧ್ಯಾತ್ಮ ತತ್ವಗಳ ವಿಶ್ಲೇಷಣೆಯನ್ನು, ಸಂಗೀತದ ಶಬ್ದಗಳಲ್ಲಿ ಅಡಕವಾಗಿರುವ ಅರ್ಥದ ಸಹಾಯದಿಂದ

ಮಾಡಿರುವುದು ಕಂಡು ಬರುತ್ತದೆ. ರಾಗ ತಾಳ,ಸ್ವರ ನಾದಗಳ ಜೊತೆಗೆ ವಾದ್ಯಗಳು ಹಾಗೂ ಅವುಗಳ ವರ್ಗೀಕರಣ ಕುರಿತ ಅಸಂಖ್ಯಾತ ಉಲ್ಲೇಖಗಳಿವೆ. **"ಆಧ್ಯಾತ್ಮವನ್ನು, ಚಿಂತನೆಯನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಿಸಲು ಯುವ ಶರಣರು ಸಂಗೀತದ ಪಾರಿಭಾಷಿಕ ಶಬ್ದಗಳನ್ನು ಪ್ರತಿಮೆಗಳಾಗಿ ಬಳಸಿದ್ದಾರೆ".**

ಉದಾಹರಣೆ "ಹುಟ್ಟು ಮದ್ದಳೆಯ ಕಟ್ಟಿದ ನಡೆವಾತ, ತಾಳವನ್ನೊತ್ತಿದ ಬಿಡುವಾತ , ಶೃತಿಯನ್ನೆತ್ತಿದ ತ ತಾ ತಿಥಿ ಎಂಬಾಟ ಇತ್ತಲೆ ಉಳಿಯಿತು" ಎನ್ನುವ ಬಹುರೂಪಿ ಚೌಡಯ್ಯರ ವಚನ ಸಂಗೀತ ಮತ್ತು ಆಧ್ಯಾತ್ಮ ಎರಡನ್ನು ನಿರೂಪಿಸುತ್ತವೆ.

ಸಾಮವೇದದಿಂದ ತನ್ನ ಮೂಲವನ್ನು ಹೊಂದಿದ್ದ ಭಾರತೀಯ ಸಂಗೀತವು 13ನೇ ಶತಮಾನದ CE ವರೆಗೆ ಇಡೀ ದೇಶದಲ್ಲಿ ಒಂದು ಸಂಗೀತ ವ್ಯವಸ್ಥೆಯಾಗಿ ಚಾಲ್ತಿಯಲ್ಲಿತ್ತು. ಭಾರತದ ಉತ್ತರ ಭಾಗಗಳಲ್ಲಿ ಇಸ್ಲಾಮಿಕ್ ಆಳ್ವಿಕೆಯ ಆರಂಭವು ರಾಜಕೀಯ ರಂಗದ ಮೇಲೆ ಪ್ರಭಾವ ಬೀರಿತು ಮಾತ್ರವಲ್ಲದೆ ಸಾಂಸ್ಕೃತಿಕ ವಿನಿಮಯಕ್ಕೂ ಕಾರಣವಾಯಿತು. ದೇಶದ ಉತ್ತರ ಭಾಗದಲ್ಲಿ ಪರ್ಷಿಯನ್ ಸಂಗೀತದ ಪ್ರಭಾವದಿಂದ, ಭಾರತೀಯ ಸಂಗೀತವು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಸಂಗೀತವಾಗಿ ವಿಭಜಿಸಲ್ಪಟ್ಟಿತು.

13ನೇಯ ಶತಮಾನದಲ್ಲಿ ಸಾರಂಗದೇವನು ಬರೆದ ಗ್ರಂಥ **"ಸಂಗೀತ ರತ್ನಾಕರ"ವು** ಒಂದು ವಿಶಿಷ್ಟ ಸಂಗೀತ ಶಾಸ್ತ್ರ ಗ್ರಂಥವಾಗಿದೆ. ಈ ಗ್ರಂಥವು ರಾಗಗಳಂತಹ ಸಂಗೀತದ ಬಹುತೇಕ ಎಲ್ಲಾ ಅಂಶಗಳೊಂದಿಗೆ ವ್ಯವಹರಿಸುತ್ತದೆ. ಸ್ವರ, ರಾಗ, ಪ್ರಕೀರ್ಣ, ತಾಳ, ನೃತ್ಯಾದಿಗಳಾಧರಿಸಿ 7 ಅಧ್ಯಾಯಗಳಾಗಿ ವಿಭಜಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ನಾದ, ಶ್ರುತಿ, ಸ್ವರ, ಗ್ರಾಮ, ಮೂರ್ಚನ ಜಾತಿಗಳು ಮುಂತಾದ ವಿಷಯಗಳನ್ನು ವಿಸ್ತಾರವಾಗಿ ವರ್ಣಿಸಲಾಗಿದೆ.

"ತಾಳಗಳು, ರಸಗಳು (ಸತ್ವ), ಸಂಗೀತ ಸಂಯೋಜನೆಯ ರೂಪಗಳು (ಪ್ರಬಂಧಗಳು) , ವಾದ್ಯಗಳು ಹಾಗೂ ಅದರ ಅಭ್ಯಾಸ ಮತ್ತು ಪ್ರರ್ದಶನಗಳು,ಭೌತಶಾಸ್ತ್ರ, ಶರೀರಶಾಸ್ತ್ರ ಮತ್ತು ಸಂಗೀತದ ಮನೋವಿಜ್ಞಾನ " ಇವುಗಳನ್ನು ವಿವರಿಸುತ್ತವೆ.

ಈ ಗ್ರಂಥವು ಪ್ರಸ್ತುತ ಸಂಗೀತದ ವ್ಯವಸ್ಥೆಗೆ ಮಾರ್ಗದರ್ಶಿಯಾಗಿದೆ. ಇವುಗಳಲ್ಲದೆ ಕನ್ನಡದ ಚಾರುಮತಿ *ವಿದ್ಯಾರಣ್ಯರ ಸಂಗೀತಸಾರ, *ಗೋವಿಂದ ದೀಕ್ಷಿತರ ಸಂಗೀತ ಸುಧಾ,* *ವೆಂಕಟಮಖಿಯ ಚತುರ್ದಂಡಿ ಪ್ರಕಾಶಿಕೆ* ಕೃಷ್ಣ ಲೀಲಾ ತರಂಗಿಣಿ ಗಾನರಸ ಪ್ರವಾಹವು ಮುಂದಿನ ಭಕ್ತಿಯುಗದಲ್ಲಿ ಸ್ವಚ್ಛಂದವಾಗಿ ಹರಿಯಿತು.

*"ಗೀತ ಗೋವಿಂದ" 1100 CE:- ಗೀತ ಗೋವಿಂದನ ಹಾಡುಗಳನ್ನು **"ಪ್ರಬಂಧ ಗೀತೆ"** ಎಂದು ಕರೆಯಲಾಗುತ್ತದೆ. ಏಕೆಂದರೆ ಅವು ಸಾಹಿತ್ಯ, ರಾಗ, ಧಾತು, ಅಂಗ,ಮೂರ್ಚನ, ರಸ ಮತ್ತು ಭಾವಗಳಿಂದ ನಿರೂಪಿಸಲ್ಪಟ್ಟಿದೆ.

15ನೇ ಶತಮಾನದಲ್ಲಿ ಹರಿದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಾಗ ಪೂರ್ಣವಾಗಿ ಹಾಡಲು ಬರುವಂತೆ ರಚಿಸಿ ಜನಸಾಮಾನ್ಯರಿಗೆ ಸರಳವಾಗಿ, ಸುಲಭವಾಗಿ ಆಧ್ಯಾತ್ಮಿಕ ತತ್ವಗಳನ್ನು ತಿಳಿಯುವಂತೆ ಮಾಡಿದರು. ಸಂಗೀತದ ಮೌಲ್ಯ ಅರಿತು ಅದನ್ನೇ ತತ್ವ ಪ್ರಚಾರಕ್ಕೆ, ಸಾಹಿತ್ಯ ನಿರ್ಮಾಣಕ್ಕೆ ಮಾಧ್ಯಮವಾಗಿ ಬಳಸಿದರು. "ಗಾನದಿಂದಲೇ ದೈವ ಸಾಕ್ಷಾತ್ಕಾರ ಸಾಧ್ಯ" ವೆಂಬ ಸುಲಭೋಪಾಯವನ್ನು **ಶ್ರೀಪಾದರಾಜರು** ತೋರಿಸಿಕೊಟ್ಟರು.

ಸುಳಾದಿ, ಕೀರ್ತನೆ, ವೃತ್ತನಾಮ, ಉಗಾಭೋಗಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದು ಹರಿದಾಸರುಗಳಿಗೆ ಸ್ಫೂರ್ತಿದಾಯಕರಾದರು.

ಹರಿದಾಸರು ಜನಪ್ರಿಯವಾಗಿದ್ದ ಜಾನಪದ ಸಂಗೀತದ ದಾಟಿಗಳನ್ನು ಬಳಸಿಕೊಂಡು ತ್ರಿಪದಿ, ಷಟ್ಪದಿ ಮುಂತಾದ ಸಾಂಗತ್ಯದ ಲಯಗಳನ್ನು ಉಪಯೋಗಿಸಿಕೊಂಡು ಹಾಡುಗಳನ್ನು ರಚಿಸಿದರು. **"ಪುರಂದರದಾಸರು ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹರು"** ಎಂದು ಹೆಸರಾದವರು. ಕೀರ್ತನೆಗಳನ್ನು ಮನೆಮನೆಗಳಿಗೆ ತಲುಪಿಸಿದ ಕೀರ್ತಿ ಪುರಂದರ–ಕನಕದಾಸರಿಗೆ ಸಲ್ಲುತ್ತದೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಬಗೆಯ ರತ್ನತ್ರಯರಾದ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶಾಮಶಾಸ್ತ್ರಿಗಳಿಗೆ ಭದ್ರ ತಳಪಾಯವನ್ನು ಹಾಕಿಕೊಟ್ಟವರು ಪುರಂದರದಾಸರು. ಹೃದಯ ಮತ್ತು ಆತ್ಮಗಳ ಸಮ್ಮಿಲನವಾಗಿದ್ದ, ನಾದ ಪ್ರಧಾನವಾಗಿದ್ದ ಸಂಗೀತಕ್ಕೆ ಜಾನಪದ ಮಟ್ಟುಗಳಲ್ಲಿ ರಾಗಗಳನ್ನು ಅಳವಡಿಸಿದರು. ಸರಳೆ , ಜಂಟಿ, ಅಲಂಕಾರ ಮತ್ತು ಪಿಳ್ಳಾರಿ ಗೀತೆ ಮುಂತಾದವುಗಳನ್ನು ಪುರಂದರದಾಸರು

ರಚಿಸಿದರು. ಇವರು ಮಾಯಮಾಳವಗೌಳ ರಾಗವನ್ನು ರಚಿಸಿ 72 ಮೇಳಕರ್ತ ರಾಗಗಳ ಪದ್ಧತಿ ರೂಪುಗೊಳ್ಳಲು ಪ್ರೇರಣೆ ನೀಡಿದರು.

ಲಕ್ಷ್ಯ ಮತ್ತು ಲಕ್ಷಣ ಹೆಣೆದುಕೊಂಡಿರುವ ವಿಕಸನವು ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಅದರ ವಿಶಿಷ್ಠ ಗುರುತನ್ನು ನೀಡಿದೆ. ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಸಂಗೀತದ ವ್ಯಾಕರಣ ಮತ್ತು ನಿಯಮಗಳ ಕುರಿತಾದ ಗ್ರಂಥಗಳನ್ನು ಲಕ್ಷಣ ಗ್ರಂಥಗಳು ಎಂದು ಕರೆಯಲಾಗುತ್ತದೆ, ಅವುಗಳು ಹಲವು ಶತಮಾನಗಳಿಂದ ವಿಕಸನಗೊಂಡಿವೆ ಮತ್ತು ಅಭಿವೃದ್ಧಿಗೊಂಡಿವೆ. ಲಕ್ಷಣ ಗ್ರಂಥಗಳು ಮುಖ್ಯವಾಗಿ ಲಕ್ಷಣಗಳೊಂದಿಗೆ ವ್ಯವಹರಿಸುತ್ತವೆ ಆದಾಗ್ಯೂ ಅವುಗಳು ಲಕ್ಷ್ಯದ ಬಗ್ಗೆಯೂ ಮಾತನಾಡುತ್ತವೆ.

---

* **ಸಂಗೀತ ಮತ್ತು ನೃತ್ಯ ಕಲೆಗಳು ಮನುಷ್ಯನ ಮಾತಿಗಿಂತಲೂ ಪ್ರಾಚೀನವಾದವು. ಡಾಕ್ಟರ್ ಹೆಚ್.ತಿಪ್ಪೇರುದ್ರಸ್ವಾಮಿ ಕರ್ನಾಟಕ ಸಂಸ್ಕೃತಿ ಸಮೀಕ್ಷೆ.**
* **ಆಸ್ಕರ್ ಹ್ಯಾಮರ್ ಸ್ಟೈನ್:**

  https://yourstory.com/author/madanmohan
* **"ನಾರದೀಯ ಶಿಕ್ಷಾ"** ಉಪನಿಷತ್ತುಗಳ ಕಾಲದಲ್ಲಿ ಶಿಕ್ಷಾ ಗ್ರಂಥಗಳು ರಚನೆಯಾದದ್ದು ಎಂದು ಅಭಿಪ್ರಾಯವಿದೆ. ಶಿಕ್ಷ ಗ್ರಂಥಗಳಲ್ಲಿಯೂ ಸಹ ಸಂಗೀತದ ಉತ್ಕೃಷ್ಟ ವರ್ಣನೆ, ಅದಕ್ಕೆ ಸಂಬಂಧಿಸಿದ ನಿರೂಪಣೆ ದೊರೆಯುತ್ತದೆ ಮಂತ್ರ, ಸಾಮ, ನಾದ ಮತ್ತು ಕಾಲದ ಬಗ್ಗೆಯೂ ವಿವರ ಚರ್ಚೆಗಳಿವೆ.
* ಸುರಭಿ ಸಿಂಚನ– ಸಂಪುಟ 16 – ಸಂಚಿಕೆ 2 – ಜುಲೈ ಸೆಪ್ಟೆಂಬರ್ 2021, ಸಂಗೀತಾತ್ಮಕ ತ್ರೈಮಾಸಿಕ, ಡಾ॥ ಸುಕನ್ಯಾ ಪ್ರಭಾಕರ್ – ವಚನದಲ್ಲಿ ನಾದಾಮೃತ ತುಂಬಿ, ಡಾ॥ ಶೈಲಜಾ ವೇಣುಗೋಪಾಲ್
* ವಿದ್ಯಾರಣ್ಯರ ಸಂಗೀತಸಾರ:– 1300 CE
* ಚತುರ್ದಂಡಿ ಪ್ರಕಾಶಿಕೆ : 1600 CE
* ಕೃಷ್ಣ ಲೀಲಾ ತರಂಗಿಣಿ : 1600 CE

  ಸಂಗೀತಶಾಸ್ತ್ರಕ್ಕೆ ಬೆಳಕು ನೀಡುವ ಮಹಾ ಗ್ರಂಥಗಳು.

ಅಧ್ಯಾಯ ಮೂರು

ಕರ್ನಾಟಕ ಸಂಗೀತದ ವೈಶಿಷ್ಟ್ಯ

ಭಾರತೀಯ ಸಂಗೀತಕ್ಕೆ ಇಂದು ಹೆಚ್ಚು ಕಡಿಮೆ ನಿರ್ದಿಷ್ಟವೂ ಅನನ್ಯವಾದ ರೂಪವು ಸಿದ್ಧಿಸಿದೆ. ಇದು ಮೂರು ಸ್ತರಗಳಲ್ಲಿ ಗೋಚರಿಸುತ್ತದೆ. ಮೊದಲನೆಯ ಸ್ತರದಲ್ಲಿ ಇದು ವೇದೋಪನಿಷತ್ತುಗಳಿಂದಲೂ, ದೈವದತ್ತವೆಂಬ ನಂಬಿಕೆಯಿಂದಲೂ ಆಯಿತು. ಚತುರ್ವಿಧ ಪುರುಷಾರ್ಥಗಳ ಸಾಧನೆಯೂ ಆಯಿತು. ನಮ್ಮ ಸಂಗೀತವು ಆರಾಧನೆಯ ಮಾರ್ಗ. ದೇವರು ಅದರ ಕೇಂದ್ರ. ದೇವರು ಇರದ, ಭಕ್ತಿ ಇರದ ಯಾವ ಹಾಡೂ ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ಸ್ವೀಕಾರವಾಗುವುದಿಲ್ಲ. ಅಂತೆಯೇ ಮನುಕುಲದ ಬಗೆಗೆ ಅನುಕಂಪ, ಪ್ರೇಮಗಳು ಎದ್ದು ಕಾಣುತ್ತದೆ. ಮಬ್ಬು ಮುಸುಕಿನ ಮೂಲೆ ಮೂಲೆಗಳಲೂ ಅದು ಬೆಳಗಿ ಬದುಕಿನ ಅರ್ಥಪೂರ್ಣತೆಯನ್ನು, ಸಿದ್ಧಿಯನ್ನು ತಂದುಕೊಡುತ್ತದೆ. ರಾಗದಂತಹ ಅಮೂರ್ತೀಯ ಗೇಯಪ್ರಾಕಾರಗಳಲ್ಲಿ ಭಾರತೀಯರು ದೇವತಾ ಸ್ವರೂಪವನ್ನು ಕಂಡರು. ಸಂಗೀತದ ಮೂಲಭೂತ ದ್ರವ್ಯಗಳ ಕಲ್ಪನೆಗಳನ್ನು ಮಾಡಿಕೊಂಡರು. ಅವುಗಳಿಗೆ ದಶದಿಕ್ಕುಗಳಲ್ಲಿ ಹೊಸ ಆಯಾಮಗಳನ್ನು ಕಲ್ಪಿಸಿದರು.

ಕರ್ನಾಟಕ ಸಂಗೀತವು ಅನೇಕ ವೈಶಿಷ್ಟ್ಯಗಳನ್ನು ಬೆಳೆಸಿಕೊಂಡಿದೆ. ಇದು ಪಾಶ್ಚಿಮಾತ್ಯ ಸಂಗೀತ ಪದ್ಧತಿಯಂತೆ ಏಕಸ್ವರ ಶ್ರೇಣಿಯಾಗಿರದೆ, ಸಪ್ತಸ್ವರಗಳು ಒಟ್ಟಿಗೆ ಇರುವ ಸಂಗೀತ ಪದ್ಧತಿಯಾಗಿದೆ. ಅಲ್ಲದೆ ಈ ಸಪ್ತಸ್ವರಗಳು 12 ಸ್ಥಾನಗಳನ್ನು, ಅವುಗಳಲ್ಲಿ 22 ಶೃತಿಗಳನ್ನು ಸಾಕ್ಷಾತ್ಕರಿಸಿಕೊಂಡಿವೆ. ಪ್ರಯೋಗಾತ್ಮಕ ಸ್ತರದಲ್ಲಿ ಭಾರತೀಯ ಸಂಗೀತದಲ್ಲಿ ರಾಗತಾಳ ಪ್ರಬಂಧಗಳು ಪ್ರಮೇಯಗಳು ಮುಖ್ಯವಾದುದು. ಇವುಗಳಲ್ಲಿ ರಾಗತಾಳಗಳ ಕಲ್ಪನೆಯು ಇಡೀ ವಿಶ್ವದಲ್ಲಿಯೇ ಅಭೂತಪೂರ್ವವಾದುದು. ಕೆಲವು ಸ್ವರಗಳನ್ನು ಒಂದು ನಿರ್ದಿಷ್ಟ ವ್ಯವಸ್ಥೆಗೆ ಒಳಪಡಿಸಿ ಅದರಿಂದ ಅಸಂಖ್ಯಾತವಾದ, ರಂಜಕವಾದ ಸ್ವರ ಸಂದರ್ಭಗಳನ್ನು ರಚಿಸುವುದಕ್ಕೆ **"ರಾಗ"**ವೆಂದು ಹೆಸರು.

ಪ್ರತಿಯೊಂದು ರಾಗಕ್ಕೂ ಅದರದೇ ಆದ ಸ್ವತಂತ್ರ ವ್ಯಕ್ತಿತ್ವ ಇದೆ. ಆದರೆ ಒಂದು ಅಭಿವ್ಯಕ್ತಿಯು ಇನ್ನೊಂದರಂತೆ ಇರದಿರುವುದು ಅದರ ವೈಶಿಷ್ಟ್ಯ ಕಲೆಗಾರನಿಗೆ ಒಂದೇ ರಾಗವು ಬೇರೆಬೇರೆಯ ರೀತಿಯಲ್ಲಿ ವ್ಯಕ್ತವಾಗುತ್ತದೆ. ಒಬ್ಬನೇ ಕಲಾವಿದನು ಒಂದೇ ರಾಗವನ್ನು ಬೇರೆಬೇರೆ ಸಮಯದಲ್ಲಿ ಹಾಡಿದಾಗ ಅದು ವಿಭಿನ್ನತೆ ಪಡೆದಿರುತ್ತದೆ. ಮೂಲಭೂತವಾದ ಸ್ವರ, ದ್ರವ್ಯದ ಭೌತಿಕ ಹಂದರದಲ್ಲಿ ಸೌಂದರ್ಯ ಸಾಕ್ಷಾತ್ಕಾರದ ಆಂತರಿಕ ಆಯಗಳಿಗೆ ಅನುಸಾರವಾಗಿ ಮನೋಧರ್ಮಕ್ಕೆ, ಕಲ್ಪನೆಯ ಗುಣಕ್ಕೆ, ಅನುಗುಣವಾಗಿ ಆಯಾ ರಾಗದ ನಾದಪ್ರತಿಮೆಯನ್ನು, ವಾದಕರು ರೂಪಿಸುತ್ತಾರೆ.

ಇದು ನಮ್ಮ ಸಂಗೀತದ ಪ್ರಧಾನ ವೈಶಿಷ್ಟ್ಯ. ಗಮಕವೆಂಬ ಸ್ವರ ಅಲಂಕರಣ ತಂತ್ರವು ಭಾರತೀಯ ಸಂಗೀತದಲ್ಲಿ ವಿಶಿಷ್ಟವಾದುದು. ಅದು ನಮ್ಮ ಸಂಗೀತ ಪದ್ಧತಿಯ ಜೀವಾಳ. ಕಾಲದ ಅವಧಿಗಳುಳ್ಳ ಪುನಃ ಆವರ್ತಿತವಾದ ರೂಪವನ್ನು ಅಳೆಯುವ ಸಾಧನವು **ತಾ**ಳ. ಭಾರತೀಯ ಸಂಗೀತದಲ್ಲಿ ತಾಳಗಳು ಬಹುಸಂಖ್ಯಾತವಾಗಿದೆ.

ನಮ್ಮ ಸಂಗೀತವು ಹಲವು ಫಲಪ್ರದ ಕಲ್ಪನೆ ಪ್ರಮೇಯಗಳನ್ನು ಸೃಷ್ಟಿಸಿಕೊಂಡಿವೆ. ಇನ್ನೊಂದು ವೈಶಿಷ್ಟ್ಯ ಎಂದರೆ ಹಾಡುಗಳನ್ನು ರಚಿಸುವ ವಾಗ್ಗೇಯಕಾರನಿಗೂ ಅವುಗಳನ್ನು ಹಾಡಿ ಅಥವಾ ನುಡಿಸುವ ಕಲಾವಿದನಿಗೂ ಇರುವ ಸಂಬಂಧ. ಇದು ಜಗತ್ತಿನಲ್ಲೆಲ್ಲೂ ಕಾಣಸಿಗದು. ಸಂಗೀತದಲ್ಲಿ ಪ್ರತಿಯೊಬ್ಬ ಗಾಯಕ, ವಾದಕನೂ ಒಬ್ಬ ಕಲ್ಪನಾಚತುರನೇ ಸರಿ. ಆಲಾಪನೆ, ಕಲ್ಪನಾಸ್ವರಗಳು, ನೆರವಲ್, ತಾನ ಮೊದಲಾದವುಗಳ ಆಶುಸೃಷ್ಟಿಯ ಪ್ರತಿಭೆಯೂ ಅವನದ್ದೇ.

ವಾಗ್ಗೇಯಕಾರನು ಒದಗಿಸಿ ಕೊಡುವ ತಳಹದಿಯ ಮೇಲೆ ಸುಂದರವಾದ ಸೌಧಗಳನ್ನು ರಚಿಸುವವರು ಕಲಾವಿದರು. ರಾಗಗಳನ್ನು ಅವುಗಳ ರಸಾಭಿವ್ಯಕ್ತಿಶಕ್ತಿ, ಸ್ವತಂತ್ರಾಭಿವ್ಯಕ್ತಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಜನಕ, ಜನ್ಯ, ರಾಗಾಂಗ, ಭಾಷಾಂಗ, ಉಪಾಂಗ ರೀತಿಯಲ್ಲಿ ವಿಂಗಡಿಸುವುದು ನಮ್ಮ ಸಂಗೀತದಲ್ಲಿ ಮಾತ್ರ ಇರುವ ವಿಶೇಷ. ವಾಗ್ಗೇಯಕಾರನು ಸಾಹಿತ್ಯದಲ್ಲಿರುವ ಭಾವವನ್ನು ಎತ್ತಿ ತೋರಿಸುವಂತೆ ರಾಗ ಸಂಯೋಜನೆ, ಲಯ, ಗತಿ ಎಲ್ಲವನ್ನು ರೂಪಿಸಿಕೊಡುವನು.

ಹೆಸರಾಂತ ಸಂಗೀತಶಾಸ್ತ್ರಜ್ಞ ಹಾಗೂ ವಿದ್ವಾಂಸರಾದ ಪ್ರೊಫೆಸರ್ ಪಿ.ಸಾಂಬಮೂರ್ತಿ ಅವರ ಪುಸ್ತಕಗಳು, ಕವನಗಳ ಸಾಲು ಹಾಗೂ ಉಲ್ಲೇಖನಗಳು ಕರ್ನಾಟಕ ಸಂಗೀತದ ಸತ್ವವನ್ನು ಓದುಗರಿಗೆ ತಲುಪಿಸುತ್ತದೆ.

ಈ ಕರ್ನಾಟಕದ ಸಂಗೀತದ ಮೂಲ ತತ್ವ ಮನೋಧರ್ಮ ಸಂಗೀತವಾಗಿದೆ. ರಾಗಾಲಾಪನೆ, ತಾನ, ಪಲ್ಲವಿ ನೆರವೆಲ್ ಮತ್ತು ಕಲ್ಪನಾ ಸ್ವರಗಳಿರುವುದಲ್ಲದೆ, ವಿವಿಧ ಸಂಗೀತ ವಿಧಾನಗಳಿಂದ ಕೂಡಿದೆ. ದಕ್ಷಿಣ ಭಾರತದ ಸಂಗೀತ **"ಪುರಂದರದಾಸರ"** ಕೊಡುಗೆಗಳಿಂದ ಸಂಪ್ರದಾಯವಾಗಿ ಬೆಳೆದು **"ಕರ್ನಾಟಕ ಸಂಗೀತ"** ಎಂದೇ ಪ್ರಸಿದ್ಧವಾಗಿದೆ. ಸಂಗೀತ ಕೇವಲ ಕಿವಿಯನ್ನು ಮೆಚ್ಚಿಸಲಿಕ್ಕೆ, ಬುದ್ಧಿಶಕ್ತಿಗೆ, ರಸಿಕನಿಗೆ ಕಚಗುಳಿ ಇಡಲಿಕ್ಕೆ ಇರುವ ವಿನ್ಯಾಸವಾಗಿಲ್ಲ. ವ್ಯಕ್ತಿಯ ಅಂತಃಕರಣವನ್ನು ತಟ್ಟಿ ಆತ್ಮವನ್ನು ಉನ್ನತಿಗೇರಿಸಿ ಹೃದಯದೊಂದಿಗೆ ಸಂವಾದವನ್ನು ನಡೆಸಬಲ್ಲುದೆಂದು ಹೇಳಲಾಗುತ್ತದೆ.

ಅಧ್ಯಾಯ ನಾಲ್ಕು

ನಾದ-ಸ್ವರ-ಶ್ರುತಿ

ಭಾರತೀಯ ಸಂಗೀತಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಅದಕ್ಕೆ ತನ್ನದೇ ಆದ ಘನ ಪರಂಪರೆ ಇದೆ ಹಾಗೂ ಜಾಗತಿಕ ಸಂಗೀತದಲ್ಲಿ ವಿಶಿಷ್ಟ ಸ್ಥಾನವಿದೆ. ಸಂಗೀತವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಸಂಗೀತವನ್ನು ಭಾರತೀಯರು ಕೇವಲ ಒಂದು ಲಲಿತ ಕಲೆಯನ್ನಾಗಿ ಬೆಳೆಸದೆ ಅದನ್ನು ಜ್ಞಾನ ಶಿಸ್ತನ್ನಾಗಿ ಬೆಳೆಸಿದ್ದಾರೆ.

ಭಾರತೀಯರು ದೇವರನ್ನು "ನಾದಬ್ರಹ್ಮ" ಎಂದು ಕರೆದಿದ್ದಾರೆ. ಜಗತ್ತಿನಲ್ಲಿ ಎಲ್ಲವೂ ನಾದಮಯವಾಗಿದೆ. ನಾದವಿಲ್ಲದೆ ಗೀತವಿಲ್ಲ, ನಾದವಿಲ್ಲದೇ ಸ್ವರವಿಲ್ಲ. ಹಾಗೆಯೇ ನಾದವಿಲ್ಲದೆ ನೃತ್ಯವು ಇಲ್ಲ ಈ ಮೂರು ನಾದವನ್ನು ದೃಢವಾಗಿ ಹೊಂದಿದ ಜಗತ್ತು ನಾದಮಯವಾಗಿದೆ.

ಇಂಪಾದ ಧ್ವನಿಗೆ ನಾದವೆಂದು ಹೆಸರು. ನಾದವೇ ಆಧಾರ: 'ನ' ಕಾರವು ಪ್ರಾಣ, 'ದ' ಕಾರವು ವಾಯು. ಪ್ರಾಣಿಗಳು ಅನುಭವದಲ್ಲಿ ಪ್ರಾಣಾಗ್ನಿ ಸಂಯೋಗದಿಂದ ಉತ್ಪತ್ತಿಯಾಗುವುದು ನಾದ ಎಂದು ಹೇಳುವರು. ಹೀಗೆ ಪ್ರಣವದಲ್ಲಿ, ಆಧ್ಯಾತ್ಮಿಕದಲ್ಲಿ, **ಸ ರಿ ಗ ಮ ಪ ದ** ನಿ ಎಂಬ ಸಪ್ತಾಕ್ಷರದಿಂದ ಜನಿಸಿ ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ, ನಿಷಾಧಗಳು ಶೃತಿಸ್ಥಾನಗಳನ್ನು ಅನುಸರಿಸಿ ರಾಗೋತ್ಪತ್ತಿಯಾಗಿ ಅನೇಕ ರಾಗಗಳು ರಂಜಿಸುತ್ತಿವೆ.

ಛಾಂದೋಗ್ಯ ಉಪನಿಷತ್ತಿನಲ್ಲಿ ಯಾವುದು ಉದ್ಗೀಥವೋ ಅದೇ ಪ್ರಣವ, ಯಾವುದು ಪ್ರಣವವೋ ಅದೇ ಓಂಕಾರವು; ಅದೇ ಆದಿತ್ಯನೆಂದು ಹೇಳಿದೆ. ಪಂಚವಿಧ ಸಾಮ, ಸಪ್ತವಿಧ ಸಾಮಗಳ ಉಪಾಸನೆಯನ್ನು ಆದಿತ್ಯನಲ್ಲಿ ಅಧ್ಯಾಯ ಮಾಡುವ ವಿಧಾನ ಹೇಳುವಾಗ ಓಂಕಾರ ಪ್ರಸ್ತಾವ ಉದ್ಗೀಥ, ಉಪದ್ರವ ಮತ್ತು ನಿಧನ ಎಂಬ ಸಾಮ ಸಪ್ತಸ್ವರಗಳ ವರ್ಣನೆ ಕಂಡು ಬರುತ್ತದೆ. ಋಗ್ವೇದದಲ್ಲಿ ಸಪ್ತವಾಣಿ: ಎಂದು ಸಪ್ತಸ್ವರಗಳ ಉಲ್ಲೇಖವಿದೆ. ವಾಣಿ ಎಂಬುದು

ಯಜ್ಞ ಸಂಬಂಧವಾದ ಸಂಗೀತಕ್ಕೆ ಹೆಸರು ಸಪ್ತಮಿ ಎಂಬುದರಿಂದ ಸಪ್ತಸ್ವರಗಳು ಸೂಚಿತವಾಗಿದೆ.

ಪ್ರಣವನಾದ ಸಪ್ತಸ್ವರದಲ್ಲಿದೆ. ಆ ನಾದವು ವೇದದ ಸಹಾಯದಿಂದ ಪ್ರಾಣಾನಿಲ ಸಂಯೋಗ ಮಾಡಿ ಆತ್ಮ ಸಾಕ್ಷಾತ್ಕಾರ ಗೈದು ಜೀವನ್ಮುಕ್ತಿ ಹೊಂದಲು ಅನುಕೂಲವಾದ ಸಂಗೀತಕ್ಕೆ ಸುಲಭವಾದ ಮಾರ್ಗವಾಗಿರುತ್ತದೆ.

ನಾದವು ಆಹತ ಮತ್ತು ಅನಾಹುತ ಎಂಬ ಪ್ರಭೇದಗಳನ್ನು ಒಳಗೊಂಡಿದೆ. ಆಹತನಾದವು ಭವ ಭಂಜಕವಾದುದಲ್ಲದೆ ಗಾನೋತ್ಪತ್ತಿಕಾರಿಯಾಗಿ, ಶೃತಿ, ಸ್ವರ, ಗ್ರಾಮ, ಮೂರ್ಛಾನದಿಗಳಿಂದ ಜನರಲ್ಲಿ ರಂಜನೆಯನ್ನು ಉಂಟುಮಾಡುತ್ತದೆ. ಆರು ಯೋಗಾಧಾರ ಚಕ್ರಗಳಲ್ಲಿ ಮೊದಲನೆಯದಾದ ಮೂಲಾಧಾರ ಚಕ್ರದಲ್ಲಿ ಸೂಕ್ಷ್ಮಾಗ್ನಿ ಪ್ರೇರಣೆಯಿಂದ ಪ್ರಾಣ ವಾಯು, ನಾಭಿ, ಹೃದಯ ಕಂಠಗಳ ಮೂಲಕ ಅವಿರ್ಭವಿಸುವುದರಿಂದ ಉಂಟಾಗುತ್ತದೆ. ಈ ನಾದದಿಂದ ಪದ, ವಾಕ್ಯ, ಕಾವ್ಯ, ನಾಟಕ, ಅಲಂಕಾರ ಶಾಸ್ತ್ರವು ಮತ್ತು ಸ್ವರವರ್ಣ ಗ್ರಾಮಾಧ್ಯಾಲಂಕಾರಗಳು ಹುಟ್ಟುತ್ತವೆ.

ಅನಾಹತನಾದವು ರಂಜಕ ರಹಿತವಾದದ್ದರಿಂದ ಗುರು ಮುಖದಿಂದ ಉಪದೇಶಿಸಲ್ಪಟ್ಟು ಮುಕ್ತಿಪ್ರದವಾದ ಅಚಂಚಲ ಮನೋರಥದಿಂದ ಕೂಡಿದ ಮುನಿಗಳಿಂದ ಮಾತ್ರ ಸಾಧಿಸಲ್ಪಡುತ್ತದೆ.

ಸಂಗೀತದ ಸ್ವರಗಳು:

ಶಾಸ್ತ್ರೀಯ ಸಂಗೀತವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

1. ಪ್ರಾಚೀನ ಕಾಲದಿಂದ ಮಾತಂಗಮುನಿಯವರೆಗೆ.
2. ಮಧ್ಯಕಾಲ ಅಂದರೆ ಮಾತಂಗ ಮುನಿ ಇದ್ದ ಕಾಲದಿಂದ ವೆಂಕಟಮಖಿಯ ಕಾಲದವರೆಗೆ

3. ಪ್ರಸ್ತುತ ಕಾಲವನ್ನು ಶ್ರೀ.ತ್ಯಾಗರಾಜರಿಗೆ ಮುಂಚೆ ಮತ್ತು ನಂತರದ ಕಾಲವೆಂದು ಹೇಳಬಹುದು.

ಋಗ್ವೇದ ಕಾಲದಲ್ಲಿ ವೇದವನ್ನು ಒಂದೇ ಸ್ವರದಿಂದ ಹಾಡುತ್ತಿದ್ದರು. ಗಾಯನಕ್ಕೆ "ಏಕ ಸ್ವರ ಗಾಯನ"ವೆಂದು ಹೆಸರು ಇದಕ್ಕೆ "ಆರ್ಥಿಕಗಾಯನ"ವೆಂದು ಹೇಳುವರು. ತರುವಾಯ ಎರಡು ಸ್ವರಗಳಲ್ಲಿ ಗಾಯನ ಮಾಡುವುದನ್ನು **"ಗಾತಿಕ ಗಾಯನ"**ವೆಂದು, ಮೂರು ಸ್ವರಗಳಲ್ಲಿ ಗಾಯನ ಮಾಡುವುದನ್ನು **"ಸಾಮಿಕ ಗಾಯನ"**ವೆಂದು ನಾಲ್ಕು ಸ್ವರಗಳನ್ನು ಹಾಡಿದಾಗ "ಸ್ವರಾಂತರ"ವೆಂದು ಹೆಸರಿಟ್ಟು ಕರೆದರು. ಕ್ರಮೇಣ ಇದು ಅಭಿವೃದ್ಧಿ ಹೊಂದಿ ಸಾಮವೇದದಿಂದ ಸಪ್ತಸ್ವರಗಳಾದವು, ತರುವಾಯ ಭರತನು ಪರಿಶೀಲಿಸಿದ ಐದು ಸ್ವರಗಳ ಮೆಟ್ಟಲುಗಳು. ಆರು ಸ್ವರಗಳ ಮೆಟ್ಟಲುಗಳು ಅವುಗಳಿಗೆ ತಕ್ಕಂತೆ ಉಪಮೆಟ್ಟಲುಗಳು ಸೇರಿ ಭಾಷಾ, ವಿಭಾಷ, ಅಂತರ್ಭಾಷ ರಾಗಗಳಾದವು. ಭರತನ ಕಾಲದ ನಂತರ ಜಾತಿ ರಾಗಗಳು ಗ್ರಾಮ ರಾಗಗಳು ಎಂದು ಹೆಸರು ಬಂದಿದೆ.

ನಾರಧೀಯ ಶಿಕ್ಷಾದಲ್ಲಿ ಸ್ವರ, ಗ್ರಾಮ, ರಾಗ, ತಾನಗಳ ವರ್ಣನೆ ಇದೆ. ಈ ಗ್ರಂಥದಲ್ಲಿ ಪ್ರಾಣಿಗಳ ಧ್ವನಿಯ ಜೊತೆಗೆ ಸ್ವರಗಳ ಸಾಮರಸ್ಯವನ್ನು ಕುರಿತು ಹೇಳಲಾಗಿದೆ. ಮಯೂರ ಧ್ವನಿ-ಷಡ್ಜ, ಆಡಿನ ಧ್ವನಿ- ಗಾಂಧಾರ, ಕ್ರೌಂಚ ಪಕ್ಷಿಯ ಧ್ವನಿ- ಮಧ್ಯಮ- ಕೋಗಿಲೆಯ ಧ್ವನಿ- ಪಂಚಮ, ಕುದುರೆಯ ಧ್ವನಿ- ದೈವತ ಮತ್ತು ಆನೆಯ ಧ್ವನಿ- ನಿಷಾದ ಎಂದು ಹೇಳಲಾಗಿದೆ.

ಶಿಕ್ಷಾ ಗ್ರಂಥಗಳಲ್ಲಿ ಸಪ್ತ ಸ್ವರಗಳ ಉತ್ಪತ್ತಿಯ ಬಗೆಗೂ ಉಲ್ಲೇಖವಿದೆ. ಕಂಠದಿಂದ – ಷಡ್ಜ, ಶಿರದಿಂದ- ರಿಷಭ, ಮೂಗಿನಿಂದ- ಗಾಂಧಾರ, ಹೃದಯದಿಂದ- ಮಧ್ಯಮ, ಹೃದಯ ಶಿರ ಹಾಗೂ ಕಂಠದಿಂದ- ಪಂಚಮ, ಲಲಾಟದಿಂದ- ದೈವತ, ಹಾಗೂ ನಾಭಿಯಿಂದ- ನಿಷಾದ ಉತ್ಪತ್ತಿಯಾಗುತ್ತದೆ ಎಂದು ಹೇಳಲಾಗಿದೆ. ಉದಾತ್ತವು ನಿಷಾಧ, ಗಾಂಧಾರ ಸ್ವರಗಳನ್ನು ಅನುದಾತ್ತವು ರಿಷಭ ದೈವತಗಳನ್ನು ಸ್ವರಗಳನ್ನೂ ಷಡ್ಜ ಮಧ್ಯಮ ಪಂಚಮ ಸ್ವರಗಳನ್ನು ಹೊಂದಿದೆ ಎಂದು ವಿವರಿಸಿದ್ದಾನೆ.

ಸಂಗೀತ ಸ್ವರವು ಹೇಗೆ ಹುಟ್ಟಿದೆ ಎಂಬುದನ್ನು ಪರಿಶೀಲಿಸಿದರೆ ಇದು ಪರಬ್ರಹ್ಮ ಸ್ವರೂಪನಾದ ಓಂಕಾರದಿಂದ ಜನಿಸಿತೆಂದು ತಿಳಿದು ಬರುತ್ತದೆ. ಇದರಲ್ಲಿ ಓಂ ಎಂದರೆ ಅ– ಉ– ಮ ಎನ್ನುವ ಮೂರು ಅಕ್ಷರಗಳಿವೆ. ಇದರಲ್ಲಿ ಆಕಾರವು ಋಗ್ವೇದ, ಮ–ಕಾರವು ಸಾಮವೇದ, ಅ–ಕಾರವು ನಾದ, ಉ–ಕಾರವು ಬಿಂದು, ಮ–ಕಾರವು ಕಲೆ ಎನ್ನುತ್ತಾರೆ. ಹೀಗೆ ಓಂಕಾರ ರೂಪದಲ್ಲಿರುವ ಪ್ರಣವವೇ ಸಂಗೀತಕ್ಕೆ ನಿದರ್ಶನವಾಗಿದೆ.

ಒಟ್ಟಿನಲ್ಲಿ ಸಂಗೀತಶಾಸ್ತ್ರದ ಇತಿಹಾಸದಲ್ಲಿ ಸಾಮವೇದವು ಮೊಟ್ಟಮೊದಲ ಮೈಲಿಗಲ್ಲು. ಒಂದು ಸ್ಪಷ್ಟತೆ ದೊರೆತದ್ದು ಈ ಕಾಲದಲ್ಲಿಯೇ, ಇದು ಮುಂದಿನ ಸಂಗೀತದ ಸ್ವರೂಪವನ್ನು ಮತ್ತಷ್ಟು ಖಚಿತಗೊಳಿಸಿ ಬೆಳೆಸಿತು.

ವೆಂಕಟಮಖಿ ಕಾಲಕ್ಕೆ 72 ಮೇಳಕರ್ತಗಳು ಜನ್ಮ ತಾಳಿದವು. ಹೀಗೆ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಭಾರತದ ಸಂಸ್ಕೃತಿಯ ನಿರ್ವಿವಾದ ವೈಶಿಷ್ಟ್ಯ ಕಾಣುವುದು.

ಶ್ರುತಿ

"ಶ್ರುತಿರ್ಮಾತಾ ಲಯ:ಪಿತಾ" ಎಂದು ಶಾಸ್ತ್ರಕಾರರು ನುಡಿದಿದ್ದಾರೆ. ಕಿವಿಗೆ ಗೋಚರವಾಗುವ ಅತಿ ಸೂಕ್ಷ್ಮವಾದ ನಾದಕ್ಕೆ **"ಶೃತಿ"** ಎಂದು ಹೆಸರು, ಎರಡು ಸಮೀಪ ಸ್ವರಗಳ ಮಧ್ಯೆ ಇರುವ ನಾದದ ಅಂತರವನ್ನು **"ಶೃತಿ"** ಎಂದು ಕರೆಯುತ್ತರೆ. ಒಂದು ಆಧಾರ ಸ್ವರಕ್ಕನುಗುಣವಾಗಿ ಉಳಿದ ಸ್ವರಗಳನ್ನು ಹಾಡಬೇಕು. ಆ ಆಧಾರ ಸ್ವರವೇ ಶ್ರುತಿ ಎನಿಸಿಕೊಳ್ಳುತ್ತದೆ. ಈ ಆಧಾರ ಸ್ಥಾನಕ್ಕನುಗುಣವಾಗಿ ಪ್ರಕೃತಿ ಸ್ವರಗಳ ಭೇದಗಳು ರೂಪುಗೊಂಡಿವೆ. ಶಡ್ಜ ವರ್ಜ್ಯವಾಗಿರುವ ರಾಗಗಳು ಕಂಡು ಬರುವುದಿಲ್ಲ ಆದರೆ ಪಂಚಮ ವರ್ಜ್ಯವಾಗಿರುವ ರಾಗಗಳನ್ನು ಕಾಣಬಹುದು. ಉದಾ: ಹಿಂದೋಳ, ವಸಂತ. ಆದ್ದರಿಂದ ಷಡ್ಜವೇ ಆಧಾರಶ್ರುತಿಯಾಗಿದೆ. ಗಾಯಕರ ಶರೀರಕ್ಕನುಗುಣವಾಗಿ ಶ್ರುತಿಯನ್ನು ಇಟ್ಟುಕೊಳ್ಳಲಾಗುತ್ತದೆ.

ಸಂಗೀತದಲ್ಲಿ 22 ಶ್ರುತಿಗಳೆಂದು ನಿರ್ಧರಿಸಿರುವುದು ಒಂದು ಮುಖ್ಯವಾದ ಅಂಶ. ಈ ಶ್ರುತಿಗಳ ವಿಚಾರದಲ್ಲಿ ನಮ್ಮ ಪ್ರಾಚೀನ ವಿದ್ವಾಂಸರು ಸಂಗೀತದ ಶಾಸ್ತ್ರದ ಆಧಾರದ ಮೇಲೆ ಅನೇಕ ಸಂಶೋಧನೆಗಳನ್ನು, ಚರ್ಚೆಗಳನ್ನು ನಡೆಸಿ 22 ಶ್ರುತಿಗಳೆಂದು ತೀರ್ಮಾನಿಸಿರುತ್ತಾರೆ.

ಇತರ ದೇಶಗಳಲ್ಲಿ ಸಂಗೀತದಲ್ಲಿ 12 ಶ್ರುತಿಗಳು ಕಂಡುಬರುತ್ತವೆ. ಭಾರತದಲ್ಲಿ ಮಾತ್ರ ಅದರ ಜೊತೆಗೆ ಹತ್ತು ಶ್ರುತಿಗಳನ್ನು ಸೇರಿಸಿರುವುದರಿಂದ 22 ಶ್ರುತಿಗಳು ಉಪಯೋಗದಲ್ಲಿದೆ. ಷಡ್ಜ –ಸ ಮತ್ತು ಪಂಚಮ–ಪ ವನ್ನು ಬಿಟ್ಟು ಮಿಕ್ಕೆಲ್ಲ ಸ್ವರಗಳು ಅಂದರೆ ರಿ ಗ ಮ ದ ನಿ ಗಳನ್ನು ನಾಲ್ಕು ಭೇದಗಳನ್ನು ಹೊಂದಿರುವುದರಿಂದ $5 \times 4=20$ ಭೇದಗಳಾಗುತ್ತದೆ. ಇದರ ಜೊತೆಗೆ ಮತ್ತು ಪಂಚಮ ಸೇರಿ 22 ಶೂಚಿಗಳಾಗುತ್ತವೆ. 22 ಕೃತಿಗಳಲ್ಲಿ ಆಧಾರ ಶಬ್ದದಿಂದ ತಾರಸ್ಥಾಯಿ ಷಡ್ಜದವರೆಗೆ ಒಂದೇ ಸಮನಾದ ಏಕ ಶ್ರುತಿಯ ಕ್ರಮವು ಮುಂದು–ವರೆಯುವುದಿಲ್ಲ. ಇದಕ್ಕೆ (Scale of just Intonation) **ನಾದೋಚ್ಚಾರಣೆ** ಎಂದು ಹೆಸರು. ಇದನ್ನು ಭಾರತದ ಸಂಗೀತ ಪದ್ಧತಿಯಲ್ಲಿ ಉಪಯೋಗಿಸಿಕೊಂಡು ಬಂದಿದ್ದೇವೆ. ಪಾಶ್ಚಾತ್ಯ ಸಂಗೀತದಲ್ಲಿ ಎಲ್ಲ ಸ್ವರಗಳು ಒಂದೇ ಸಮನಾದ ಶ್ರುತಿಯಲ್ಲಿ ಮುಂದುವರೆದಿದೆ.

---

* ನ ನಾದೇನಾ ವಿನಾ ಗೀತಂ ನಾನಾದೇನಾ ವಿನಾಸ್ವರ :
  ನಾದೇನಾ ವಿನಾ ನೃತ್ಯಂ ತಸ್ಮಾನಾದಾತ್ಮಕಂ ಜಗತ್ ॥ ಬೃಹದ್ದೇಶಿ ಮಾತಂಗ ಪುಟ 2–3
  ಉಲ್ಲೇಖ ಡಾ॥ ಆರ್.ಎನ್. ಶ್ರೀಲತಾ, ಕರ್ನಾಟಕ ಸಂಗೀತದಲ್ಲಿ ಮನೋಧರ್ಮ, ಸಂಗೀತದ ಪ್ರಕಾರಗಳು ಪ್ರಸಾರಾಂಗ ಮೈಸೂರು.
* ಶೃತಿಯ ಶತಕ ಬೆಲೆ : ಅಧ್ಯಾಯದಲ್ಲಿ ಆರಿಸಿಕೊಳ್ಳಲಾಗಿದೆ. ಕರ್ನಾಟಕ ಸಂಗೀತ ಲಕ್ಷ್ಯ ಲಕ್ಷಣ ಪದ್ಧತಿ, ಗಾನ ಹುಷಾರದ ತಿಪ್ಪೆ ಕೃಷ್ಣ ಅಯ್ಯಂಗಾರ್.

ಅಧ್ಯಾಯ ಐದು

ರಾಗಗಳು – ಗಮಕಗಳು – ರಾಗಗಳ ವರ್ಗೀಕರಣ – ಜನಕ ರಾಗಗಳು – ಜನ್ಯ ರಾಗಗಳು – ರಾಗ ಮತ್ತು ರಸ –, ಸಂಗೀತಮುದ್ರೆ.

ರಾಗ ಎಂದರೇನು ?

ಕೇಳುವವರ ಮನಸ್ಸಿಗೆ ಆನಂದ ಉಂಟಾಗುವಂತೆ ಸ್ವರ ವರ್ಣಗಳ ಸೇರುವಿಕೆಯಿಂದ ಉಂಟಾಗುವ ಧ್ವನಿ ವಿಶೇಷವು ರಾಗವೆನಿಸುತ್ತದೆ. ಮನಸ್ಸಿನಲ್ಲಿದ್ದ ಪೂರ್ಣವಾದ ಬಿಂಬವನ್ನು ಹಾಡಿಕೆಗೆ ಸೇರಿಸಿದಾಗ ಅದನ್ನು ರಾಗವೆಂದು ಹೇಳಬಹುದು.

ಅದೊಂದು ಮಾನಸಿಕ ಸ್ಥಿತಿಯ ನಾದ ರೂಪದ ನಿರೂಪಣೆಯೂ ಹೌದೆನ್ನಬಹುದು. ಚಿತ್ರಗಾರ ರೇಖೆ ವರ್ಣಗಳಿಂದ ಸಾಧಿಸುವುದನ್ನು ಸಂಗೀತಗಾರ ನಾದ ವಿನ್ಯಾಸದಿಂದ ಸಾಧಿಸುವ ಪ್ರಯತ್ನದ ಕಡೆಗೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿರುವುದು ಕಂಡು ಬರುತ್ತದೆ. ಈ ನಾದ ವಿನ್ಯಾಸದ ಚೌಕಟ್ಟಿನ ಫಲವೇ ರಾಗ. ಸ್ವರಗಳ ಜೋಡಣೆಯನ್ನು ಒಂದು ಕ್ರಮಬದ್ಧತೆಯಲ್ಲಿ ಹಾಡಿದಾಗ ಜನರಿಗೆ ರಂಜನೆಯನ್ನು ಉಂಟುಮಾಡುವ ಧ್ವನಿ ವಿಶೇಷವೇ ರಾಗ.

ರಾಗದ ಪರಿಕಲ್ಪನೆಯು ಭಾರತೀಯ ಸಂಗೀತದ ಪ್ರಮುಖ ಅಂಶವಾಗಿದೆ.

ರಾಗವೆಂದರೆ ರಸಾನುಭವಗಳಿಂದ ಕೂಡಿದ ತಮ್ಮ ಕಲ್ಪನಾ ಸಾಮರ್ಥ್ಯಗಳನ್ನು ಪ್ರಯೋಗಿಸುವ ಸಾಧನಗಳೆಂದು ಪ್ರಾಚೀನರು ಹೇಳಿದ್ದಾರೆ. ಪ್ರತಿಯೊಂದು ರಾಗವು ಸೌಂದರ್ಯದ ಅಭಿವ್ಯಕ್ತಿ ಮತ್ತು ನಾದದ ವ್ಯಕ್ತಿತ್ವವನ್ನು ಹೊಂದಿದೆ. ಈ ಸೌಂದರ್ಯದ ಅಭಿವ್ಯಕ್ತಿಯೇ ರಾಗದ ಜೀವವಾಗಿರುವ ಭಾವ.

ಸ್ವರ ವರ್ಣಗಳಿಂದ ಅಲಂಕೃತವಾದ ಹಾಗೂ ಕೇಳುವವರ ಮನಸ್ಸನ್ನು ಆಕರ್ಷಿಸುವ ರಂಜಿಸುವ ಧ್ವನಿ ವಿಶೇಷವೇ ರಾಗ.

ಭಾರತೀಯ ಸಂಗೀತದ ವಿವರಗಳನ್ನು ಪರಿಶೀಲಿಸಿದರೆ ಅದರ ಸತ್ವವು ರಾಗಗಳಲ್ಲಿಯೂ ಸೌಂದರ್ಯವೂ ರಾಗ ರೂಪಕಗಳಲ್ಲಿಯೂ ಇರುವುದು ತಿಳಿಯುತ್ತದೆ. ಆದ್ದರಿಂದಲೇ **"ರಾಗವು ಭಾರತೀಯ ಸಂಗೀತದ ಜೀವಾಳ"** ಎಂಬ ಮಾತು ರೂಢಿಯಲ್ಲಿದೆ. ಭಾರತೀಯ ಸಂಗೀತದ ವಿಶಿಷ್ಟ ಸಾಧನೆ ಎಂದರೆ ಅದರ ರಾಗಗಳ ಕಲ್ಪನೆ, ಇದರ ತಳಹದಿಯ ಮೇಲೆ ಇಡೀ ಸಂಗೀತದ ಸೌಧ. ನಿರ್ಮಿತವಾಗಿದೆ.

ಭರತ ಮುನಿಯು ತಿಳಿಸುವ ಜಾತಿ(ರಾಗ)ಯಿಂದ ಮೊದಲ್ಗೊಂಡು ಇಂದಿನವರೆಗೂ ರಾಗ ಪ್ರಪಂಚವು ಬಹು ವಿಧವಾಗಿ ಬೆಳೆದಿದೆ ಹಾಗೂ ಬದಲಾವಣೆಗಳನ್ನು ಕಂಡುಕೊಂಡಿದೆ. ಅನೇಕ ಹಿಂದಿನ ರಾಗಗಳು ಇಂದು ಉಳಿದಿಲ್ಲ. ಹಿಂದಿರುವ ಮತ್ತೆಷ್ಟೋ ರಾಗಗಳು ಗುರುತೇ ಸಿಗದಂತೆ ಸ್ವರೂಪಗಳನ್ನು ಹೊಂದಿವೆ.

ಒಂದೊಂದು ರಾಗವೂ ನಿರ್ದಿಷ್ಟ ಸ್ವರಗಳನ್ನು ಹೊಂದಿರುವ ಮಾಪಕವನ್ನು ಆಧರಿಸಿದೆ, ಅವುಗಳ ಮಧುರತ್ವದಲ್ಲಿ ಕಾಣಿಸಿಕೊಳ್ಳುವ ವಿಶಿಷ್ಟ ಸಂಗೀತದ ಲಕ್ಷಣಗಳನ್ನೂ ಹೊಂದಿವೆ. ರಾಗ ರಂಜನೆ ಅಪಾರ. ಶೃತಿ, ಲಯ ಮತ್ತು ಗಮಕ ಶುದ್ಧಿ ಇದ್ದು ಸ್ಥಾಯಿ ಸಂಚಾರವುಳ್ಳ ಯಾವುದೇ ಭಾವಸಮೃದ್ಧ ಗಾನವು ರಂಜಕ. **ರಾಗ ಎಂಬ ಪದವು ರಸ ಎಂಬ ಧಾತುವಿನಿಂದ ಬಂದಿದೆ.**

ಗ್ರಾಮ ಪದ್ಧತಿಯ ರಾಗ ನಿರೂಪಣೆಯು ಮೇಳ ಪದ್ಧತಿಗೆ ಹೊರಳಿದ ಬಳಿಕ ಸಂಗೀತದ ಲೋಕದಲ್ಲಿ ಉಂಟಾದ ಕ್ರಾಂತಿ ಅಸಾಧಾರಣವೆನ್ನಬಹುದು. ರಾಗವು ಸಂಗೀತವನ್ನು ಸಂಯೋಜಿಸುವ ಸ್ವರಗಳ ಆರೋಹಣ ಮತ್ತು ಅವರೋಹಣ ನಿಯಮಗಳನ್ನು ಒಳಗೊಂಡಿದೆ. ರಾಗದಲ್ಲಿ ಸ್ವರ ಮತ್ತು ವರ್ಣಗಳ ಸುಮಧುರ ಸಂಯೋಜನೆಯು ಮನಸ್ಸಿಗೆ ಮುದ ನೀಡುತ್ತದೆ.

ಸಂಗೀತದಲ್ಲಿ ಲಕ್ಷ್ಯ ಬೆಳೆದಂತೆಲ್ಲ ಅದಕ್ಕನುಗುಣವಾದ ಲಕ್ಷಣವು ಸಿದ್ಧವಾಗುವುದು. ಇವು ಸಂಗೀತ ಶಾಸ್ತ್ರದ ಅರಿವು, ಕಲಾ ಪ್ರಯೋಗವನ್ನು ಸುಂದರಗೊಳಿಸಿ, ಶ್ರಾವ್ಯವಾಗಿಸಿ

ರಸಿಕರ ಮೆಚ್ಚುಗೆಗೆ ಪಾತ್ರವಾಗಿ ಶಾಸ್ತ್ರೀಯ ಸಂಪ್ರದಾಯ ಸಂಗೀತವೆಂಬ ಹೆಗ್ಗಳಿಕೆಗೆ ಪಾತ್ರವಾಗುವುದು. ಸಂಗೀತ ರಚನೆಗಳು ಮತ್ತು ರಾಗಸ್ವರೂಪವೂ ವಿಭಿನ್ನವಾಗಿ ಬೇರೆ ಬೇರೆ ರೂಪವನ್ನು ಪಡೆದಾಗ ಶಾಸ್ತ್ರವು ನೆರವಿಗೆ ಬಂದು ಹಿಡಿತದಲ್ಲಿಡಲು ಅನುಕೂಲವಾಗುವುದು.

ಗಮಕಗಳು:

"ಗಮ" ಎಂಬ ಸಂಸ್ಕೃತ ಭಾಷೆಯ ಧಾತು ಗಮಕದ ಮೂಲ. **ಮೂಲ ಸಂಸ್ಕೃತದಲ್ಲಿ ಗಮಕ ಎಂದರೆ ಸ್ಪಷ್ಟಪಡಿಸು, ವಿವರಣೆ ತಿಳಿಯಪಡಿಸು** ಎಂಬರ್ಥಗಳಿವೆ. ಸಂಗೀತದ ಪರಿಭಾಷೆಯಲ್ಲಿ ಆಳವಾದ ಸಹಜ ಸ್ವರ ಸ, ರಿ, ಗ ಎಂಬಂತೆ ಎಳೆಯುವುದು ಆಗುತ್ತದೆ. ಒಂದು ಶ್ರುತಿಯಿಂದ ಇನ್ನೊಂದು ಶೃತಿಗೆ ಹೋಗುವ ರೀತಿಯನ್ನು ಗಮಕ ಎನ್ನಲಾಗಿದೆ. ಅರ್ಥಪೂರ್ಣವಾಗಿ ಕಾವ್ಯವನ್ನು ಓದುವುದು ರಾಗ ಬದ್ಧವಾದ ಕಾವ್ಯವಾಚನ, ಬೋಧಕ, ವೇಗ ಸ್ವರದ ಕಂಪನ ಸಂಗೀತದ ಪ್ರಕ್ರಿಯೆ ಎಂಬ ಅರ್ಥಗಳಿವೆ.

ಭಾರತೀಯ ಸಂಗೀತದ ಮತ್ತೊಂದು ಪ್ರಮುಖ ಭಾಗವೆಂದರೆ ರಾಗಗಳನ್ನು ಅಲಂಕರಿಸಲು ಆಭರಣವಾಗಿ ಬಳಸಲಾಗುವ **ಗಮಕಗಳ** ಬಳಕೆ, ಸ್ವರಗಳನ್ನು ಕಂಪಿಸುವುದೇ ಗಮಕ, ಸ್ವರಗಳನ್ನು ಕೇಳುವವರ ಚಿತ್ತಕ್ಕೆ ಸುಖವನ್ನುಂಟು ಮಾಡುವ ರೀತಿಯಲ್ಲಿ ಕಂಪಿಸಬೇಕು. ಅಂತಹ ಗಮಕಗಳು 15 ಎಂಬುದಾಗಿ ಸಾರಂಗದೇವ ಹೇಳಿರುವನು. ರಾಗಾಲಾಪನೆಯ ಪದ್ಧತಿಯಲ್ಲಿ ಗಮಕಗಳ ಪಾತ್ರ ಪ್ರಮುಖವಾದದು. ಇವು ಯಾವುವೆಂದರೆ ತಿರಿಪು, ಕಂಪಿತ, ಸ್ಫೂರಿತ, ಲೀನ, ಆಂದೋಲಿತ, ವಲಿ, ವಿಭಿನ್ನ, ಕುರುಳು, ಆಹತ, ಉಲ್ಲಸಿತ, ಪ್ಲಾವಿತ, ಗುಂಫಿತ, ಮುದ್ರಿತ, ನಾಮಿತ ಮತ್ತು ಮಿಶ್ರಿತ.

ದಶವಿಧ ಗಮಕಗಳು:

ದಶವಿಧ ಗಮಕಗಳು ಇತ್ತೀಚಿಗೆ ಬಂದದ್ದು. ಈ ದಶವಿಧ ಗಮಕಗಳಿಂದ ರಾಗನಿಷ್ಪತ್ತಿಯನ್ನು ಉಂಟು ಮಾಡಲು ಸಾಧ್ಯವಾಗದು. ರತ್ನಾಕರನು ಸೂಚಿಸಿರುವ 15 ಗಮಕಗಳು ರಾಗದ ಪೂರ್ಣ ಸ್ವರೂಪವನ್ನು ಬರಮಾಡಲು ಸಹಾಯಕವಾಗುವುದು.

ಮೇಳ ಪದ್ಧತಿಯ ರಚನಾಕ್ರಮ ಮತ್ತು ರಾಗಗಳ ವರ್ಗೀಕರಣ

ಮೇಳಕರ್ತ ಅಥವಾ ಸಂಪೂರ್ಣ ರಾಗದ ಆರೋಹಣ ಮತ್ತು ಅವರೋಹಣದ ಸ್ವರ ಸಪ್ತಕವು ಯಥಾ ಕ್ರಮದಲ್ಲಿ ಸ್ವರಸ್ಥಾನಗಳನ್ನು ಪಡೆದಿದ್ದಲ್ಲಿ ಮಾತ್ರ ಮೇಳಕರ್ತರಾಗ–ವೆನಿಸಿಕೊಳ್ಳುವುದು. ಪೂರ್ವಪ್ರಸಿದ್ಧ ಮೇಳಗಳು ಈ ಕ್ರಮವನ್ನು ಅನುಸರಿಸದೇ ಅಂದರೆ, ಈಗಿನ ಜನ್ಯರಾಗಗಳಲ್ಲಿ ಕೆಲವು ಈ ಕ್ರಮವನ್ನು ಅನುಸರಿಸದೇ **ಅಸಂಪೂರ್ಣ ಮೇಳಗಳು** ಎಂದೆನಿಸಿಕೊಂಡಿವೆ. ಇದು ವೆಂಕಟಮಖಿಗಳ ಕಾಲಕ್ಕೆ ಪೂರ್ವದಲ್ಲಿ ಇದ್ದುದರಿಂದ ಇದು ಪುರಾತನವಾದುದೆಂಬುದನ್ನು ಗ್ರಹಿಸಬಹುದು. ಅಹೋಬಲನ "ಸಂಗೀತ ಪಾರಿಜಾತ" ದಲ್ಲಿ ಮೇಳಕರ್ತ, ಸಂಪೂರ್ಣ ಔಡವ ಷಾಡವ ಎಂದು ಹೇಳಲಾಗಿತ್ತು. 72 ಮೇಳಗಳನ್ನು ವೆಂಕಟಮಖಿಗಳೇ ಕಲ್ಪಿಸಿದಾರೆಂದು ಅವರು ರಚಿಸಿರುವ ಚತುರ್ದಂಡಿ ಪ್ರಕಾಶಿಕೆ"ಯಲ್ಲಿ ಹೇಳಿರುವವರು.

ಮೇಳಕರ್ತರಾಗದ ಆರೋಹಣದಲ್ಲಿನ ಸಪ್ತ ಸ್ವರಗಳಾದ **ಸ ರಿ ಗ ಮ ಪ ದ ನಿ** ಮತ್ತು ಅವರೋಹಣದ **ಸ ನಿ ದ ಪ ಮ ಗ ರಿ** ಎಂಬ ಸ್ವರಗಳು ಒಂದೇ ಬಗೆಯಾಗಿದ್ದರೆ **ಕ್ರಮಸಂಪೂರ್ಣ ಮೇಳ** ಗಳೆಂದು ಇದಕ್ಕೆ ಭಿನ್ನವಾದುದನ್ನು **ಅಸಂಪೂರ್ಣ ಮೇಳ** ಗಳೆಂದು ಪರಿಗಣಿಸಲಾಗಿದೆ. ಈ ಪದ್ಧತಿಯ ಕ್ರಮವನ್ನು ವೆಂಕಟಮುಖಿಗಳು ಹೇಳಿದರೆ ವಿನಹ ಅವುಗಳನ್ನು ಹೆಸರಿಸಿಲ್ಲ. ಇವರ ನಂತರ ಬಂದ ಲಾಕ್ಷಣಿಕನಾದ ಗೋವಿಂದಾಚಾರ್ಯನು ಈ 72 ರಾಗಗಳನ್ನು ಹೆಸರಿಸಿದನೆಂದು ಪ್ರತೀತಿ. ಈ ಎರಡು ಪದ್ಧತಿಗಳ ಹೆಸರುಗಳಿಗೂ ಕಟಪಯಾದಿ ಸೂತ್ರಕ್ಕೆ ಅನುಗುಣವಾಗಿ ಮುಂಪ್ರತ್ಯಯಗಳನ್ನು ಸೇರಿಸಲಾಗಿದೆ.

ರಾಗಗಳ ಬೆಳವಣಿಗೆಯ ಮೂಲವು ಬಹಳ ಕುತೂಹಲಕಾರಿಯಾಗಿದೆ. ಹೊಸ ರಾಗಗಳನ್ನು ಕಂಡುಹಿಡಿಯಲು ತಾರ್ಕಿಕ ಹಾಗೂ ನೈಸರ್ಗಿಕ ಪದ್ಧತಿಗಳನ್ನು ಅನುಸರಿಸಲಾಯಿತು ಎಂದು ತಿಳಿದು ಬರುತ್ತದೆ. ವೆಂಕಟಮಖಿಗಳು 72 ಮೇಳರಾಗಗಳನ್ನು ರೂಢಿಗೆ ತಂದರು.

ಜಾನಪದ ಸಂಗೀತದಿಂದ ಮೊದಲಿಗೆ ಭಾಷಾಂಗ ರಾಗಗಳು ಮತ್ತು ವಕ್ರ ರಾಗಗಳ ವಿಷಯವು ಹೊಳೆಯಿತು. ಬೃಹದೇಶಿಯ ಗ್ರಂಥಕರ್ತನಾದ ಮಾತಂಗನು ದೇಶಿಯ ರಾಗಗಳ ವ್ಯಾಪಕವಾದ ಅಭ್ಯಾಸವನ್ನು ನಡೆಸಿ ಅವುಗಳಲ್ಲಿ ಅಡಕವಾದ ಸೌಂದರ್ಯವನ್ನು ಕಂಡುಕೊಂಡನು. ರಾಗಗಳಲ್ಲಿ ಮಾರ್ಗ ಮತ್ತು ದೇಶ್ಯ ಎಂಬುದಾಗಿ ಎರಡು ವಿಭಾಗಗಳಲ್ಲಿವೆ.

72 ಮೇಳರಾಗಮಾಲಿಕೆ. ವಿಶ್ವದ ಗಾನ ಪದ್ಧತಿಗಳಲ್ಲಿ, ಭಾರತದ ಗಾನ ಪದ್ಧತಿಯೊಂದೇ 72 ಮೇಳ ಮತ್ತು 35 ತಾಳ ಪದ್ಧತಿಗಳನ್ನು ಹೊಂದಿರುವುದು.

ಆಧುನಿಕ ಕಾಲವು ರಾಗ ಪದ್ಧತಿಯಲ್ಲಿ ವ್ಯವಸ್ಥಿತ ಬೆಳವಣಿಗೆಗೆ ಸಾಕ್ಷಿಯಾಗಿದೆ. ಎಪ್ಪತ್ತೆರಡು ಮೇಳಗಳ ಅಥವಾ ಜನಕರಾಗಗಳ ಕರ್ನಾಟಕ ಸಂಗೀತ ವ್ಯವಸ್ಥೆಯನ್ನು ವೆಂಕಟಮಖಿರವರು ರೂಪಿಸಿದರು.

ಕಟಕಯಾದಿ ಸೂತ್ರ:

ಮೇಳ ರಾಗ ಕ್ರಮ ಸಂಖ್ಯೆಯನ್ನು ಅರಿಯಲು ಕಟಕಯಾದಿ ಸೂತ್ರವು ರಚಿತವಾಗಿದೆ. ಮೇಳದ ಹೆಸರಿನ ಮೊದಲ ಎರಡು ಅಕ್ಷರಗಳು ಅನ್ವಯವಾಗುವಂತೆ ರಾಗಕ್ಕೆ ಜೋಡಿಸಲಾಗಿದೆ. ರಾಗದ ಮೊದಲೆರಡು ಅಕ್ಷರ ಸಂಖ್ಯೆ ಈ ಸೂತ್ರಕ್ಕೆ ಅನ್ವಯಿಸಿದರೆ ಬರುವ ಸಂಖ್ಯೆಗಳನ್ನು ತಲೆಕೆಳಗಾದ ರೀತಿಯಲ್ಲಿ ಓದಿದರೆ ಬರುವ ರಾಗವ ಹೊಂದಿರುವ ಸಂಖ್ಯೆಯಾಗಿರುತ್ತದೆ.

ಭಾರತೀಯ ಸಂಗೀತ ಸಿದ್ಧಾಂತದಲ್ಲಿ ರಾಗಗಳ ವರ್ಗೀಕರಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉತ್ತರ ಭಾತದಲ್ಲಿ, ರಾಗಗಳನ್ನು ಮನಸ್ಥಿತಿ, ಋತು ಮತ್ತು ಸಮಯದಂತಹ ಗುಣಲಕ್ಷಣಗಳ ಪ್ರಕಾರ ವರ್ಗೀಕರಿಸಲಾಗಿದೆ. ದಕ್ಷಿಣ ಭಾರತದಲ್ಲಿ ರಾಗಗಳನ್ನು ಅವುಗಳ ಮಾಪಕಗಳ ತಾಂತ್ರಿಕ ಲಕ್ಷಣಗಳಿಂದ ವರ್ಗೀಕರಿಸಲಾಗಿದೆ.

ರಾಗಗಳನ್ನು ಸಾಮಾನ್ಯವಾಗಿ ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ.

72 ಕ್ರಮ ಸಂಪೂರ್ಣ ರಾಗಗಳಿಂದ ಜನ್ಯ ಭಾಷಾಂಗ ಮುಂತಾದ ರಾಗಗಳ ಸಂಖ್ಯೆ ವಿಫಲವಾಗಿ ಬೆಳೆದು ಬರಲು ಸಾಧ್ಯವಾಯಿತು. ಈ ದಿಶೆಯಲ್ಲಿ ವೆಂಕಟಮಖಿಗಳ ಕೊಡುಗೆ

ಚಾರಿತ್ರಿಕವಾಗಿರುವುದಲ್ಲದೆ ವಿದ್ವಾಂಸರಿಂದ ಅನುಕರಣೀಯವಾಗಿ ಪ್ರಸಿದ್ಧಿಗೆ ಬಂದು ಜನಾಧರಣೀಯವಾಗಿರುವುದು.

ರಾಗಗಳ ವರ್ಗೀಕರಣ

ಜನಕರಾಗಗಳು ಮತ್ತು ಜನ್ಯರಾಗಗಳು

ಭಾರತೀಯ ಸಂಗೀತದ ಕಟ್ಟಡವು ರಾಗ, ಭಾವವೆಂಬ ಪೀಠದ ಮೇಲೆ ಕಟ್ಟಲ್ಪಟ್ಟಿದೆ. ಸುಸಂಸ್ಕೃತವಾದ ಲಕ್ಷಣಗಳುಳ್ಳ ಭಾರತೀಯ ಸಂಗೀತಕ್ಕೆ ರಾಗವೇ ಅಸ್ಥಿಭಾರ. ರಾಗದ ಕಲ್ಪನೆಯಲ್ಲಿ ಸಂಗೀತವು ಪರಿಪೂರ್ಣತೆಯನ್ನು ಪಡೆಯುತ್ತದೆ. ಇದುವೇ ರಾಗದ, ಸ್ವರ ಮಾಧುರ್ಯದ, ರೂಪ ಲಕ್ಷಣವೆನ್ನಬಹುದು.

ರಾಗಗಳನ್ನು ಸಾಮಾನ್ಯವಾಗಿ ಜನಕ ಮತ್ತು ಜನ್ಯ ರಾಗಗಳೆಂದು ವರ್ಗೀಕರಿಸಬಹುದು. ಜನಕ ರಾಗಗಳಿಗೆ ಮೇಳ ಕರ್ತರಾಗ, ಮೇಳ ರಾಗ, ಕರ್ತ ರಾಗ, ಮೂಲ ರಾಗ ಎಂಬ ಬೇರೆ ಬೇರೆ ಹೆಸರುಗಳಿವೆ. ಇವುಗಳಲ್ಲಿ ಸಪ್ತ ಸ್ವರಗಳು ಸಂಪೂರ್ಣವಾಗಿ ಆರೋಹಣ, ಅವರೋಹಣ ಕ್ರಮಗಳಲ್ಲಿ ಇರುತ್ತವೆ.

ಜನಕ ರಾಗಗಳಲ್ಲಿ ಪ್ರಮುಖವಾಗಿ ಮೂರು ಗುಣಗಳಿರಬೇಕು.

1. ಸ್ವರ ಸಂಪೂರ್ಣತೆ
2. ಸ್ವರಾನುಕ್ರಮತೆ
3. ಸ್ವರಸ್ವಾ ಜಾತೀಯತೆ.

ಸಪ್ತ ಸ್ವರಗಳು ಕ್ರಮದಲ್ಲಿರದೆ ಆರೋಹಣ ಅವರೋಹಣಗಳಲ್ಲಿ ಕೆಲವು ಸ್ವರ ಬಿಟ್ಟು ಹೋದಲ್ಲಿ ಅಥವಾ ಅನ್ಯ ಸ್ವರವನ್ನು ಹೊಂದಿದ್ದಲ್ಲಿ ಅಂತಹ ರಾಗಗಳಿಗೆ ಜನ್ಯರಾಗವೆಂದು ಹೆಸರು. ಈ ರೀತಿಯಾದ ಜನ್ಯ ರಾಗಗಳು ಪ್ರತಿ ಮೇಳರಾಗದಲ್ಲಿಯೂ ಸುಮಾರು 484 ರಾಗಗಳಿವೆ ಎಂದು ಹೇಳಲಾಗಿದೆ.

ಜನ್ಯ ರಾಗಗಳ ವರ್ಗೀಕರಣ.

1. **ಸ್ವರಾಂತರ ರಾಗ –** ಆರೋಹಣ ಮತ್ತು ಅವರೋಹಣದಲ್ಲಿ ನಾಲ್ಕು ಸ್ವರಗಳಿದ್ದರೆ ಸ್ವರಾಂತರ ರಾಗ ಎಂದು ಹೆಸರು.
2. **ಔಡವರಾಗ–** ಆರೋಹಣ ಮತ್ತು ಅವರೋಹಣದಲ್ಲಿ ಐದು ಸ್ವರಗಳಿದ್ದರೆ ಔಡವ ರಾಗವೆನಿಸುವುದು.
3. **ಷಾಡವರಾಗ–** ಆರೋಹಣ ಮತ್ತು ಅವರೋಹಣದಲ್ಲಿ ಆರು ಸ್ವರಗಳಿದ್ದರೆ ಷಾಡವರಾಗವೆನಿಸುವುದು.
4. **ಸಂಪೂರ್ಣ ರಾಗ–** ಇದು ಜನಕರಾಗದ ಭಾಗವಾದರೂ ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಇದ್ದರೂ ಸ್ವರಸ್ಥಾನದಲ್ಲಿ ವ್ಯತ್ಯಾಸವಾಗುವುದರಿಂದ ಜನ್ಯ ರಾಗದ ಗುಂಪಿಗೆ ಸೇರಿದೆ. ಭೈರವಿ ರಾಗದ ಆರೋಹಣ ಮತ್ತು ಅವರೋಹಣಗಳು ಸಂಪೂರ್ಣವಾಗಿದ್ದರೂ ಆರೋಹಣದಲ್ಲಿ ಚತುರ್ ಶ್ರುತಿ ದೈವತವು ಅವರೋಹಣದಲ್ಲಿ ಶುದ್ಧ ದೈವತವು ಬರುವುದರಿಂದ ಭಾಷಾಂಗ ಜನ್ಯ ರಾಗವಾಗಿದೆ.
5. **ವಕ್ರ ರಾಗ–** ಸಪ್ತ ಸ್ವರಗಳು ಆರೋಹಣ ಮತ್ತು ಅವರೋಹಣಗಳಲ್ಲಿ ವಕ್ರ ಸಂಚಾರ ಕ್ರಮದಲ್ಲಿ ಬಂದರೆಅದು ವಕ್ರರಾಗವಾಗುವುದು.
6. **ವರ್ಜ್ಯ ರಾಗ – ಆರೋಹಣ ಮತ್ತು ಅವರೋಹಣದಲ್ಲಿ ಕೆಲವು** ಸ್ವರಗಳು ಬಿಟ್ಟು ಹೋದಲ್ಲಿ ವರ್ಜ್ಯರಾಗವೆನಿಸುವುದು. ಪಂಚಮವರ್ಜ್ಯ ರಾಗ – ಹಿಂದೋಳ
7. **ಉಪಾಂಗ ರಾಗ–** ಯಾವುದಾದರೂ ಜನ್ಯ ರಾಗವು ಜನಕರಾಗದ ಸ್ವರವನ್ನು ಮಾತ್ರ ಹೊಂದಿರುವುದಕ್ಕೆ ಉಪಾಂಗ ರಾಗ ಎಂದು ಹೆಸರು.
8. **ಭಾಷಾಂಗ ರಾಗ –** ಯಾವುದಾದರೂ ಜನ್ಯ ರಾಗವು ತನ್ನ ಜನಕರಾಗದ ಸ್ವರಗಳನ್ನು ಅಲ್ಲದೆ ಅನ್ಯಸ್ವರವನ್ನು ಹೊಂದಿರುವುದಕ್ಕೆ ಭಾಷಾಂಗ ರಾಗ ಎಂದು ಹೆಸರು.

ರಾಗ ಮತ್ತು ರಸ

ಕೇಳುವವರ ಮನಸ್ಸಿಗೆ ಆನಂದ ಉಂಟಾಗುವಂತೆ ಸ್ವರವರ್ಣಗಳ ಸೇರುವಿಕೆಯಿಂದ ಉಂಟಾಗುವ ಧ್ವನಿ ವಿಶೇಷವು ರಾಗವೆನಿಸುತ್ತದೆ.

ಕಾವ್ಯ ನಾಟಕಾದಿಗಳ ರಸಾನುಭವಕ್ಕೆ ಪ್ರಧಾನವಾಗಿರುವಂತ ಸಂಗೀತವು ಎಲ್ಲಾ ರೀತಿಯ ರಸಾನುಭವವನ್ನು ಸೂಚಿಸುವ ಕಲೆಯಾಗಿರುವುದು.

"ರಸ್ಯತೆ ಆಸ್ವದ್ಯತೆ ಇತಿರಸ" ರಸವೆಂದರೆ ಸಾಮಾನ್ಯ ಅರ್ಥದಲ್ಲಿ ಸಾರ ಎಂದಾಗುವುದು. ಸಂಗೀತದಿಂದ ಮನಸ್ಸಿನ ಮೇಲೆ ಉಂಟಾಗುವ ಪರಿಣಾಮವು ಮತ್ತಾವ ಕಲೆಯಿಂದಲೂ ಪಡೆಯಲು ಸಾಧ್ಯವಿಲ್ಲ. **ರಾಗ ಎನ್ನುವ ಪದವು ಪ್ರತ್ಯೇಕ ಸ್ವರಗಳ ಗಮಕ ಸಮೂಹವೆನ್ನ**ಬಹುದು. ರಾಗಗಳಲ್ಲಿ ಹಲವು ರಸಗಳು ಹುಟ್ಟುವಂತೆಯೂ ಹಾಡಬಹುದು, ಕೆಲವು ರಾಗಗಳಲ್ಲಿ ಕೆಲವು ಪ್ರತ್ಯೇಕವಾದ ರಸಗಳನ್ನು ಹೆಚ್ಚು ಸೂಚಿಸುವುದಕ್ಕೆ ಅವಕಾಶಗಳಿರುತ್ತವೆ.

ರಾಗ-ರಸವು ಸರಳವಾದ ಅರ್ಥವನ್ನು ಹೊಂದಿರುವ ಪದವಾಗಿದೆ.

ಕರ್ನಾಟಕ ಸಂಗೀತದ ರಾಗಗಳು- ಅವುಗಳ ಭಾವಗಳ ಸಂಗಮ.

ಪ್ರತಿಯೊಂದು ರಾಗವು ಆಂತರಿಕ ಸತ್ವವನ್ನು ಅಥವಾ ಭಾವನೆಯನ್ನು ಹೊಂದಿರುತ್ತದೆ. ವೀರ, ಶೃಂಗಾರ, ಕರುಣ, ಹಾಸ್ಯ ರಸಗಳು ರಾಗಳನ್ನು ಪ್ರತಿಪಾದಿಸುತ್ತವೆ. ನವರಸಗಳಿಂದ ಉದ್ಭವವಾಗುವ ಭಾವಗಳು ದೇಹ ಮತ್ತು ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮಗಳು ಹಲವು. ಸಾಮಾನ್ಯವಾಗಿ ಒಂದು ಗೊತ್ತಾದ ರಾಗ ಅಥವಾ ಸ್ವರವು ಕೆಲವು ನಿರ್ದಿಷ್ಟ ಭಾವನೆಗಳನ್ನು ಸೃಷ್ಟಿ ಮಾಡುತ್ತವೆ. ಕೆಲವೊಮ್ಮೆ ಒಂದೇ ರಾಗವು ಪ್ರಸ್ತುತ ಪಡಿಸುವ ರೀತಿಗಳಲ್ಲಿ ವಿವಿಧ ಭಾವನೆಗಳನ್ನೂ ಸೃಷ್ಟಿ ಮಾಡುತ್ತವೆ. ಉದಾ. ಷಡ್ಜ ಮತ್ತು ರಿಷಭ ಸ್ವರಗಳು ರೌದ್ರರಸವನ್ನು ಪ್ರತಿಪಾದಿಸುತ್ತವೆ. ಆದರೆ ಅವು ಮಧ್ಯಮ ಮತ್ತು ಪಂಚಮ ಸೇರಿದಾಗ ಹಾಸ್ಯ ಮತ್ತು ಶೃಂಗಾರ ರಸಗಳನ್ನು ಎತ್ತಿ ಹಿಡಿಯಬಲ್ಲದೆಂದು ಭರತನು ಹೇಳುತ್ತಾನೆ.

ಪಂತುವರಾಳಿ–ಚಿಂತನಶೀಲ ಮಧುರ ರಾಗ:

ಈ ರಾಗವ ಮನಸ್ಸಿನ ಮೇಲೆ ಬಹಳ ಹಿತವಾದ ಪ್ರಭಾವವನ್ನು ಬೀರುತ್ತದೆ. ಬಹುಶಃ ಕೇಳುಗರ ಆಂತರಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಪ್ರೇರೇಪಿಸಿ ಧ್ಯಾನ ಮತ್ತು ಚಿಂತನಶೀಲ ಮನಸ್ಥಿತಿಯನ್ನು ನೀಡುತ್ತದೆ. ಬಹಳ ನಿಧಾನವಾದ ಸ್ವರಗುಚ್ಛಗಳು ತೀವ್ರವಾದ ಭಕ್ತಿ ಅಥವಾ ವಿಷಣ್ಣತೆಯ ಸ್ತಿತಿಯನ್ನು ಚಿತ್ರಿಸುತ್ತದೆ.

ರಸಾನುಭವವು ಲಲಿತ ಕಲೆಗಳ ಸೌಂದರ್ಯ ಶಾಸ್ತ್ರದ ಕಲ್ಪನೆಗೆ ಮೂಲಭೂತವಾಗಿರುವ ಅಂಶಗಳಲ್ಲಿ ಒಂದು. ಷಡ್‌ರಸಗಳು ಮನುಷ್ಯನ ಇಂದ್ರಿಯಗಳಿಗೆ ಹೇಗೆ ಸಂಬಂಧಿಸಿರುವುದೋ ಹಾಗೆಯೇ ಸಂಗೀತ ಕಾವ್ಯ ನಾಟಕ ಕಲೆಗಳಲ್ಲಿ ಪ್ರತಿಪಾದಿತವಾಗಿರುವ ನವರಸಗಳನ್ನು ಪಂಚೇಂದ್ರಿಯಗಳು ಅನುಭವಿಸಲು ಸಾಧ್ಯ ವಾಗುವುದರಲ್ಲಿ ಸಂಶಯವಿಲ್ಲ. ಸಂಗೀತಗಾರನು ರಾಗಭಾವಗಳಲ್ಲಿ ತನ್ಮಯನಾಗಬೇಕು ಅಂತೆಯೇ ಶ್ರೋತೃವು ಸಹ ಆಲಿಸುವುದರಲ್ಲಿ ತನ್ಮಯನಾಗಬೇಕು. ಆಗ ಮಾತ್ರ ರಸಾನುಭಾವವು ಸಾಧ್ಯ. ಗಾಯಕನು ಚಿತ್ರಿಸುವ ರಾಗದ ಮೂಲಕ ರಸಾನುಭವವನ್ನು ತಾನು ಪಡೆಯುವನಲ್ಲದೆ ಕೇಳುವವರಲ್ಲೂ ಆ ಅನುಭವವನ್ನು ಉಂಟು ಮಾಡುವನು.

ಸಂಸ್ಕೃತದಲ್ಲಿ, ರಾಗ ಎಂದರೆ "ನಿಮ್ಮ ಮನಸ್ಸನ್ನು ಬಣ್ಣಿಸುವ ವಿಷಯ" ಭಾರತೀಯ ಶಾಸ್ತ್ರೀಯ ಸಂಗೀತ ವ್ಯವಸ್ಥೆಗಳಲ್ಲಿ, ಒಬ್ಬರ ಮನಸ್ಸಿನಲ್ಲಿ ನಿರ್ದಿಷ್ಟವಾದ ಭಾವನೆಗಳನ್ನು ಸೃಷ್ಟಿಸುವ ಶಕ್ತಿಯನ್ನು ರಾಗ ಹೊಂದಿದೆ. ಸಂತೋಷ, ದುಃಖ, ಪ್ರಣಯ, ಹಂಬಲ, ಭಕ್ತಿ ಮತ್ತು ಹೆಚ್ಚಿನ ಭಾವನೆಗಳ ವ್ಯಾಪ್ತಿಯನ್ನು ರಾಗಗಳ ಮೂಲಕ ವ್ಯಕ್ತಪಡಿಸಬಹುದು.

ನವರಸಗಳು:

ರಾಗರಸಗಳು ಎಂಟು ಎಂದು ಭರತನು ಹೇಳಿದ್ದಾನೆ, ಅವು **ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ, ಮತ್ತು ರೌದ್ರ.** ಕಾಲಾನುಕ್ರಮದಲ್ಲಿ **ಶಾಂತ** ರಸವನ್ನು ಸೇರಿಸಿಲಾಯಿತು. ಸಂಗೀತದಲ್ಲಿ ಈ ರಸವನ್ನು ಲಾಕ್ಷಿಸಿದವರಲ್ಲಿ ಮತಂಗನು ಮೊದಲಿಗನೆಂದು ಹೇಳುತ್ತಾರೆ.

ರಸವು ಮನಸ್ಸಿನಿಂದ ಅನುಭವಿಸುವ ಮತ್ತು ಕಲಾವಿಧ ಅಥವಾ ಪ್ರೇಕ್ಷಕರು ಅನುಭವಿಸುವ ಭಾವನೆಯ ಅಭಿವ್ಯಕ್ತಿಯಾಗಿದೆ. ಪ್ರತಿಯೊಂದು ರಸವು ತನ್ನದೇ ಆದ ಅಭಿವ್ಯಕ್ತಿಯನ್ನು ಹೊಂದಿದೆ. ಸಾಹಿತ್ಯ ಮತ್ತು ರಾಗದ ಅವಶ್ಯಕತೆಗೆ ಅನುಗುಣವಾಗಿ ಪ್ರತಿ ಸಂಯೋಜನೆಯು ಒಂದು ಅಥವಾ ಹೆಚ್ಚಿನ ರಸಗಳಲ್ಲಿ ಸಂಯೋಜಿಸಲ್ಪಡುತ್ತದೆ.

ಸ್ವರ ಅಂಶಗಳು ರಾಗಕ್ಕೆ ರಸ ಶ್ರವಿಸುವ ಶಕ್ತಿ ಉಂಟು ಮಾಡುವುದೆಂದು ಭರತನು ಹೇಳಿದ್ದಾನೆ. ಕೆಲವು ಸ್ವರಗಳನ್ನು ಒಟ್ಟಿಗೆ ನುಡಿಸಿದಾಗ ಅವು ಮಧುರವಾಗಿರುತ್ತದೆ.

ಮ ಪ – ಶೃಂಗಾರ ಹಾಸ್ಯಗಳಿಗೂ, ಸ ರಿ –ಗಳ ಅಂಶಗಳು ವೀರರೌದ್ರ ಅಮೃತ ರಸಗಳಿಗೂ ಕಾರಣವಾಗಿದೆ ಎಂದು ಭರತನು ಹೇಳಿದ್ದಾನೆ. ರಾಗವು ಒಳಗೊಂಡಿರುವ ಸ್ವರಗಳ ಸಂಖ್ಯೆ ಇತ್ಯಾದಿಗಳು ರಾಗಕ್ಕೆ ರಸ ಸ್ರವಿಸುವ ಶಕ್ತಿಯನ್ನು ಉಂಟುಮಾಡುತ್ತವೆ. ಎಲ್ಲ ಸ್ವರಗಳು ಜೀವ ಸ್ವರಗಳಾಗಿರುವ ತೋಡಿ, ಮೋಹನ ಮುಂತಾದ ರಾಗಗಳು ಅನೇಕ ರಸಗಳನ್ನು ಉಂಟು ಮಾಡಬಲ್ಲವು. ರಾಗದ ಜೀವ ಸ್ವರವು ಆ ರಾಗದ ರಸವನ್ನು ಸೂಚಿಸುತ್ತದೆ. ಮುಖಾರಿಯು, ಕರುಣರಸ ಪ್ರಧಾನವಾದ ರಾಗ ಆದರೆ ಇದರ ನಡೆಯು ತೀವ್ರವಾದಾಗ ರೌದ್ರರಸಕ್ಕೆ ದಾರಿಯಾಗುತ್ತದೆ.
ರಾಗ ಕಲ್ಪನೆಯಲ್ಲಿ ಬರುವ ಸ್ವರ ಪ್ರಸ್ತಾರ ಪ್ರಯೋಗಗಳು.
ನ್ಯಾಸ ಸ್ವರ ಜೀವ ಸ್ವರಗಳು ಹಲವಾರು ರಸಗಳ ಅಭಿವ್ಯಕ್ತಿಗೆ ದಾರಿ ಮಾಡಿಕೊಡುತ್ತದೆ.
ಕಲ್ಯಾಣಿ ರಾಗವು ಕರುಣ ವಾತ್ಸಲ್ಯ ಹಾಗೂ ವೀರರಸ ಪ್ರತಿಪಾದಕವಾಗಿರುತ್ತದೆ.

ಮೋಹನ ಮತ್ತು ಹಂಸಧ್ವನಿ ರಾಗಗಳು ಒಂದಕ್ಕೆ ಮೀರಿದ ರಸಾಭಿವ್ಯಕ್ತಿಗೆ ದಾರಿ ಮಾಡುತ್ತವೆ. ಕೋಮಲ ಸ್ವರಗಳು ಪಡೆದಿರುವ ರಾಗಗಳು ಅಂದರೆ ಧನ್ಯಾಸಿ, ನಾಯಕಿ, ಆನಂದಭೈರವಿ ಸಾಮಾನ್ಯವಾಗಿ ಕರುಣಾರಸ ಭಕ್ತಿರಸ ಪ್ರಧಾನವಾದದ್ದು.

ನೀಲಾಂಬರಿ, ನಾದನಾಮಕ್ರಿಯೆ, ಮುಖಾರಿಗಳು ಕೇಳುಗರಿಗೆ ದೈನ್ಯ ರಸ ಪ್ರತಿಪಾದಿಸುವುದು ಅರಿವಾಗುವುದು.

ವಾತ್ಸಲ್ಯ ಭಾವಕ್ಕೆ ಆನಂದಭೈರವಿ ಮಧ್ಯಮಾವತಿ ಶ್ರೀರಾಗಗಳು ಪೂರಕವಾಗಿರುವುವು. ಕರ್ನಾಟಕ ಸಂಗೀತವು ಭಕ್ತಿರಸಪ್ರಧಾನವಾದುದರಿಂದ ರಸಗಳಲ್ಲಿ ಪ್ರತಿಪಾದಿತವಾಗಿರುವ ಕರುಣ, ಶಾಂತ ರಸ ಹೆಚ್ಚಾಗಿ ಕಾಣುತ್ತದೆ.

ಶೃಂಗಾರ ರಸವು ಮಧುರ ಭಕ್ತಿಗೆ ಸಂಬಂಧಿಸಿದವುಗಳಲ್ಲದೆ ಜಾವಳಿಗಳಲ್ಲಿಯೂ ಪ್ರತಿಬಿಂಬಿತವಾಗಿದೆ.

ವಾಗ್ಗೇಯಕಾರನು ರಾಗದ ರಸವನ್ನು ಹಿನ್ನೆಲೆಯಾಗಿಟ್ಟುಕೊಂಡು ಸಾಹಿತ್ಯದ ವಿಷಯಕ್ಕೂ ರಾಗದ ರಸಕ್ಕೂ ಸಾಮರಸ್ಯವಿರುವಂತೆ ಕೃತಿಯನ್ನು ರಚಿಸುವನು. ಸಂಗೀತವೇ ಪ್ರಧಾನವಾಗಿರುವ ಕೃತಿಗಳನ್ನು ಕೇಳುವಾಗ ನಮಗೆ ರಸಭಾವದ ಅನುಭವ ಉಂಟಾಗಬಹುದು.

ಭೈರವಿ ರಾಗದ ಕೊಲುವಯ್ಯುನ್ನಾಡೆ, ಚಿಂತಾಮಣಿ ರಾಗದ ದೇವಿ ಬ್ರೋವು ಸಮಯವಿದೆ ಎಂಬ ಕೃತಿಗಳು ವಿಶೇಷವಾದ ಸಂದರ್ಭಗಳಲ್ಲಿ ರಚಿಸಲ್ಪಟ್ಟವು.

ರಸವನ್ನುಂಟು ಮಾಡುವ ಸಂಗೀತ ರಚನೆಗಳಲ್ಲಿ ಕೆಲವು ಮುಖ್ಯಾಂಶಗಳಿರಬೇಕು.

1. ಕೃತೀಯ ಸಂಗೀತವು ರಸ ಭಾವ ಪ್ರಧಾನವಾದ, ಪರಿಚಿತವಾದ ಒಂದು ರಕ್ತಿ ರಾಗದಲ್ಲಿರಬೇಕು.
2. ಅದರ ಸಂಗೀತದ ಮುನ್ನಡೆಯು ಸ್ವಾಭಾವಿಕವಾಗಿರಬೇಕು.
3. ಕೃತಿಯು ತೀರ ಚಿಕ್ಕದಾಗಿರಕೂಡದು.
4. ಕೃತಿಯು ಅಪರೂಪವಾದ ತಾಳದಲ್ಲಿರಕೂಡದು ಮತ್ತು ವಿಚಿತ್ರ ಕಲ್ಪನೆಗಳು ಹೆಚ್ಚಾಗಿರಕೂಡದು.
6. ಸಾಹಿತ್ಯ ಭಾಗದ ಸೌಂದರ್ಯವು ಪ್ರಧಾನವಾಗಿರ ಕೂಡದು ಮತ್ತು ತಾನಾವರ್ಣ-ಗಳಿರುವಂತೆ ಆಕಾರ ಈಕಾರಗಳು ಹೆಚ್ಚಾಗಿರಕೂಡದು.
7. ಕೃತಿಯ ಪದಲಾಲಿತ್ಯ ಭಾಷೆಯು ಇವೆಲ್ಲವೂ ಸಹ ರಸಪೋಷಕವಾಗಿರಬೇಕು.

8. ಈ ಅಂಶಗಳೆಲ್ಲವೂ ಸಂಗೀತ ರಚನೆಯಲ್ಲಿದ್ದರೆ ಮಾತ್ರ ಉದ್ದೇಶಿಸಿದ ರಸಭಾವಕ್ಕೆ ಕುಂದು ಬರುವುದಿಲ್ಲ.

ನವರಸಗಳಲ್ಲದೆ ಭಕ್ತಿರಸದ ಅನುಭವವನ್ನು ಸಾಹಿತ್ಯದಿಂದ ಪಡೆಯಬಹುದು. ನಾದ ರಸಾನುಭವವನ್ನು ಸಂಗೀತದ ಮೂಲಕ ಮಾತ್ರ ಪಡೆಯಲು ಸಾಧ್ಯ . "ರಸಾನುಭವವು ಬ್ರಹ್ಮಾನಂದವೇ" ಆಗುತ್ತದೆ. ಇದರ ಅನುಭವ ಪಡೆಯಲು ನಾವು ಕಚೇರಿಗಳಲ್ಲಿ ಸಂಗೀತವನ್ನು ಕೇಳುತ್ತೇವೆ.

ಮುದ್ರೆಗಳು:

ಸಂಗೀತ ರಚನೆಗಳಲ್ಲಿರುವ ದ್ವಾದಶ ಮುದ್ರೆಗಳು ವಾಗ್ಗೇಯಕಾರರು ತಮ್ಮ ಪರಿಚಯ ಮಾಡಿಕೊಡಲು ತಾವು ರಚಿಸಿರುವ ಕೃತಿಗಳಲ್ಲಿ, ಪದಗಳನ್ನು ಸೇರಿಸಿ ಚಮತ್ಕಾರವಾಗಿ ರಚಿಸಿರುತ್ತಾರೆ. ಇವುಗಳಿಗೆ **ಅಂಕಿತ** ಅಥವಾ **ಮುದ್ರೆ** ಎಂದು ಹೆಸರು. ಮುದ್ರೆಗಳನ್ನು ನಾನಾ ರೀತಿಯಲ್ಲಿ ಪ್ರಯೋಗಿಸುತ್ತಾರೆ.

ವಾಗ್ಗೇಯಕಾರನು ತನ್ನ ಹೆಸರು, ಇಷ್ಟದೇವತೆಯ ನಾಮಾವಳಿಗಳು, ರಚನೆಗಳ ರಾಗಗಳ ಹೆಸರು, ಸಂದರ್ಶಿಸಿದ ಕ್ಷೇತ್ರಗಳ ಹೆಸರು, ಗುರುಗಳ ಹೆಸರು, ಪೋಷಕನಾಗಿದ್ದ ರಾಜನ ಹೆಸರು ಇವುಗಳಲ್ಲಿ ಯಾವುದಾದರೂ ಒಂದನ್ನು ಕೃತಿಯ ಸಾಹಿತ್ಯದಲ್ಲಿ ಅರ್ಥಪೂರ್ಣವಾಗಿ ಸೇರಿಸಿರುತ್ತಾನೆ. ಮುದ್ರೆಗಳು ಮಹಾಕಾವ್ಯಗಳ ಕಾಲದಿಂದಲೂ ರೂಢಿಯಲ್ಲಿವೆ. ಇವುಗಳನ್ನು ಹಲವು ಬಗೆಗಳಲ್ಲಿ ವಿಂಗಡಿಸಬಹುದು.

1. ವಾಗ್ಗೇಯಕಾರಮುದ್ರೆ
2. ರಾಗ ಮುದ್ರೆ
3. ತಾಳ ಮುದ್ರೆ
4. ಆಚಾರ್ಯ ಮುದ್ರೆ
5. ರಾಜಮುದ್ರೆ
6. ವಂಶ ಮುದ್ರೆ
7. ಪ್ರಬಂಧ ಮುದ್ರೆ
8. ನಾಯಕ ಮುದ್ರೆ
9. ಸ್ಥಳ ಮುದ್ರೆ
10. ಬಿರುದು ಮುದ್ರೆ
11. ಲಕ್ಷಣ ಗ್ರಂಥ ಮುದ್ರೆ
12. ಇತರ ಮುದ್ರೆಗಳು.

ಈ ದ್ವಾದಶ ಮುದ್ರೆಗಳಲ್ಲಿ **ವಾಗ್ಗೇಯಕಾರ ಮುದ್ರೆ ಮುಖ್ಯವಾದುದು**. ಹಾಗೆಯೇ ತಮ್ಮ ಕೃತಿಗಳಲ್ಲಿ ತಮ್ಮ ನಾಮಾಂಕಿತವನ್ನು ಕೆಲವರು ತಮ್ಮ ಹೆಸರನ್ನು ಬಳಸಿರುತ್ತಾರೆ.

1. ಇದರಲ್ಲಿ ಸ್ವನಾಮ ಮುದ್ರೆ ಮತ್ತು ಇತರ ನಾಮ ಮುದ್ರೆ ಎಂಬ **ಎರಡು ವಿಧಗಳಿವೆ.**

ಸ್ವನಾಮ ಮುದ್ರೆ:

ತ್ಯಾಗರಾಜರು, ಶಾಮಶಾಸ್ತ್ರಿಗಳು ಮುಂತಾದವರು ಮುದ್ರೆಯನ್ನು ಬಳಸಿರುತ್ತಾರೆ.

ಇತರ ನಾಮ ಮುದ್ರೆ:

ಮುತ್ತುಸ್ವಾಮಿ ದೀಕ್ಷಿತರು "ಗುರುಗುಹ" ಎಂಬ ಅಂಕಿತವನ್ನೂ, ಸುಬ್ಬರಾಯ ಶಾಸ್ತ್ರಿಗಳು " ಕುಮಾರ" ಅಂಕಿತವನ್ನೂ ಪಟ್ನಂ ಸುಬ್ರಹ್ಮಣ್ಯ ಅಯ್ಯರ್ ವೆಂಕಟೇಶ ಎಂಬ ಅಂಕಿತವನ್ನೂ, ಸ್ವಾತಿತಿರುನಾಳ್ ಮಹಾರಾಜರು ಪದ್ಮನಾಭ, ಜಲಜನಾಭ, ಸರಸಿಜನಾಭ ಅಂಕಿತಗಳನ್ನೂ ಬಳಸಿದ್ದಾರೆ.

ಇತರ ನಾಮ ಮುದ್ರೆಗಳನ್ನು ಉಪಯೋಗಿಸಿರುವುದು:

ಪಲ್ಲವಿಗೋಪಾಲಯ್ಯ – ವೆಂಕಟಗಿರಿ

ವೀಣಾ ಕುಪ್ಪಯ್ಯರ್ – ವೇಣುಗೋಪಾಲ

ಪಾಪನಾಶಂಶಿವನ್ – ರಾಮದಾಸ

ಆರ್.ಎನ್.ದೊರೆಸ್ವಾಮಿ – ಲಕ್ಷ್ಮಿರಮಣ

2. ರಾಗ ಮುದ್ರೆ:

ರಾಗಗಳ ಹೆಸರನ್ನು ತಮ್ಮ ರಚನೆಗಳಲ್ಲಿ ಸೇರಿಸಲು ಸಾಹಿತ್ಯ ಜ್ಞಾನವು ಅತ್ಯವಶ್ಯಕ. ಮುತ್ತುಸ್ವಾಮಿ ದೀಕ್ಷಿತರು ಇಂತಹ ಪ್ರಯೋಗಗಳಲ್ಲಿ ಪ್ರಮುಖರು. ಕೆಲವು ವೇಳೆ ರಾಗಮಾಲಿಕೆಗಳಲ್ಲಿ ರಾಗದ ಹೆಸರುಗಳನ್ನು ಉದ್ದೇಶ ಪೂರ್ವಕವಾಗಿ ಸೇರಿಸಿರುವುದುಂಟು.

ಖಡ್ಡಾಯವಾಗಿ ರಾಗತಾಳಮಾಲಿಕೆಗಳು, ಲಕ್ಷಣ ಗೀತೆಗಳು ಮತ್ತು ರಾಗಮಾಲಿಕೆಗಳಲ್ಲಿ ರಾಗಮುದ್ರೆಗಳು ಸೇರಿಸುವರು. ಮಹಾವೈದ್ಯನಾಥಅಯ್ಯರ್, ಕೋಟೀಶ್ವರ ಅಯ್ಯರ್ ರವರ ಮೇಳರಾಗಮಾಲಿಕೆಗಳಲ್ಲಿ ರಾಗ ಮುದ್ರೆಗಳನ್ನು ಕಾಣಬಹುದು.

ಕೃತಿಗಳಲ್ಲಿ ರಾಗಮುದ್ರೆಗಳಿಗೆ ಉದಾಹರಣೆಗಳು:

ದೀಕ್ಷಿತರು	–	ವಾತಾಪಿ ಗಣಪತಿ – ಹಂಸಧ್ವನಿ ಭೂಷಿತ
ನೀರಜಾಕ್ಷಿ	–	ಗೌರಿ ಹಿಂದೋಳಾದ್ಯತಿ
ಮಾನಸ ಗುರುಗುಹ	–	ಆನಂದಭೈರವಂ
ತ್ಯಾಗರಾಜರು	–	ಮೋಹನರಾಮ – ಮೋಹನ
ಶ್ರೀರಂಗಯ್ಯ	–	ಕೌಶಿಕ ಪುಣ್ಯಕ್ಷೇತ್ರ – ಧಾತುವರ್ಧಿನಿ ರಾಗೇಶಂ

3. ತಾಳ ಮುದ್ರೆ:

ಕೃತಿಗಳು ರಚಿಸಲ್ಪಟ್ಟಿರುವ ತಾಳಗಳ ಹೆಸರುಗಳನ್ನು ಸೂಚಿಸುವುದು ತಾಳ ಮುದ್ರೆ. ಇವು ತಾಳಮಾಲಿಕೆಗಳಲ್ಲಿ ಅಗತ್ಯವಾಗಿ ಇರಬೇಕಾದ ಅಂಗ. ತಾಳಮಾಲಿಕೆಗಳಲ್ಲೂ ಸಹ ತಾಳ ಮುದ್ರೆಗಳಿವೆ.

4. ಆಚಾರ್ಯ ಮುದ್ರೆ:

ಕೆಲವು ವಾಗ್ಗೇಯಕಾರರು ತಮ್ಮ ಕೃತಿಗಳಲ್ಲಿ ತಮ್ಮ ಗುರುವಿನ ಹೆಸರನ್ನು ಸೂಚಿಸುತ್ತಾರೆ. ಆಚಾರ್ಯ ಮುದ್ರೆಯನ್ನು ಕೃತೀಯ ಸಾಹಿತ್ಯದಲ್ಲಿ ಸೇರಿಸಿ ಅವರಿಗೆ ಭಕ್ತಿ ಪೂರ್ವಕವಾಗಿ ಸಮರ್ಪಿಸಿರುತ್ತಾರೆ.

ಪೈದಾಲಗುರುಮೂರ್ತಿ ಶಾಸ್ತ್ರಿಗಳು ತಮ್ಮ ಸಪ್ತ ತಾಳಗೀತದಲ್ಲಿ "ಗಾನ ವಿದ್ಯಾ ದುರಂದರ ವೆಂಕಟಸುಬ್ಬಯ್ಯ ಗುರು" ಎಂದು ಗುರುವಿನ ಹೆಸರನ್ನು ಸೂಚಿಸಿದ್ದಾರೆ. ಪೊನ್ನಯ್ಯ ಪಿಳ್ಳೆಯವರು ಮಾಯಾತೀತ ಸ್ವರೂಪಿಣಿ ಕೃತಿಯಲ್ಲಿ "ಮಾ ಗುರುಗುಹ ಸಾಮಿಕಿ ನೇ ದಾಸುಡೈತಿ" ಎಂದು ತಮ್ಮ ಗುರು –ದೀಕ್ಷಿತರನ್ನು ಸೂಚಿಸಿದ್ದಾರೆ.

5. ವಂಶ ಮುದ್ರೆ :

ವಾಗ್ಗೇಯಕಾರರು ತಮ್ಮ ಗೋತ್ರ ವಂಶ ತಂದೆ ತಾಯಿಯ ಹೆಸರನ್ನು ತಮ್ಮ ರಚನೆಗಳಲ್ಲಿ ಸೂಚಿಸಿರುತ್ತಾರೆ. ಇವುಗಳಿಗೆ ವಂಶ ಮುದ್ರೆ ಎಂದು ಹೆಸರು.

6. ರಾಜ ಮುದ್ರೆ:

ವಾಗ್ಗೇಯಕಾರರು ತಮ್ಮ ರಚನೆಗಳಲ್ಲಿ ಆಶ್ರಯದಾತ ಹಾಗೂ ಪೋಷಕರು ಆದ ಪ್ರಭುವಿನ ಹೆಸರನ್ನು ಸಾಹಿತ್ಯದೊಡನೆ ಸೇರಿಸಿರುತ್ತಾರೆ. ಇದಕ್ಕೆ ರಾಜಮುದ್ರೆ ಎಂದು ಹೆಸರು. ಘನಂ ಸೀನಯ್ಯನವರ ಕೆಲವು ರಚನೆಗಳಲ್ಲಿ, ಕ್ಷೇತ್ರಜ್ಞರ ಪದಗಳಲ್ಲಿ, ಪಲ್ಲವಿಗೋಪಾಲಯ್ಯ ಅವರ ವರ್ಣಗಳಲ್ಲಿ, ವೀಣೇಶೇಷಣ್ಣನವರ ತಿಲ್ಲಾನಗಳಲ್ಲೂ ಕಾಣಬಹುದು. ರಾಮಸ್ವಾಮಿ ದೀಕ್ಷಿತರ ಕೃತಿಗಳಲ್ಲಿ ಕಂಡು ಬರುವ "ವೆಂಕಟಕೃಷ್ಣ" ಎಂಬ ಅಂಕಿತವು ಇದೇ ರೀತಿಯದು.

ಅಧ್ಯಾಯ ಆರು

ಕರ್ನಾಟಕ ಶಾಸ್ತ್ರೀಯ ಸಂಗೀತ ರಚನೆಗಳು

ಕಲೆಗಳಲ್ಲಿ ಅತ್ಯಂತ ಸೂಕ್ಷ್ಮವೂ ಪರಿಣಾಮಕಾರಿಯೂ ಆದುದು ಸಂಗೀತ. ಗಂಧರ್ವವಂಶ ಸಂಭೂತರಾದವರಿಗೆ ಜನ್ಮ ಸಂಸ್ಕಾರ ಹಾಗೂ ದೈವಕೃಪೆಯಿಂದ ಈ ಕಲೆ ಒಲಿಯಬೇಕು ಎಂದು ಹಿರಿಯರು ಹೇಳಿದ್ದಾರೆ. ಈ ಸಂಗೀತ ಪ್ರತಿಭೆ ಎನ್ನುವುದು ಹಲವರಲ್ಲಿ ಹಲವು ರೀತಿಯಲ್ಲಿ ವ್ಯಕ್ತವಾಗುತ್ತದೆ.

ನಾದಬ್ರಹ್ಮೋಪಾಸನೆಗಾಗಿ ವಾಗ್ಗೇಯಕಾರರು ಅನೇಕ ವಿಧವಾದ ಸಂಗೀತ ರಚನೆಗಳನ್ನು ಸೃಷ್ಟಿಸಿದರು. ಶಾಸ್ತ್ರಜ್ಞಾನ ಮತ್ತು ಸಂಗೀತ ಇವೆರಡರಲ್ಲೂ ಪಾಂಡಿತ್ಯವನ್ನು ಪಡೆದವರು ರಚಿಸಿದ ಕೃತಿಗಳನ್ನು ಒಂದು ವರ್ಗಕ್ಕೆ ಸೇರಿವೆ. ಕಲೆಯ ಉದ್ಧಾರಕ್ಕಾಗಿಯೇ ರಚಿಸಿದ ಕೃತಿಗಳು ಮತ್ತೊಂದು ವರ್ಗಕ್ಕೆ ಸೇರಿವೆ. ಸಂಗೀತ ಶಾಸ್ತ್ರದ ಮುಖ್ಯ ಲಕ್ಷಣಗಳನ್ನು ಒಳಗೊಂಡ ರಚನೆಗಳಲ್ಲಿ ಸಾಹಿತ್ಯಕ್ಕಿಂತ ಧಾತು ಅಥವಾ ಸಂಗೀತವು ಮುಖ್ಯವಾದದ್ದು. ಆ ಕಲೆಯ ವಿವಿಧ ರೂಪಗಳು ಮತ್ತು ಮುಖಗಳನ್ನು ತೋರಿಸುವುದೇ ವಾಗ್ಗೇಯಕಾರರ ಉದ್ದೇಶ. ಆದುದರಿಂದ ಅವರು ಸಾಹಿತ್ಯಕ್ಕಿಂತ ಹೆಚ್ಚಾಗಿ ಸಂಗೀತಕ್ಕೆ ಪ್ರಾಶಸ್ತ್ಯ ಕೊಟ್ಟಿರುತ್ತಾರೆ.

ಕರ್ನಾಟಕ ಸಂಗೀತದ ಕೃತಿ ರೂಪಗಳು

ಗೀತೆ, ಸ್ವರಜತಿ, ಜತಿ ಸ್ವರ, ತಾನವರ್ಣ, ಪದವರ್ಣ, ಕೀರ್ತನೆ, ಕೃತಿ, ರಾಗಮಾಲಿಕೆಗಳು, ಜಾವಳಿ, ತಿಲ್ಲಾನ.

ಅಭ್ಯಾಸ ಗಾನಕ್ಕೆ ಸೇರುವ ಸಂಗೀತ ರಚನೆಗಳಲ್ಲಿ ಗೀತೆಯು ಒಂದು ಸರಳವಾದ ದೇವತಾ ಸ್ತುತಿ ಈ ರಚನೆಗಳಲ್ಲಿ ರಾಗದ ಸಂಚಾರಗಳನ್ನು ಸರಳವಾಗಿ ನಿರೂಪಿಸಲಾಗುತ್ತದೆ. ಗೀತೆಗಳಲ್ಲಿ ಪಿಳ್ಳಾರಿಗೀತೆ, ಸಂಚಾರಿ ಗೀತೆ, ಲಕ್ಷಣ ಗೀತೆಗಳು ಮತ್ತು ರಾಗಮಾಲಾ ಗೀತೆಗಳು ಎಂಬ ನಾಲ್ಕು ಬಗೆಗಳಿವೆ. ಭಿನ್ನ ತಾಳಗಳನ್ನು ಹೊಂದಿರುವ ಸರಳವಾದ ಗೀತೆಗಳು ಕನ್ನಡ, ತೆಲುಗು, ತಮಿಳು, ಸಂಸ್ಕೃತ ಭಾಷೆಗಳ ಸಾಹಿತ್ಯಗಳನ್ನೂ ಹೊಂದಿವೆ. ಗೀತೆಗಳನ್ನು ಪುರಂದರದಾಸರು, ಶಾಮಶಾಸ್ತ್ರಿಗಳು, ಪೈದಾಲ ಗುರುಮೂರ್ತಿಗಳು, ಶ್ರೀ ರಂಗಯ್ಯನವರು, ವರದಯ್ಯನವರು ಮುಂತಾದವರು ರಚಿಸಿದ್ದಾರೆ.

ಜತಿಸ್ವರ:

ಜತಿಸ್ವರ ಪ್ರಧಾನವಾದ ಜತಿಗಳ ಆಧಾರದ ಮೇಲೆ ರಚಿತವಾದ ರಚನೆಯನ್ನು ಜತಿಸ್ವರವೆನ್ನುತ್ತಾರೆ. ಜತಿಸ್ವರವು ನೃತ್ಯ ಸಂಗೀತಕ್ಕೂ ಸೇರುತ್ತದೆ, ಜತಿಸ್ವರದಲ್ಲಿ ಪಲ್ಲವಿ ಚರಣಗಳೆಂಬ ಭಾಗಗಳು ಪ್ರತಿಯೊಂದು ಚರಣದ ನಂತರವೂ ಪಲ್ಲವಿಯನ್ನು ಎತ್ತಿಕೊಳ್ಳಲಾಗುವುದು. ಚರಣವನ್ನು ಚಿಟ್ಟೆಸ್ವರವೆಂದು ಕರೆಯುವರು. ಈ ರಚನೆಗಳಲ್ಲಿ ಸಾಹಿತ್ಯವಿಲ್ಲದೆ ಸ್ವರಗಳೇ ಸಾಹಿತ್ಯದ ಪಾತ್ರವನ್ನು ವಹಿಸುತ್ತದೆ. ಸಾಹಿತ್ಯಕ್ಕೆ ಬದಲಾಗಿ ಸೋಲ್‌ಕೊಟ್‌ಗಳಿವೆ ಇವು ಅನೇಕ ತಾಳಗಳಲ್ಲಿವೆ. ಸಾಹಿತ್ಯವು ಈ ರಚನೆಗಳಲ್ಲಿ ಸೇರ್ಪಡೆಯಾದರೆ ಸ್ವರಜತಿ ಎಂದು ಕರೆಯಲಗುವುದು. ಕೆಲವು ಜತಿಸ್ವರಗಳು "ರಾಗಮಾಲಿಕೆ"ಯಲ್ಲಿದೆ.

ಸ್ವರಜತಿ

ರಾಗದ ಪೂರ್ಣ ಸ್ವರೂಪವನ್ನು ಭಾವಯುಕ್ತವಾಗಿ ಮತ್ತು ಗಮಕಯುಕ್ತವಾಗಿ ಹೊರಗೆಡಹುವ ಮನೋಹರವಾದ ಪದ್ಯ ಬಂಧಗಳೇ ಸ್ವರಜತಿಗಳು, ಸ್ವರ ಸಂಯೋಜನೆಯು ವಿವಿಧ ಗತಿಗಳಲ್ಲಿ ಇದ್ದು ಕೇಳಲು ರಮ್ಯವಾಗಿರುವುದಲ್ಲದೆ ಪ್ರಾಸಬದ್ಧವಾಗಿರುತ್ತದೆ. ಸಾಹಿತ್ಯವು ದೇವತಾಸ್ತುತಿ ಅಥವಾ ವೀರ ಕಥೆಗಳಾಗಿರಬಹುದು. ಸ್ವರಜತಿಗಳನ್ನು ರಚಿಸಿದವರಲ್ಲಿ ಪ್ರಮುಖರು ಶ್ಯಾಮಶಾಸ್ತ್ರಿ. ವೀಣೆ ಶೇಷಣ್ಣ, ಮೈಸೂರು, ಪದ್ಮನಾಭಯ್ಯ, ಮೈಸೂರು ವಾಸುದೇವಾಚಾರ್ಯ, ಸ್ವಾತಿತಿರುನಾಳ್, ಆದಿಅಪ್ಪಯ್ಯ ಪೊನ್ನಯ್ಯ, ಮೈಸೂರು ಸದಾಶಿವರಾಯರು.

ತಾನವರ್ಣ

ವಿವಿಧ ಜಾತಿಗಳಲ್ಲಿ ಸಂಯೋಜಿತವಾದ ಸ್ವರಗಳುಳ್ಳ ವಿಶೇಷ ರಚನೆಗೆ ವರ್ಣವೆಂದು ಹೆಸರು. ವರ್ಣಗಳಲ್ಲಿ ರಾಗರಂಜಕದ ಮತ್ತು ವಿಶೇಷ ಪ್ರಯೋಗಗಳು ಕಡ್ಡಾಯವಾಗಿ ಬರುತ್ತವೆ. ಪಲ್ಲವಿ ಅನುಪಲ್ಲವಿ ಮುಕ್ತಾಯಿಸ್ವರಗಳು ಪೂರ್ವಾಂಗದಲ್ಲಿದ್ದು ಉತ್ತರಾಂಗದಲ್ಲಿ ಉಪಪಲ್ಲವಿ ಮತ್ತು ಚಿಟ್ಟೆಸ್ವರಗಳನ್ನು ವರ್ಣವೂ ಹೊಂದಿರುತ್ತದೆ. ಸಾಹಿತ್ಯವು ಶೃಂಗಾರವಾಗಿರಬಹುದು ಅಥವಾ ಭಕ್ತಿ ಪ್ರಧಾನವಾಗಿರಬಹುದು. ಆದಿತಾಳ, ಅಟ್ಟತಾಳ, ಝಂಪೆತಾಳ,

ತ್ರಿಪುಟತಾಳಗಳಲ್ಲಿಯೂ, ರಾಗಮಾಲಿಕೆಗಳೂ ರಚಿತವಾಗಿದೆ. ರಾಮಸ್ವಾಮಿ ದೀಕ್ಷಿತರು, ಮುತ್ತುಸ್ವಾಮಿ ದೀಕ್ಷಿತರು, ಶಾಮಶಾಸ್ತ್ರಿಗಳು, ಸ್ವಾತಿತಿರುನಾಳ್, ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ವೀಣಾ ಕುಪ್ಪಯ್ಯರ್, ಮುತ್ತಯ್ಯ ಭಾಗವತರ್ ಇನ್ನು ಮುಂತಾದವರು ರಚಿಸಿದ್ದಾರೆ.

ಪದವರ್ಣ

ಪದವರ್ಣವನ್ನು ಚೌಕವರ್ಣವೆಂದು ಕರೆಯುವುದು ವಾಡಿಕೆಯಲ್ಲಿದೆ. ತಾನ, ಜಾತಿ, ಕವನವಾದರೂ ಪಲ್ಲವಿ ಅನುಪಲ್ಲವಿ ಮುಕ್ತಾಯ ಸ್ವರ ಮತ್ತು ಚರಣ ಚರಣಗಳೆಲ್ಲದಕ್ಕೂ ಸಾಹಿತ್ಯವಿದ್ದು ಚೌಕಕಾಲದಲ್ಲಿ ಇರುವುದರಿಂದ ನಾಟ್ಯಕ್ಕೆ ಬೇಕಾದ ಶೃಂಗಾರ ರಸವು ಸಾಹಿತ್ಯದಲ್ಲಿದ್ದು ಅನೇಕ ವಿಧವಾದ ಅಭಿನಯವನ್ನು ತೋರಿಸಲು ಅನುಕೂಲವಾಗಿದೆ. ಪದವರ್ಣಗಳನ್ನು ಮೈಸೂರು ಸದಾಶಿವರಾಯರು ಮತ್ತು ಶ್ರೀ ರಂಗಯ್ಯನವರು, ದಂಡಾಯುದಪಾಣಿ, ಪಿಳ್ಳೆ, ಮುಂತಾದವು ರಚಿಸಿದ್ದಾರೆ. ಇವುಗಳಲ್ಲಿ ಏಕರಾಗ ರಚನೆಗಳು ಹಾಗೂ ರಾಗಮಾಲಿಕ ರಚನೆಗಳೂ ಕಂಡು ಬರುತ್ತವೆ. ವರ್ಣಗಳ ಸಾಹಿತ್ಯ, ಶೃಂಗಾರ ಹಾಗೂ ಭಕ್ತಿರಸ ಪ್ರಧಾನವಾಗಿ ಇರುವುದು ಕಂಡು ಬರುತ್ತದೆ.

ಕೀರ್ತನೆ

ಕೀರ್ತನೆಗಳು ಕೃತಿಗಳಿಂತಲೂ ಪ್ರಾಚೀನವಾದುದು. ಕೀರ್ತನೆಯೂ ಭಕ್ತಿ ಪ್ರಧಾನವಾದ ರಚನೆ. ಸಂಗೀತದ ಅಂಶಕ್ಕಿಂತಲೂ ಸಾಹಿತ್ಯವು ಪ್ರಧಾನವಾದದುದು. ಇದರಲ್ಲಿ ಪಲ್ಲವಿ ಅನುಪಲ್ಲವಿ ಮತ್ತು ಚರಣಗಳೆಂಬ ಅಂಗಗಳನ್ನು ಇರುತ್ತದೆ.

ಸಾಹಿತ್ಯವು ಭಕ್ತಿಯುತವಾಗಿರುವುದಿಲ್ಲದೆ ಕೀರ್ತನೆಗಳು ದ್ವಿಧಾತು ಪ್ರಬಂಧಗಳಾಗಿರುವುದೇ ಹೆಚ್ಚಾಗಿ ಕಂಡುಬರುತ್ತದೆ.

ದಾಸರಪದಗಳನ್ನು ನುರಿತ ವಿದ್ವಾಂಸರುಗಳು ವಿವಿಧ ರಾಗಗಳಲ್ಲಿ ಸಂಯೋಜನೆ ಮಾಡಿ ರಾಗಮಾಲಿಕೆಯಾಗಿ ಪ್ರಸ್ತುತಪಡಿಸಿದ್ದಾರೆ.

ಕೃತಿಗಳು:

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಕೃತಿ ಎಂಬ ರಚನೆ ಧಾತು ಮಾತುಗಳಲ್ಲಿ ವಿಶಿಷ್ಟವಾಗಿರುವ ರಚನಾ ಪ್ರಾಕಾರ. ಕೀರ್ತನೆಗಳ ವಿಕಸಿತ ರೂಪವೇ ಕೃತಿ. ಗಾನರಸಾನುಭವವೇ ಕೃತಿಯ ಮುಖ್ಯ ಗುರಿ. ಕೃತಿಯ ಭಾವರಸಗಳ ತಾದಾತ್ಯ ಇವೆರಡನ್ನು ಒಟ್ಟು ಗೂಡಿಸುವುದೇ ಪದ ಎನ್ನಬಹುದು. ಕೃತಿ ಎನ್ನುವುದು ಪೂರ್ವ ನಿರ್ಧಾರಿತ ಚೌಕಟ್ಟಿನೊಳಗೆ ಹೊಂದಿಕೆಯ ಛಾಪನ್ನು ಪಡೆದು ಅರಳುವ ಮನೋಧರ್ಮ ಮತ್ತು ಅನುಸಂಧಾನವು ಕೂಡ.

ಸುಂದರವಾದ ಕೃತಿರಚನೆಗಳಲ್ಲಿನ ಸಾಹಿತ್ಯ ರಾಗ, ಭಾವ, ಲಯದೊಂದಿಗೆ ಅಭಿವ್ಯಕ್ತಿಗೊಳಿಸಲು ಸಾಧ್ಯ. ಕೃತಿಗಳಲ್ಲಿ ಪಲ್ಲವಿ ಅನುಪಲ್ಲವಿ ಚರಣ ಎಂಬ ಅಂಗಗಳು ಇರುತ್ತವೆ. ಕೆಲವು ಕೃತಿಗಳು 3 –5 –10 ಚರಣಗಳಿಂದ ಕೂಡಿರುವುದು ಉಂಟು. ಕೆಲವು ಸಮಷ್ಟಿ ಚರಣವನ್ನು ಹೊಂದಿರುತ್ತವೆ. ಸಮಷ್ಟಿ ಚರಣದಲ್ಲಿ ಅನುಪಲ್ಲವಿಯ ಭಾಗವು ಅಂತರ್ಗತವಾಗಿ ಇರುವುದು. ಕೃತಿಗಳಲ್ಲಿ ಚರಣಗಳೆಲ್ಲವೂ ಒಂದೇ ಧಾತುವನ್ನು ಅನುಸರಿಸಬೇಕಾಗಿಲ್ಲ. ಅನೇಕ ಪ್ರಸಿದ್ಧ ವಾಗ್ಗೇಯಕಾರರ ಕೃತಿಗಳಲ್ಲಿರುವ ಅನುಪಲ್ಲವಿಯ ಗೇಯ ಭಾಗವು ಚರಣಗಳಲ್ಲಿಯೂ ಪುನರಾವರ್ತಿಸುವುದನ್ನು ಕಾಣುತ್ತೇವೆ.

ಪದ

"ಪದ" ಎಂಬ ಪದವನ್ನು ಭಕ್ತಿ ಕೀರ್ತನೆಗಳಿಗೆ ಉಪಯೋಗಿಸುವ ವಾಡಿಕೆ ಇರುತ್ತದೆ. ದಾಸರಪದಗಳು ಎಂಬುದಾಗಿ ಪುರಂದರದಾಸರ ದೇವರನಾಮಗಳಿಗೆ ಹೆಸರು. 'ಪದ' ಎಂದರೆ ಭಕ್ತಿ ಸಂಬಂಧವಾದ ಹಾಡು ಎಂದು ಅರ್ಥ. ಶೃಂಗಾರ ರಸದಲ್ಲಿಯೇ ದೇವರನ್ನು ಧ್ಯಾನಿಸಲು ಪರಮಾತ್ಮನು ನಾಯಕನೆಂದು ಜೀವಾತ್ಮವು ನಾಯಿಕೆ ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು ರಚಿಸಿರುವ ಶಾಖೆಗೆ ಪದವೆಂದು ಹೆಸರು. ಇದು ಸಂಗೀತ ರಚನೆಯಲ್ಲಿ ಜಾನಪದ ಗೀತೆಗಳಂತೆ ಅಲ್ಲದೆ ಶಾಸ್ತ್ರ ನಿಬಂಧಗಳಿಂದ ರಚಿಸಿರುವುದಾಗಿರುತ್ತದೆ. ಇದರ ಲಕ್ಷಣಗಳೆಂದರೆ –ಪಲ್ಲವಿ, ಅನುಪಲ್ಲವಿ, ಹಾಗೂ ಒಂದು ಅಥವಾ ಅನೇಕ ಚರಣಗಳನ್ನು

ಹೊಂದಿರಬಹುದು. ಆದರೆ ಕಠಿಣ ಸಂಚಾರಗಳಾಗಲಿ ಹೆಚ್ಚಾದ ಸಂಗತಿಗಳಾಗಲಿ ಪದಗಳಲ್ಲಿರ ಕೂಡದು. ರಾಗ, ಭಾವ ಸಾಮಾನ್ಯ ಬಳಕೆಯ ಸಾಹಿತ್ಯ ಈ ರಚನೆಗಲ್ಲಿ ಕಂಡು ಬರುತ್ತದೆ. ಬಹಳ ನೆಮ್ಮದಿಯಾಗಿ ಹಾಡುವಂತಹ ರಚನೆ, ಕ್ಷೇತ್ರಜ್ಞರ ಪದಗಳಲ್ಲಿ ಪುರಂದರದಾಸರ ಪದಗಳ ಮಾದರಿಯನ್ನು ಅನುಸರಿಸಿರುವುದನ್ನು ನಾವು ಕಾಣಬಹುದು. ಸಾಹಿತ್ಯದಲ್ಲಿ ದ್ವಂದ್ವ ಅರ್ಥಗಳು ಬರುವ ಹಾಗಿಯೂ ಇರಬಹುದು, ಪದವನ್ನು ಚೌಕವಾಗಿಯೇ ಹಾಡಬೇಕು. ಪದವನ್ನು ಅಭಿನಯಶಾಸ್ತ್ರಕ್ಕಗಿಯೇ ರಚಿಸಿರುವರೆಂದು ಕೆಲವರ ಅಭಿಪ್ರಾಯ. ಆಧುನಿಕ ಕಾಲದ ರಚನೆಗಳಲ್ಲಿ ಅತಿ ಪ್ರಾಚೀನವಾದದು "ಪದ" ಪ್ರಸಿದ್ಧ ಕವಿಕ್ಷೇತ್ರಜ್ಞರು, ಸ್ವಾತಿತಿರುನಾಳ್ ಮಹಾರಾಜರು, ಕವಿ ಮಾತೃಭೂತಯ್ಯ ಮೊದಲಾದವರು ರಚಿಸಿದ್ದಾರೆ. ಇದು ಶೃಂಗಾರ ರಸದಿಂದ ಕೂಡಿ ಚೌಕಕಾಲದಲ್ಲಿ ಇರುವುದರಿಂದ ನೃತ್ಯ ಮಾಡುವವರು ತಮ್ಮ ಮನೋಧರ್ಮಕ್ಕೆ ಅನುಗುಣವಾಗಿ ಅಭಿನಯವನ್ನು ಈ ಕವನಗಳ ಮೂಲಕ ತೋರಿಸುತ್ತಾರೆ.

ಪನ್ನಗೇಂದ್ರಶಯನ ಸ್ವಾತಿತಿರುನಾಳ್ ಮಹಾರಾಜರು ರಚಿಸಿದ ರಾಗಮಾಲಿಕಾ "ಪದ"ವಾಗಿದೆ.

ಜಾವಳಿ

ಜಾವಳಿ ಪದವು ಮೊದಲು ಕಂಡು ಬರುವುದೇ ಕನ್ನಡದಲ್ಲಿ, ಚಾವಡಿ ಎಂದು ವಾಡಿಕೆಯಲ್ಲಿ ಇದ್ದುದು ಜಾವಳಿ ಎಂದಾಯಿತು. ಆದರೆ ಆರಂಭದಲ್ಲಿ ವೈರಾಗ್ಯ ಪ್ರಧಾನ ವಸ್ತುವಾಗಿದ್ದ ಈ ಜಾವಳಿಗಳು ಶೃಂಗಾರ ಭಾವಕ್ಕೆ ತಿರುಗಿದ್ದು ಕುತೂಹಲದ ಸಂಗತಿ. ಜಾವಳಿಯೂ ಇತರ ಗೇಯರಚನೆಗಳಂತೆ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳಿಂದ ಕೂಡಿರುತ್ತದೆ. ಸಾಂಪ್ರದಾಯಿಕ ಸಂಗೀತಕ್ಕೂ ಜನಸಾಮಾನ್ಯರಿಗೂ ಸೇತುವೆಯಂತಿರುವ ಜಾವಳಿಗಳ ಮಹತ್ವವನ್ನು ನಿರ್ಲಕ್ಷಿಸುವಂತಿಲ್ಲ. ಇವು ಚುರುಕುನಡೆ, ರತಿ ರಾಗದ ಅಂತರ್ಗತ ಸೌಂದರ್ಯ, ಅಪರೂಪವಾದ ಮಧುರ ಭಕ್ತಿಯ ಶೃಂಗಾರಭಾವಗಳ ಕಾರಣ. ಇವು ಪಂಡಿತರಿಗೂ ಜನಸಾಮಾನ್ಯರಿಗೂ ಪ್ರಿಯವಾದವು. ದಾಸರಲ್ಲಿ ಅನೇಕರು ಜಾವಳಿಗಳನ್ನು ರಚಿಸಿದ್ದಾರೆ. ಪುರಂದರದಾಸರ "ನೀರೆ ನೀ ಕರೆತಾರೆ ಮಾರಸುಂದರನ". ಈ ಜಾವಳಿಯಲ್ಲಿ

ಕೃತೀಯ ನಿರೂಪಕ ಭಕ್ತನಾದ ಕವಿಯು ಆಗಬಹುದು. ಅಂತೆಯೇ ವಿರಹ ಖಾತರಳಾದ ಸಖಿಯ ಒಬ್ಬಳ ಧ್ವನಿಯು ಆಗಬಹುದು. (ಉಲ್ಲೇಖ ದಾಸಸಾಹಿತ್ಯದಲ್ಲಿ ದ್ವೈತ ದರ್ಶನ, ಸಂಗೀತದ ಮೌಲ್ಯ, ಪೂರ್ವೋಕ್ತ ಪುಟ 84).

15ನೇ ಶತಮಾನದಲ್ಲಿ ಕವಿಲಿಂಗನ ಶೃಂಗಾರ ಪದಗಳು, ತರುವಾಯ 17ನೇ ಶತಮಾನದ ಚಿಕ್ಕದೇವರಾಜ ಮತ್ತು ಅವನ ಮಗ ಕಂಠೀರವ ರಾಜರುಗಳನ್ನು ಸಂಬೋಧಿಸಿ ಅವರ ಮಂತ್ರಿ ತಿರುಮಲಾಂಬಾಚಾರ್ಯ ಬರೆದ ಶೃಂಗಾರದ ಪದಗಳು ಜಾವಳಿಗಳ ಬೆಳವಣಿಗೆ ಇತಿಹಾಸದಲ್ಲಿ ಪ್ರಮುಖವಾದವು. 18ನೇ ಶತಮಾನದಲ್ಲಿ ಉತ್ತರಾರ್ಧದಲ್ಲಿ ರಚನೆಯಾದ ಜಾವಳಿಗಳಿಗೂ ಶೃಂಗಾರವೇ ಮೂಲ ಎಂಬ ಅಭಿಪ್ರಾಯವಿದೆ.

ತಿಲ್ಲಾನ

ಮುಖ್ಯವಾಗಿ ನಾಟ್ಯಕ್ಕಾಗಿ ರಚಿತವಾಗಿರುವ ಈ ರಚನೆಯು ಜತಿಗಳಿಂದಲೇ ಆರಂಭವಾಗುತ್ತದೆ. ಮಾತು, ಜತಿ ಮತ್ತು ಸ್ವರಗಳಿಂದ ಕೂಡಿ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನು ಒಳಗೊಂಡಿರುತ್ತದೆ. ಸುಂದರವಾದ ಸಂಗತಿಗಳ ಪ್ರಯೋಗದಿಂದ ಕೂಡಿರುವ ಈ ರಚನೆಗಳನ್ನು ಉತ್ತರಾದಿ ಸಂಗೀತದ **ತರಾನ**ಕ್ಕೆ ಹೋಲಿಸಬಹುದು. ಇದರಲ್ಲಿ ಬರುವ ಕ್ಲಿಪ್ತ ಸಾಹಿತ್ಯವು ಶೃಂಗಾರರಸ ಪ್ರಧಾನವಾಗಿಯೂ ಅಥವಾ ಆಶ್ರಯದಾತನ ಸ್ತೋತ್ರವಾಗಿಯೂ ಇರುತ್ತದೆ. ಇದನ್ನು ರಚಿಸಿದವರಲ್ಲಿ ಮಹಾವೈದ್ಯನಾಥಅಯ್ಯರ್, ಮೈಸೂರು ಸದಾಶಿವರಾಯರು, ವೀಣೆ ಶೇಷಣ್ಣ, ರಾಮನಾಡ್ ಶ್ರೀನಿವಾಸ್ ಅಯ್ಯಂಗಾರ್, ಪಟ್ನಂಸುಬ್ರಹ್ಮಣ್ಯಅಯ್ಯರ್, ಮೈಸೂರು ಪಲ್ಲವಿಗೋಪಾಲಯ್ಯ, ತಂಜಾವೂರ್ ಪೊನ್ನಯ್ಯಪಿಳ್ಳೆ, ಲಾಲ್ಗುಡಿ ಜಿ.ಜಯರಾಮನ್ ಮುಂತಾದವರು ಪ್ರಮುಖರಾಗಿದ್ದಾರೆ.

ಅಧ್ಯಾಯ ಏಳು

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆ. ರಾಗಮಾಲಿಕೆಯ ಪ್ರಮುಖ ಲಕ್ಷಣಗಳು, ರಾಗಮಾಲಿಕೆಗಳ ವಿಧಾನಗಳು.

ರಾಗಮಾಲಿಕೆ ಎಂದರೇನು ?

ಕಾವ್ಯ ಭಾಗವೊಂದರಲ್ಲಿ ಏಳೆಂಟು ರಾಗಗಳು, ಒಂದೇ ಗುಚ್ಛದಲ್ಲಿದ್ದು ಹಲವಾರು ಪುಷ್ಪಗಳು ಒಂದೇ ಮಾಲೆಯಲ್ಲಿ ಬಣ್ಣ ಬಣ್ಣದ ಹೂವುಗಳು– ಇದೇ ಬೇರೆ ಬೇರೆ ರಾಗ ಪುಷ್ಪಗಳ ಮಾಲಿಕೆ – **"ರಾಗಮಾಲಿಕೆ"**. ರಾಗಮಾಲಿಕೆ ಎಂಬುದು ಹೆಸರೇ ಸೂಚಿಸುವಂತೆ ರಾಗಗಳ ಸರಣಿ, ಕರ್ನಾಟಕ ಸಂಗೀತದಲ್ಲಿ ಬಹಳ ಜನಪ್ರಿಯವಾದ ರಾಗಮಾಲಿಕೆಗಳ ರಚನೆಗಳು ರಚನೆಯಾಗಿದೆ. ಇವು ಸಂತೋಷಕರ ಸಂಯೋಜನೆಗಳಾಗಿದ್ದು, ಸಾಹಿತ್ಯದ ವಿವಿಧ ಭಾಗಗಳನ್ನು, ವಿವಧ ರಾಗಗಳಿಗೆ ಹೊಂದಿಸಲಾಗುವುದು. ಒಂದು ರಾಗದಿಂದ ಇನ್ನೊಂದಕ್ಕೆ ಪರಿವರ್ತನೆ ಸಮಯದಲ್ಲಿ ಸುಗಮ ಮತ್ತು ಸುಮಧುರ ಸಂಗೀತದ ಹರಿವು ಇರುತ್ತದೆ. ಮತ್ತು ರಾಗಗಳ ಆಯ್ಕೆ ಅವುಗಳು ಕಾಣಿಸಿಕೊಳ್ಳುವ ಕ್ರಮವು ಕೇವಲ ಸೌಂದರ್ಯದ ಪರಿಗಣನೆಯ ಮೇಲೆ ಆಧಾರವಾಗಿರುತ್ತದೆ. ಅತಿ ಮುಖ್ಯ ಅಂಶವೆಂದರೆ ರಾಗಗಳ ನಡುವೆ ಸ್ಥಳಾಂತರಗೊಳ್ಳುವ ಅಂತರ ಭಾವನೆಯನ್ನು ತಪ್ಪಿಸಬೇಕು. ಸಂಗೀತದ ಹರಿವು ತುಂಬಾ ಮೃದುವಾಗಿರಬೇಕು ಅಲ್ಲದೆ ನಿಕಟ ಮಿತ್ರರಾಗವು ಸಾಮಾನ್ಯವಾಗಿ ಒಂದೇ ಸಂಯೋಜನೆಯಲ್ಲಿ ಕಂಡುಬರುವುದಿಲ್ಲ. ಸತತ ರಾಗಗಳು ತಾತ್ವಿಕವಾಗಿಯೂ ವಿಶಿಷ್ಟವಾಗಿಯೂ ಮಧುರ ಪಾತ್ರವನ್ನು ಹೊಂದಿರಬೇಕು.

ರಾಗ "ಕದಂಬಕ"ದ ಇಂದಿನ ಸ್ವರೂಪವೇ ರಾಗಮಾಲಿಕೆ ಎನ್ನಬಹುದು. ಇವು ಗದ್ಯ/ಪದ್ಯದಲ್ಲಿ ಇರಬಹುದು, ತಾಳಕ್ಕೆ ಹೊಂದಿಸದೇ ಇರಬಹುದು. ಆದರೆ ಬೇರೆ ಬೇರೆ ರಾಗಗಳನ್ನು ಹೊಂದಿರಬೇಕು ಎಂದು ಸೋಮೇಶ್ವರರು ಹೇಳುತ್ತಾರೆ.

ಪ್ರಾಚೀನ ಕಾಲದಲ್ಲಿ ಎಲ್ಲಾ ಕವಿಯ ರಚನೆಗಳನ್ನು ಪ್ರಬಂಧ, ಪದ, ಗೀತ, ಎಂಬ

ಪರ್ಯಾಯ ನಾಮಗಳಿಂದ ಗುರುತಿಸುತ್ತಿದ್ದರೂ ಇದರಲ್ಲಿ ಬೇರೆ ಬೇರೆ ಲಕ್ಷಣ ಸ್ವರೂಪಗಳನ್ನು ಹೊಂದಿದ್ದ ರಚನೆಗಳು ಒಗ್ಗೂಡಿದ್ದವು.

ಕಾವ್ಯ ಭಾಗ, ಶ್ಲೋಕ ಚೂರ್ಣಿಕೆ, ದಂಡಕ ವೃತ್ತ ಮುಂತಾದವುಗಳನ್ನು ಹಾಡಲು ಒಂದಕ್ಕಿಂತ ಹೆಚ್ಚು ರಾಗಗಳನ್ನು ಹಿಂದಿನಿಂದಲೂ ಬಳಸುತ್ತಿದ್ದರು. ಈ ರೂಢಿಯೇ ಸಂಗೀತದ ರಚನಾ ಪ್ರಕಾರಗಳಲ್ಲೂ ಬಳಸಲು ಪ್ರೇರಕವಾಗಿರಬಹುದು. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ರಾಗಮಾಲಿಕೆ ರಚನೆಗಳೆಂಬ ವಿಶಿಷ್ಟ ರಚನಾ ಪ್ರಕಾರವೇ ಬಂದುಂಟು.

ಪ್ರಾಚೀನ ರಚನೆಗಳಾದ ಪ್ರಬಂಧಗಳಿದ್ದ **"ರಾಗಾರ್ಣವ"***

"ರಾಗಕದಂಬ"ವೇ ಇಂದಿನ ರಾಗಮಾಲಿಕೆ ಮತ್ತು ಈ ರಾಗಮಾಲಿಕೆಗಳು ಮಾತೃಸ್ಥಾನದಲ್ಲಿವೆ ಎನ್ನಬಹುದು. ವಾದ್ಯಕಾರನಿಂದ ಪೂರ್ವ ನಿಯೋಜಿತವಾಗಿ ಧಾತು ಮಾತುಗಳನ್ನು ಈ ರಚನೆಗಳು ಹೊಂದಿರುತ್ತವೆ.

ರಾಗಮಾಲಿಕಾ ರಚನಕಾರನಿಗೆ ವಿಶೇಷ ಪಾಂಡಿತ್ಯ ಮತ್ತು ಜಾಣ್ಮೆ ಅಗತ್ಯ. ರಚನೆಯ ಬೇರೆ ಬೇರೆ ಖಂಡಿಕೆಗಳಿಗೆ ರಾಗವನ್ನು ಅಳವಡಿಸುವಾಗ, ಒಂದು ರಾಗದಿಂದ ಇನ್ನೊಂದು ರಾಗಕ್ಕೆ ಜಾರಿಕೊಳ್ಳುವಾಗ ರಾಗದ ಸಹಜ ಸೌಂದರ್ಯ ಮತ್ತು ನಿಖರ ರೂಪಗಳು ಎದ್ದು ಕಾಣುವಂತಿರಬೇಕು. ವಿಭಿನ್ನ ತಾಳಗಳ ಲಯಬದ್ಧ ಸಂಯೋಜನೆಯು ತಾಳಮಾಲಿಕೆಯಾಗಿದೆ. ಅದರ ಸಂಪೂರ್ಣ ತಾಳ ಒಂದೇ ರಾಗದಲ್ಲಿ ಇರಬಹುದು ಅಥವಾ ಇಲ್ಲದಿರಬಹುದು. ಸಾಮಾನ್ಯವಾಗಿ ಈ ರೀತಿಯ ಸಂಯೋಜನೆಗಳು ನೃತ್ಯವಾಚನಗಳಲ್ಲಿ ಸ್ಥಾನ ಪಡೆಯುತ್ತವೆ.

ರಾಗಮಾಲಿಕೆ ಮತ್ತು ತಾಳಮಾಲಿಕೆಯ ಮಿಶ್ರಣವನ್ನು **"ರಾಗತಾಳಮಾಲಿಕೆ"** ಎಂದು ಕರೆಯಲಾಗುತ್ತದೆ ಪ್ರತಿಯೊಂದು ವಿಭಾಗವು ವಿಭಿನ್ನ ತಾಳಕ್ಕೆ ಭಿನ್ನರಾಗಗಳಲ್ಲಿ ನಿರೂಪಿಸಲಾಗುತ್ತದೆ. ಪ್ರತಿಯೊಂದು ವಿಭಾಗದಲ್ಲಿಯೂ ರಾಗ ಮುದ್ರೆಯ ಅಂದರೆ ರಾಗದ ಹೆಸರನ್ನು, ತಾಳ ಮುದ್ರೆ ಜೊತೆಗೆ ತಾಳದ ಹೆಸರನ್ನು ಸಂಯೋಜಿಸುವುದು ವಾಡಿಕೆ. ಸಾಮಾನ್ಯವಾಗಿ ರಾಗಮಾಲೀಕೆಗಳು ಪ್ರತಿ ವಿಭಾಗಕ್ಕೂ ಈ ರೀತಿಯಾಗಿ ರಾಗ ಮುದ್ರೆಗಳನ್ನು ಹೊಂದಿರುತ್ತದೆ.

ಕರ್ನಾಟಕ ಸಂಗೀತ ವ್ಯವಸ್ಥೆಯು ಸಾವಿರಾರು ರಾಗಗಳು ಮತ್ತು ನೂರಾರು ತಾಳಗಳ ಭಂಡಾರವಾಗಿರುವುದರಿಂದ ಅನೇಕ ಸಂಯೋಜಕರು ಈ ವೈಶಿಷ್ಟ್ಯವನ್ನು ರಾಗಮಾಲಿಕಾ ಸಂಯೋಜನೆಗಳೊಂದಿಗೆ ಬಳಸಿಕೊಂಡಿದ್ದಾರೆ.

ರಾಗಮಾಲಿಕೆಗಳ ಪ್ರಮುಖ ಲಕ್ಷಣಗಳು.

1. ರಾಗಮಾಲಿಕೆಗಳು ಶೃಂಗಾರ ರಸ ಅಥವಾ ಭಕ್ತಿರಸಯುತವಾದ ಸಾಹಿತ್ಯವನ್ನು ಹೊಂದಿ ಪಲ್ಲವಿ ಅನುಪಲ್ಲವಿ ಮತ್ತು ಚರಣಗಳ ಅನೇಕ ರಾಗಮಾಲಿಕೆಯಲ್ಲಿ ಇವು ರಚಿತವಾಗಿರುವುವು.
2. ರಾಗಮಾಲಿಕೆಗಳಲ್ಲಿ ಇಂತಿಷ್ಟೇ ರಾಗಗಳ ಬಳಕೆ ಇರಬೇಕೆಂಬ ನಿಯಮವಿಲ್ಲ. ಇಂದು ರಾಗಮಾಲಿಕೆಗಳಲ್ಲಿ ಕನಿಷ್ಠ ಎರಡು ರಾಗಗಳಿಂದ 108 ರಾಗಗಳನ್ನು ಬಳಸಿರುವುದು ಕಾಣ ಬರುತ್ತದೆ.
3. ರಾಗಮಾಲಿಕೆಯಲ್ಲಿ ಪಲ್ಲವಿ, ಅನುಪಲ್ಲವಿ ಮತ್ತು ಹಲವು ಚರಣಗಳಿರುತ್ತವೆ. ಕೆಲವು ರಚನೆಗಳಲ್ಲಿ ಅನುಪಲ್ಲವಿ ಇರುವುದಿಲ್ಲ. ರಾಗಮಾಲಿಕೆಯಲ್ಲಿ ಪ್ರತಿಯೊಂದು ಚರಣ ಬೇರೆ ಬೇರೆ ರಾಗದಲ್ಲಿರುತ್ತದೆ ಮತ್ತು ಒಂದೇ ಸಮನಾದ ಅವರ್ತವುಳ್ಳದ್ದು.
4. ರಚನಕಾರರು ಯಾವುದೇ ರಾಗ ತಾಳ, ಭಾಷೆಯನ್ನು ಬಳಸುವಲ್ಲಿ ಹಾಗೂ ಅಲಂಕಾರಿಕ ಅಂಶಗಳನ್ನು ಅಳವಡಿಸುವಲ್ಲಿ ಸ್ವತಂತ್ರನಿರುತ್ತಾನೆ.
5. ತಾಳಕ್ಕೆ ತಕ್ಕಂತೆ ಆವರ್ತಗಳು ವರ್ಣ ಕ್ರಮವನ್ನು ಅನುಸರಿಸಿ ಆಯಾ ರಾಗದ ಜೀವಸ್ವರದಲ್ಲಿ ಸಾಹಿತ್ಯವನ್ನು ಪ್ರಾರಂಭಿಸುವಂತಿದ್ದು ಮುಕ್ತಾಯ ಸ್ವರಗಳನ್ನು ಹೊಂದಿ ಪಲ್ಲವಿಯನ್ನು ಸೇರುವ ಕ್ರಮದಲ್ಲಿರುತ್ತದೆ.
6. ಕೆಲವು ರಾಗಮಾಲಿಕೆಗಳು ವಿಲೋಮ ಕ್ರಮ ಅನುಸರಿಸಿ ರಾಗ ಒಂದೊಂದಕ್ಕೂ ಒಂದು ಅವರ್ತಸ್ವರ ಸಾಹಿತ್ಯ ಪಡೆದು ಪಲ್ಲವಿಗೆ ಹಿಂತಿರುಗುವವರೆಗೂ ಎಷ್ಟು

ರಾಗಗಳು ಇರುವುದೋ ಎಲ್ಲಾ ರಾಗಗಳಲ್ಲೂ ಸ್ವರ ಸಾಹಿತ್ಯವನ್ನು ರಚಿಸಿರುವ ಬಂಧಗಳು ಕಂಡು ಬರುತ್ತವೆ.

7. ರಾಗಮಾಲಿಕೆಯ ಕ್ರಮವನ್ನು ಅನುಸರಿಸಿ ರಾಗ ತಾಳಗಳನ್ನು ನಿರೂಪಿಸಿರುವ ರಾಗ ತಾಳಮಾಲಿಕೆಯು ಕಂಡುಬರುವುದು.

8. ವಾಗ್ಗೇಯಕಾರ ಮುದ್ರೆ, ರಾಗ ಮುದ್ರೆ, ಅಪರೂಪವಾಗಿ ಪೋಷಕ ಮುದ್ರೆ, ಪ್ರಬಂಧ ಮುದ್ರೆಗಳಿರುವುದುಂಟು. ತಾಳಮಾಲಿಕೆಯಾಗಿದ್ದರೆ ತಾಳದ ಅಂಕಿತವು ಇರುವುದುಂಟು.

9. ಚರಣಗಳು ಅನೇಕ ರಾಗಗಳಲ್ಲಿ ಸಂಯೋಜಿಸಲ್ಪಟಿಟರುತ್ತದೆ. ಪ್ರತಿಯೊಂದು ಚರಣದ ನಂತರ ಚಿಟ್ಟೆಸ್ವರವಿದ್ದು ಇದನ್ನು ಹಾಡಿ ಪುನಃ ಪಲ್ಲವಿಯನ್ನು ಹಾಡಲಾಗುವುದು. ಈ ಚಿಟ್ಟೆಸ್ವರಕ್ಕೆ **ಮಕುಟಸ್ವರ**ವೆಂದು ಹೆಸರು. ರಾಗಮಾಲಿಕೆಯಲ್ಲಿ ಬಂದಿರುವ ಎಲ್ಲಾ ರಾಗಗಳಲ್ಲಿ ಒಂದು ಅಥವಾ ಅರ್ಧ ಆವರ್ತದಷ್ಟು ವಿಲೋಮ ಕ್ರಮದಲ್ಲಿ ಸಾಮಾನ್ಯವಾಗಿ ವಾಗ್ಗೇಯಕಾರರುಗಳು ರಚಿಸಿರುತ್ತಾರೆ.

10. ಕೆಲವು ರಾಗಮಾಲಿಕಾ ತಾನ ವರ್ಣಗಳಲ್ಲಿ ಪೂರ್ವಾರ್ಧ, ಪಲ್ಲವಿ, ಅನುಪಲ್ಲವಿ, ಮುಕ್ತಾಯಸ್ವರ ಮತ್ತು ಉತ್ತರಾರ್ಧವು ಚರಣ ಮತ್ತು ಎತ್ತುಗಡೆ ಸ್ವರಗಳು ವಿವಿಧ ರಾಗಗಳನ್ನು ಹೊಂದಿರುತ್ತದೆ.

11. ರಾಗಮಾಲಿಕೆಯೊಂದರಲ್ಲಿ ಅಳವಡಿಸಿರುವ ರಾಗಗಳ ಒಟ್ಟು ಸಂಖ್ಯೆಯ ಆಧಾರದ ಮೇಲೆ ಅದನ್ನು ಪಂಚರಾಗ ಮಾಲಿಕೆ, ಷಡ್ರಾಗಮಾಲಿಕೆ, ಅಷ್ಟರಾಗಮಾಲಿಕೆ, ನವರಾಗಮಾಲೀಕೆ, ನಕ್ಷತ್ರರಾಗಮಾಲಿಕೆ ಮುಂತಾಗಿ ಕರೆಯುತ್ತಾರೆ. ಇವುಗಳಲ್ಲಿ ಕೆಲವು ಸಂಗೀತ ವೇದಿಕೆಗಳಲ್ಲಿ ಆಗಾಗ್ಗೆ ಕೇಳಿಬರುತ್ತವೆ, ಇತರವು ಸ್ವಲ್ಪ ಅಪರೂಪ.

12 ಕೆಲವೊಂದು ಸಂದರ್ಭದಲ್ಲಿ ಚಿಟ್ಟೆಸ್ವರಕ್ಕೂ ಸಾಹಿತ್ಯಗಳನ್ನು ಹೊಂದಿಕೊಂಡಿವೆ.

13. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಪ್ರಮುಖ ಹಾಗೂ ವಿಶಿಷ್ಟ ರಾಗಮಾಲಿಕಾ ರಚನೆಕಾರರು: ರಾಮಸ್ವಾಮಿ ದೀಕ್ಷಿತರು ಮುತ್ತುಸ್ವಾಮಿ ದೀಕ್ಷಿತರು, ಸುಬ್ಬರಾಯ ದೀಕ್ಷಿತರು, ಮಹಾವೈದ್ಯನಾಥ ಅಯ್ಯರ್, ಸ್ವಾತಿ ತಿರುನಾಳರು, ಮೈಸೂರು ವಾಸುದೇವಾಚಾರ್ಯರು, ಹರಿಕೇಶನಲ್ಲೂರು, ಮುತ್ತಯ್ಯಭಾಗವತರು, ಸಿ.ರಂಗಯ್ಯನವರು, ತಂಜಾವೂರು ಸಹೋದರ ಚತುಷ್ಟಯರು, ಮೈಸೂರು ಸದಾಶಿವರಾಯರು ಡಾ॥ ಬಾಲಮುರುಳಿಕೃಷ್ಣ, ಸುಗುಣ ಪುರುಷೋತ್ತಮನ್.

ಸಂಗೀತಾತ್ಮಕ ಚಿಂತನ ಸೌರಭ– ಲೇಖಕರು ಡಾಕ್ಟರ್ ಸುಕನ್ಯಾ ಪ್ರಭಾಕರ್ (ರಾಗಮಾಲಿಕ ಪಲ್ಲವಿ) ಪುಟ 187

ಅಧ್ಯಾಯ ಎಂಟು

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳ ಪರಿಕಲ್ಪನೆ

ಸಾಮಾನ್ಯವಾಗಿ ರಾಗಮಾಲಿಕೆಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು.

1. ಮನೋಧರ್ಮ ಸಂಗೀತದಲ್ಲಿ ರಾಗಮಾಲಿಕೆ.
2. ಸಂಗೀತದ ರಚನಾ ಪ್ರಕಾರಗಳಲ್ಲಿ ರಾಗಮಾಲಿಕೆ

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮನೋಧರ್ಮ ರಾಗಮಾಲಿಕೆ

ಭಾರತೀಯ ಶಾಸ್ತ್ರೀಯ ಸಂಗೀತದ ವಿಶಿಷ್ಟ ಪ್ರದರ್ಶನವು ಎರಡು ಭಾಗಗಳನ್ನು ಹೊಂದಿದೆ; **ಕಲ್ಪಿತ ಸಂಗೀತ ಹಾಗೂ ಮನೋಧರ್ಮ ಸಂಗೀತ"**

ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಲ್ಲಿ ಮನೋಧರ್ಮ ಸಂಗೀತಕ್ಕೆ ಸಿಂಹಪಾಲು, ಮನೋಧರ್ಮ ಸಂಗೀತವು ವಿಶ್ವ ವ್ಯಾಪಿಯಾದುದು. ಕಲಾಕೌಶಲ್ಯವನ್ನು ಜಾಗೃತಗೊಳಿಸುವ ಈ ಸಂಗೀತವು ಸರ್ವತೋಮುಖವಾದ ಬೆಳವಣಿಗೆಗೆ ಚೇತೋಹಾರಿಯಾಗಿದೆ. ಭಾರತೀಯ ಸಂಗೀತ ಪದ್ಧತಿಗಳಾದ ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತಗಳೆರಡರಲ್ಲೂ ಮನೋಧರ್ಮ ಸಂಗೀತವು ಬಹು ಪ್ರಮುಖವಾಗಿ ಪ್ರಯೋಗವಾಗಿದೆ.

ಕಲ್ಪಿತ ಸಂಗೀತ

ನಿಬದ್ಧ ಸಂಗೀತ, ಸಾಹಿತ್ಯ ಮತ್ತು ತಾಳದಿಂದ ಬದ್ಧವಾಗಿರುವ ಸಂಗೀತ. ನಿಬದ್ಧ ಸಂಗೀತದ ಭಾಗಗಳನ್ನು ಸಂಯೋಜಿಸಲಾಗಿದೆಯಾದರೂ, ಸಾಹಿತ್ಯ, ಮತ್ತು ತಾಳದ ನಿರ್ಬಂಧಗಳೊಳಗೆ ಇದಕ್ಕೆ ಇನ್ನೂ ಹೆಚ್ಚಿನ ಸುಧಾರಣೆಗೆ ಅವಕಾಶಗಳಿರುತ್ತವೆ. ಸಂಗೀತವನ್ನು ರಚನೆ ಮಾಡಿ, ನೆನಪಿನಲ್ಲಿಟ್ಟುಕೊಂಡು, ಅಭ್ಯಾಸ ಮಾಡಿ ಬಳಿಕ ಹಾಡುವ ಪದ್ದತಿಯಿತ್ತು.

ಮನೋಧರ್ಮ ಸಂಗೀತವು ಕಲಾವಿದನ ಸೃಜನಶೀಲತೆಯನ್ನು ಒಳಗೊಂಡಿದೆ. ರಾಗಾಲಾಪನೆ, ಸ್ವರ ಕಲ್ಪನೆ, ನೆರವಲ್ ಹಾಗೂ ರಾಗ – ತಾನ – ಪಲ್ಲವಿ. ಗಾಯನ ವಾದನಗಳಲ್ಲಿ ಕಂಡುಬರುತ್ತವೆ.

ರಾಗ ಆಲಾಪನೆ :

ರಾಗದ ಅವಿರ್ಭಾವದೊಡನೆ ರಾಗಲಾಪನೆ ಮತಂಗನ ಕಾಲಕ್ಕೆ ಒಂದು ಶಾಸ್ತ್ರ ಸಮ್ಮತವಾದ ಲಕ್ಷಣ ಪ್ರಸಿದ್ದವಾಗಿ ರಾಗ ಮತ್ತು ರಾಗಾಲಾಪನೆ ಲಕ್ಷಣಗಳುಳ್ಳ ಗ್ರಂಥವಾಯಿತು. ಸಂಸ್ಕೃತ ಶ್ಲೋಕಗಳು ತಮಿಳು, ವಿರುತ್ತಗಳು, ವೃತ್ತಗಳು, ತೆಲುಗು ಮತ್ತು ಕನ್ನಡ ಭಾಷೆಗಳ ಕಂದಪದ್ಯ ಉಗಾಭೋಗಗಳನ್ನು ಭಾವಕ್ಕನುಗುಣವಾಗಿ ರಾಗಗಳಲ್ಲಿ ವಿಸ್ತರಿಸಿ ಹಾಡುವ ಪದ್ಧತಿಗಳು ರಾಗಾಲಾಪನೆಗೆ ನಾಂದಿಯಾಯಿತೆನ್ನಬಹುದು.

ರಾಗಾಲಾಪನೆ ಎಂಬ ಪದವು ಎರಡು ಪದಗಳನ್ನು ಒಳಗೊಂಡಿದೆ – ರಾಗ ಮತ್ತು ಆಲಾಪನೆ, ರಾಗವನ್ನು ಮಾತಿಲ್ಲದೆ ತಾಳವಿಲ್ಲದೆ ಆಶುಸ್ಫೂರ್ತಿಯಿಂದ ವಿಸ್ತರಿಸಿ ಹಾಡಿ ನುಡಿಸಿದರೆ ಆಲಾಪನೆ ಎನಿಸಿಕೊಳ್ಳುತ್ತದೆ. ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ರಾಗವನ್ನು ಪರಿಚಯಿಸಲು ಪ್ರಾಥಮಿಕ ಸ್ವರೂಪವಾಗಿದೆ.

ಒಂದು ರಾಗವನ್ನು ಸಂಗೀತದ ಮಾಪಕವೆಂದು ವ್ಯಾಖ್ಯಾನಿಸಬಹುದು, ಜೊತೆಗೆ ಲಕ್ಷಣಗಳು ಮತ್ತು ಲಕ್ಷ್ಯಗಳ ಸಮೂಹದೊಂದಿಗೆ ಸ್ಥಿರವಾದ, ಗುರುತಿಸಬಹುದಾದ ಸಂಗೀತದ ಚೌಕಟ್ಟನ್ನು ಉಂಟುಮಾಡುತ್ತದೆ. ಕೇಳುವ, ಕಲಿಯುವ, ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಯು ನಿರ್ದಿಷ್ಟ ರಾಗದ ಲಕ್ಷಣ ಅಂಶವನ್ನು ಕಲಿಯಬಹುದು.

ಪ್ರದರ್ಶಕನು ಸಂಗೀತದ ಪ್ರದರ್ಶನದ ಮೂಲಕ ರಾಗವನ್ನು ಸುಧಾರಿಸಲು ಮತ್ತು ಅಭಿವೃದ್ಧಿಪಡಿಸಲು ಪ್ರಯತ್ನಿಸಬಹುದು. ಕಲಾವಿದರು ತಮ್ಮ ನಿರೂಪಣೆಗೆ ಲಕ್ಷ್ಯವನ್ನು ಅನ್ವಯಿಸಬೇಕು. ಆಲಾಪನವು ಅನಿಬದ್ಧ ಸಂಗೀತದ ಸ್ವರೂಪವಾಗಿದೆ.

ಗ್ರಹಾಂಶ ನ್ಯಾಸಾದಿಗಳು ಮಂದ್ರ ತಾರಸ್ಥಾಯಿ ಅಥವಾ ಅದಕ್ಕೆ ಸೇರಿದ ಸ್ವರಗಳು ರಾಗಕ್ಕೆ ಇರಬೇಕಾದ ನಿಯಮಗಳಾದ ಅಲ್ಪತ್ವ, ಬಹುತ್ವ, ಷಾಡವ ಮತ್ತು ಔಡವ ಈ ಲಕ್ಷಣ ಕ್ರಮಗಳನ್ನು ರಾಗಾಲಾಪನೆ ಹೊಂದಿರಬೇಕು. ರಾಗವರ್ಗೀಕರಣ ಅಲ್ಲದೆ ರಾಗಾಲಾಪನೆಯ

ಪದ್ಧತಿಯನ್ನು ಲಾಕ್ಷಣಿಕರು ವಿವರಿಸಿರುವರು. ಆಲಾಪನೆಯನ್ನು ವಿವಿಧ ಹಂತಗಳಲ್ಲಿ ಸುಧೀರ್ಘವಾಗಿ ವಿಸ್ತರಿಸಿ ಹಾಡುವ ಆಲಾಪನೆಯನ್ನು ಪಲ್ಲವಿಗೆ ಪೂರ್ವಭಾವಿಯಾಗಿ, ನಿರೂಪಿಸಲಾಗುತ್ತಿತ್ತು. ಆಲಾಪನೆಯನ್ನು ಶೃತಿ ಬದ್ಧವಾಗಿ ಸ್ವರ ಸ್ಥಾನಬದ್ಧವಾಗಿ ಆಯಾ ರಾಗಕ್ಕೆ ಸೂಕ್ತವಾಗಿರುವ ಗಮಕಗಳನ್ನು ಮಾತ್ರ ಪ್ರಯೋಗಿಸಿ ಸಂಗತಿಗಳನ್ನು ಮಾತ್ರ ಆಲಾಪನೆಯಲ್ಲಿ ಹೆಣೆಯುವಾಗ ರಾಗಮಾಲಿಕೆಗಳಂತೆ ರಾಗಗಳನ್ನು ರೂಪಿಸುವರು ಮತ್ತು ಕಲಾವಿದರು ಹಾಡುವರು.

ತಾನ: ಗಾಯನದಲ್ಲಿ ಪಲ್ಲವಿಗೆ ಪೂರ್ವಭಾವಿಯಾಗಿ ಹಾಡುವ ಸಂಪ್ರದಾಯವಿದ್ದರೆ ವೀಣೆಯಲ್ಲಿ ಕೃತಿಗಳಿಗೂ ಸ್ಥಾನವನ್ನು ನುಡಿಸುವ ಪದ್ಧತಿ ಇದೆ. ತಾನು ಮಧ್ಯಮ ಕಾಲದಲ್ಲಿ ನಿರೂಪಿತವಾಗುತ್ತದೆ. ವಿಳಂಬವಾಗಿ ತಾನವನ್ನು ಹಾಡುವುದು ಸಂಪ್ರದಾಯಬದ್ಧವೆನಿಸುವುದಿಲ್ಲ. ಗಾಯಕನು ತನ್ನ ಕಂಠ ಸಾಮರ್ಥ್ಯದಿಂದ ರಾಗವನ್ನು ವಿಸ್ತಾರಗೊಳಿಸುವ ಸ್ವರ ಪುಂಜಗಳೇ ತಾನಗಳಾಗಿರುತ್ತವೆ. **"ತನು ವಿಸ್ತಾರ"** ಎಂಬ ಧಾತುವಿನಿಂದ ಹುಟ್ಟಿದ ತಾನ ಶಬ್ದ ವಿವಿಧ ರಾಗಗಳಲ್ಲಿ ಬಳಸುವ ಸ್ವರಗಳ ಗಣಿತ ಸಂಖ್ಯೆಗಳಿಗನುಗುಣವಾಗಿ ತಾನಗಳಾಗುತ್ತದೆ. ಇದನ್ನೇ **"ಸಂಗೀತದಾಮೋದರ"** ಗ್ರಂಥದಲ್ಲಿ ಹೇಳಲಾಗಿದೆ. ರಾಗ ಹೊಂದಿರುವ ಸ್ವರಗಳನ್ನು ಒಂದು ಕ್ರಮದಲ್ಲಿ ವಿಸ್ತರಿಸಿ ಹಾಡುವುದೇ ತಾನವೆಂದೆಣಿಸಿಕೊಳ್ಳುತ್ತದೆ.

ಶುದ್ಧ ತಾನವು ಒಂದೇ ರಾಗದ ಪೂರ್ಣ ಸ್ವರೂಪವನ್ನು ಅಭಿವ್ಯಕ್ತಿಸಿದರೆ ಎರಡು ಮೂರು ರಾಗಗಳ ಛಾಯೆ ಕಂಡು ಬರುವಂತಿದ್ದು ರಾಗಮಾಲಿಕೆಯ ರೂಪವನ್ನು ಪಡೆದಿರುತ್ತವೆ.

ಘನರಾಗ ಪಂಚಕದ ತಾನಗಳಿಗೆ ನಮ್ಮ ಪೂರ್ವಿಕರು ಹೆಚ್ಚು ಮಾನ್ಯತೆ ನೀಡಿ ಪಲ್ಲವಿ ಗಾಯನದಲ್ಲಿ ನಿರ್ದಿಷ್ಟ ರಾಗಕ್ಕೆ ಮುಂಚಿತವಾಗಿ ಘನರಾಗಗಳಾದ ನಾಟ, ಗೌಳ, ಆರಭಿ, ವರಾಳಿ ಶ್ರೀರಾಗಗಳ ಸ್ಥಾನವನ್ನು ಹಾಡಿ ನಂತರ ಪಲ್ಲವಿ ನಿರೂಪಣೆಗೆ ಪ್ರಾರಂಭಿಸುವುದು

ವಾಡಿಕೆಯಲ್ಲಿದೆ. ಇದೇ ರೀತಿಯಲ್ಲಿ ದ್ವಿತೀಯ ಘನಪಂಚಕಗಳಾದ ನಾರಾಯಣಗೌಳ, ರೀತಿಗೌಳ, ಕೇದಾರ, ಮತ್ತು ಬೌಳಿ ರಾಗಗಳಲ್ಲಿ ತಾನವನ್ನು ಹಾಡುತ್ತಿದ್ದರು. ತಾನವು ವಿಸ್ತಾರವಾದ ರಾಗಾಲಾಪನೆಗೆ ಕಿರೀಟವಾಗಿದ್ದು ಮನೋಜ್ಞವೆನಿಸುತ್ತದೆ. ತಾನವನ್ನು ವಿವಿಧ ರಾಗಗಳಲ್ಲಿ ಹಾಡಿದಾಗ ರಾಗ ಮಾಲೀಕ ತಾನವೆನ್ನುತ್ತಾರೆ. ದೈನಿಕರಲ್ಲಿ ಪರಂಪರಾಗತವಾಗಿ ಘನರಾಗಗಳಲ್ಲಿ ತಾನವನ್ನು ನುಡಿಸುವ ಕ್ರಮವು ನಡೆದು ಬಂದಿದೆ.

ಸ್ವರ ಕಲ್ಪನೆ :

ಕಲ್ಪನಾಸ್ವರಗಳನ್ನು ಹಾಡುವಾಗ (ರಾಗತಾನಪಲ್ಲವಿ) ರಾಗಮಾಲಿಕಾ ಸ್ವರಗಳನ್ನು ಹಾಡುವುದು ಸರ್ವೇ ಸಾಮಾನ್ಯವಾಗಿದೆ. ಇದು ಬಹಳ ಪ್ರಸಿದ್ಧಿಯನ್ನೂ ಪಡೆದಿದೆ. ಪ್ರೇಕ್ಷಕರೂ ಉತ್ಸುಕರಾಗಿ ಕೇಳಲು ಕಾಯುತ್ತಿರುತ್ತಾರೆ.

ರಾಗಮಾಲಿಕಾ ಪಲ್ಲವಿ:

ಇತ್ತೀಚಿನ ದಿನಗಳಲ್ಲಿ ಸಂಗೀತ ಪ್ರದರ್ಶನಗಳಲ್ಲಿ ರಾಗಮಾಲಿಕ ಪಲ್ಲವಿಗಳು ಬಹಳವಾಗಿ ಮನ್ನಣೆ ಗಳಿಸಿದೆ. ಪಲ್ಲವಿ ಸಾಹಿತ್ಯದಲ್ಲಿ ಮೂರು ಅಥವಾ ನಾಲ್ಕು ರಾಗಗಳ ಹೆಸರನ್ನು ಚಮತ್ಕಾರವಾಗಿ ಸೇರಿಸಿ ರಚಿಸಿರುವ ಪಲ್ಲವಿಗಳಿಗೆ **ರಾಗಮಾಲಿಕಾ ಪಲ್ಲ**ವಿಗಳೆಂದು ಹೆಸರು. ಕೆಲವು ಪಲ್ಲವಿಗಳ ಒಂದೊಂದು ಅಂಗವನ್ನು ಒಂದೊಂದು ರಾಗದಲ್ಲಿ ಹಾಡುವ ಪದ್ಧತಿ ಇರುತ್ತದೆ ಮತ್ತು ಸಾಹಿತ್ಯದಲ್ಲಿ ನಾವು ಹಾಡುವ ರಾಗದ ಮುದ್ರೆಯನ್ನು ಸಹ ಸೂಚಿಸುತ್ತದೆ. ಪಲ್ಲವಿಯ ಸಾಹಿತ್ಯವು ಮಣಿಪ್ರವಾಳ ಭಾಷೆಯಲ್ಲೂ ಇರುತ್ತದೆ.

1.ಶಂಕರಾಭರಣನ್ನೈ ಅಲ್ಲೈ ತೋಡಿ ವಾಡಿ ಕಲ್ಯಾಣಿದರ್ಬಾರಕ್

2.ಮೋಹನಾಂಗಿ ಕಲ್ಯಾಣಿ ಪಾಹಿಮಾಂ ಆನಂದಭೈರವಿ.

3.ಮುರುಗ ಕಾರ್ತಿಕೇಯ ಗೌರಿತನಯ ಕಲಿಯುಗ ವರದ ಶರವಣಭವ

ಈ ರಾಗ ತಾನಪಲ್ಲವಿಯಲ್ಲಿ ಸಾಹಿತ್ಯವನ್ನು ಮುರುಗ–ಸಾವೇರಿ,ಕಾರ್ತಿಕೇಯ ಗೌರಿತನಯ–ಬೃಂದಾವನ ಸಾರಂಗ ಮತ್ತು ಶರವಣಭವ–ಷಣ್ಮುಖಪ್ರಿಯ ರಾಗಗಳಲ್ಲಿ ಅಳವಡಿಸಲಾಗಿದೆ.

ಈ ರಾಗಮಾಲಿಕಾ ಪಲ್ಲವಿಯನ್ನು ವಿ:ಶ್ರೀ ಸುಧಾರಘುನಾಥನ್‌ರವರು ಸುಮಾರು ಒಂದು ಗಂಟೆಗಳ ಕಾಲಾವಧಿಯಲ್ಲಿ ನಾಲ್ಕೂ ರಾಗಗಳಲ್ಲಿ ಆಲಾಪನೆ, ತಾನ, ಕಲ್ಪನಾ ಸ್ವರಗಳನ್ನು ಪ್ರಸ್ತುತಪಡಿಸಿ ರಾಗಗಳ ಸಂಪೂರ್ಣ ಚಿತ್ರಣ ನೀಡಿದ್ದಾರೆ.

ತಾಳಮಾಲಿಕಾ ಪಲ್ಲವಿ:

ತಾಳಮಾಲಿಕೆಯಲ್ಲಿ ಪಲ್ಲವಿಯನ್ನು ಹಾಡಲು ಒಳ್ಳೆಯ ವಿದ್ವತ್ತನ್ನು ಪಡೆದವರಿಗೆ ಮಾತ್ರ ಸಾಧ್ಯ. ಪಲ್ಲವಿ ಯಾವ ತಾಳದಲ್ಲಿದ್ಯೋ ಅದೇ ಅಕ್ಷರಕಾಲವುಳ್ಳ ಅನೇಕ ತಾಳಗಳಲ್ಲಿ ಪಲ್ಲವಿಯನ್ನು ಹಾಡಬಹುದು. ಇದಕ್ಕೆ ತಾಳಮಾಲಿಕಪಲ್ಲವಿ ಎಂದು ಹೆಸರು. ತಿರುವಟ್ಟೂರ್ ತ್ಯಾಗಯರ್, ಸುಗುಣಾಪುರುಷೋತ್ತಮನ್ ತಾಳಮಾಲಿಕೆಯ ಪಲ್ಲವಿಯನ್ನು ಹಾಡುವುದರಲ್ಲಿ ಬಹಳ ಪ್ರಸಿದ್ಧಿ ಪಡೆದಿದ್ದರೆಂದು ತಿಳಿದು ಬರುತ್ತದೆ.

ರಾಗತಾಳಮಾಲಿಕಾ ಪಲ್ಲವಿ:

ಪಲ್ಲವಿಯನ್ನು ರಾಗ ಮತ್ತು ತಾಳ ಇವೆರಡನ್ನು ವಿಧವಿಧವಾಗಿ ಹಾಡುವುದಕ್ಕೆ ರಾಗತಾಳಮಾಲಿಕಾ ಪಲ್ಲವಿ ಎಂದು ಹೆಸರು.

ರಾಗಮಾಲಿಕಾಸ್ವರ:

ಪಲ್ಲವಿಗೆ ಕಲ್ಪನಾ ಸ್ವರವನ್ನು ರಾಗಮಾಲಿಕೆಯಾಗಿಯೂ ಹಾಡುವ ಪದ್ಧತಿ ಇರುತ್ತದೆ. ಮೊದಲು ಪಲ್ಲವಿಗೆ ಅರಿಸಿಕೊಂಡ ರಾಗದಲ್ಲಿ ಕಲ್ಪನಾ ಸ್ವರವನ್ನು ಹಾಡಿ ಮುಗಿಸಿದ ನಂತರ ಬೇರೆ ಬೇರೆ ರಾಗಗಳಲ್ಲಿ ಕಲ್ಪನಾ ಸವರಗಳನ್ನು ಹಾಡಿ ಪಲ್ಲವಿಯ ಸಾಹಿತ್ಯವನ್ನು ರಾಗ ಮಾಲಿಕೆಯಾಗಿಯೇ ಹಾಡಬಹುದು ಅಥವಾ ಪಲ್ಲವಿ ಸಾಹಿತ್ಯವು ಮೊದಲು ಯಾವ ರಾಗದಲ್ಲಿದೆಯೂ ಅದೇ ರಾಗದಲ್ಲೂ ಇರಬಹುದು. ಇತ್ತೀಚಿನ ದಿನಗಳಲ್ಲಿ ರಾಗಮಾಲಿಕಾ ಪಲ್ಲವಿಗಳು ಸಂಗೀತ ವೇದಿಕೆಯಲ್ಲಿ ಬಹಳವಾಗಿ ಕಂಡುಬರುತ್ತದೆ.

ಗ್ರಹಭೇದ ರಾಗ ಮಾಲಿಕೆ:

ಗ್ರಹಭೇದವು ತುಂಬಾ ಸ್ವಾರಸ್ಯಕರವೂ ಅದ್ಭುತವಾದ ಸಂಗೀತ ಕಲಾನುಭೂತಿ. ರಾಗವೊಂದರ ಗ್ರಹಸ್ವರವನ್ನು ಕ್ರಮಕ್ರಮವಾಗಿ ಅದರ ಮುಂದಿನ ಸ್ವರಗಳ ಸ್ಥಾನಗಳಿಗೆ ಬದಲಿಸುತ್ತಾ ಬಂದರೆ–ಅಂದರೆ ರಾಗವೊಂದರ ಆಧಾರ ಷಡ್ಜದ ಬಳಿಕ ಬರುವ ರಿಷಭ ಗಾಂಧರಾಧಿಗಳನ್ನು ಕ್ರಮವಾಗಿ ಆಧಾರ ಷಡ್ಜಗಳೆಂದು ರೂಪಿಸಿಕೊಂಡು ಉಳಿದೆಲ್ಲ ಸ್ವರಗಳನ್ನು ಆ ಶ್ರುತಿಯಲ್ಲಿಯೇ ಹಾಡುತ್ತಾ ಬಂದರೆ ಮೊದಲು ರಾಗವೇ ಬೇರೆ ಬೇರೆ ರಾಗಗಳಂತೆ ಕೇಳತೊಡಗುತ್ತದೆ. ವೈಜ್ಞಾನಿಕವಾಗಿ ಇದನ್ನು ಫೇಸ್ ಶಿಫ್ಟ್ ಎನ್ನಬಹುದು. ಗ್ರಹಭೇದವನ್ನು ಅತಿ ಸಮರ್ಥವಾಗಿ ಅವಲೀಲೆಯಿಂದ ನಿರ್ವಹಿಸಬಲ್ಲ ಗಾಯಕನಿಗೆ ಶ್ರುತಿಯ ಮೇಲೆ ಅಸಾಧಾರಣವಾದ ಹತೋಟಿ ಇರಬೇಕು.

ಪ್ರಸಿದ್ಧ ಮೇಳಕರ್ತ ರಾಗ ನಟಭೈರವಿಯು ಗ್ರಹಭೇದ ಮಾಡಿದಾಗ ಷಡ್ಜವನ್ನು ಬದಲಾಯಿಸಿಕೊಳ್ಳುತ್ತಾ ಧೀರಶಂಕರಾಭರಣ–ಹನುಮತೋಡಿ–ಮೇಚಕಲ್ಯಾಣಿ, ಹರಿಕಾಂಬೋಜಿ ಖರಹರಪ್ರಿಯ ರಾಗವಾಗಿ ಹೊಮ್ಮುತ್ತದೆ ಹಾಗೂ ಹಿಂದೋಳ ಶುದ್ಧ ಸಾವೇರಿ ಶುದ್ಧ ಧನ್ಯಾಸಿ – ಮೋಹನ ಮತ್ತು ಮಧ್ಯಮಾವತಿಗಳ ಗ್ರಹ ಭೇದಗಳು ಅತ್ಯಂತ ಜನಪ್ರಿಯ, ರಂಜನೀಯ. ವಿಶೇಷತಃ ಹಿಂದುಳಾದಿಗಳ ಗ್ರಹಭೇದಗಳಂತೂ ಪರಮಾಕರ್ಷಕ.

ಡಾಕ್ಟರ್ ಎಂ.ಬಾಲಮುರುಳಿಕೃಷ್ಣ ಅವರು ಅದ್ಭುತವಾಗಿ ಗ್ರಹ ಭೇದಗಳನ್ನು ಬಗೆ ಬಗೆಯಾದ ರಾಗಗಳಲ್ಲಿ ಮಾಡಿದ್ದಾರೆ.

(*ಮಣಿ ಪ್ರವಾಳ : ಎಲ್ಲಾ ಭಾಷೆಗಳು ಸೇರಿ ಅರ್ಥಗರ್ಭಿತವಾಗಿರುವುದೆಂದರ್ಥ.)
ಮಣಿ ಪ್ರವಾಳ ವರ್ಣಗಳನ್ನು, ಕೃತಿಗಳನ್ನು, ವಾಗ್ಗೆಯಕಾರರುಗಳು ರಚಿಸಿದ್ದರೆ.

ಅಧ್ಯಾಯ ಒಂಭತ್ತು

ಪ್ರಸಿದ್ಧ ವಾಗ್ಗೇಯಕಾರರುಗಳ ರಾಗಮಾಲಿಕಾ ರಚನೆಗಳು ಮತ್ತು ವೇದಿಕೆಗಳಲ್ಲಿ ,ಸಂಗೀತ ಕಚೇರಿಗಳಲ್ಲಿ ಕಾಣಬರುವ ಗೇಯರಚನೆಗಳು.

ವಾಗ್ಗೇಯಕಾರ :

ಭಾರತೀಯ ಸಂಗೀತದಲ್ಲಿ ಮುಖ್ಯವಾಗಿ ಎರಡು ಅಂಶಗಳಿರುತ್ತದೆ. ಮಾತು – ಧಾತು, (ಸ್ವರ, ರಾಗ, ತಾಳ, ಲಯಗಳ ಅಂಶ) ಇವೆರಡನ್ನು ರಚಿಸುವವನಿಗೆ **"ವಾಗ್ಗೇಯಕಾರ"** ಎಂದು ಹೆಸರು. ಈ ರಚನೆಗಳು "ಮಾತು"ವಿನಲ್ಲಿ ಬೌದ್ಧಿಕ ಹಾಗೂ ರಸಾತ್ಮಕ ಸಾಮಗ್ರಿ ಇರುತ್ತದೆ. ಇದು ಭಕ್ತಿ, ನೀತಿ, ತತ್ವ ಮೊದಲಾದ ಬೋಧನೆಯನ್ನು ಶೃಂಗಾರ, ವೀರ, ಕರುಣಾದಿ ನವರಸಗಳ ಪ್ರತೀಕವಾದ ನಾದಲಯಗಳ ಸೌಂದರ್ಯವನ್ನೂ ಹೊಂದಿರುತ್ತದೆ.

ಸಂಗೀತವು ಯಾವುದೇ ಭಾಷೆಯ ಸಾಹಿತ್ಯಕ್ಕೂ ಒಗ್ಗಿಕೊಳ್ಳುತ್ತದೆ. ಪ್ರಧಾನವಾಗಿ ಸಂಗೀತ ರಚನೆಗಳಲ್ಲಿ ಪ್ರಮುಖವಾಗಿ ಕಾಣಬರುವುದು ಭಕ್ತಿರಸ.

ಕೃತಿಗಳ ರಚನೆ ಎಲ್ಲರಿಂದಲೂ ಸಾಧ್ಯವಿಲ್ಲ. ಇದಕ್ಕೆ ವಿಶಿಷ್ಟವಾದ ಅನುಭವ, ರಸಾನುಭೂತಿ, ಸಂಗೀತ ಸಾಹಿತ್ಯಗಳಲ್ಲಿ ಆಳವಾದ ಜ್ಞಾನ ಅತ್ಯಗತ್ಯ. ಸಾಮಾನ್ಯವಾಗಿ ವಾಗ್ಗೇಯಕಾರನಿಂದ ಪೂರ್ವ ನಿಯೋಜಿತವಾದ ರಚನೆಗಳಿಗೆ ಕಲಾವಿದರು ರಾಗ ತಾಳಗಳನ್ನು ಬದಲಾಯಿಸುವ ಸ್ವಾತಂತ್ರ್ಯ ಇರುವುದಿಲ್ಲ. ಅಪರೂಪವಾಗಿ ಮೂಲದಲ್ಲಿ ಒಂದೇ ರಾಗದಲ್ಲಿದ್ದ ರಚನೆ ವಿದ್ವಾಂಸರಿಂದ ರಾಗಮಾಲಿಕೆಗಳಾಗಿ ಪರಿವರ್ತಿತವಾಗಿರುವ ಸಂಭವವು ಉಂಟು. ಕರ್ನಾಟಕ ಸಂಗೀತದಲ್ಲಿರುವ ರಾಗಮಾಲಿಕಾ ಗೇಯ ರಚನೆಗಳ ಸಂಯೋಜನೆಯ ರೂಪಗಳೆಂದರೆ, ಪ್ರಬಂಧ, ಗೀತೆ, ಜತಿಸ್ವರ, ಸ್ವರಜತಿ, ತಾನವರ್ಣ, ಕೃತಿ, ಕೀರ್ತನೆ, ರಾಗಮಾಲಿಕಾ, ಪದ, ಜಾವಳಿ, ತಿಲ್ಲಾನ, ವಚನ, ದೇವರನಾಮ, ಮಂಗಳ ಕೃತಿಗಳು ಮತ್ತು ಸಮುದಾಯದ ಕೃತಿಗಳು.

ಒಂದು ಕೃತಿಯ ಎಲ್ಲಾ ಭಾಗಗಳು ಅಥವಾ ಒಂದೇ ಖಂಡದಲ್ಲಿರುವ ಸಾಹಿತ್ಯವು ಬೇರೆ ಬೇರೆ ರಾಗಗಳಲ್ಲಿ ಸಂಯೋಜಿಸಲ್ಪಟ್ಟಿರುವುದೇ ರಾಗಮಾಲಿಕೆಗಳು ಹೆಚ್ಚು ರಂಜನೀಯವಾಗಲು ಕಾರಣವಾಗಿದೆ. ರಾಗಮಾಲಿಕೆಗಳನ್ನು ರಚಿಸಿರುವಾತನಿಗಿರುವಂತೆಯೇ ಪ್ರಯೋಗಿಸುವ ಕಲಾವಿದನಿಗೂ ರಾಗಗಳ ಮೇಲಿನ ಹತೋಟಿ ಇರುವುದು ಅತ್ಯಗತ್ಯ.

ರಾಗಮಾಲಿಕೆ ರಚನೆಗಳ ಬೆಳವಣಿಗೆಯಲ್ಲಿ ಕಂಡುಬಂದಿರುವ ಕೆಲವು ವಿಶಿಷ್ಟ ರಾಗಮಾಲಿಕೆಗಳ ವಿವರಣೆ: 13ನೇ ಶತಮಾನದ ಶಾಙ್ಗದೇವ (1175–1247). ಇವರು ಕಾಶ್ಮೀರ ಬ್ರಾಹ್ಮಣರ ಪಂಗಡಕ್ಕೆ ಸೇರಿದವರು. ಭಾರತೀಯ ಉಪಖಂಡದ ವಾಯುವ್ಯ ಪ್ರದೇಶಗಳ ಇಸ್ಲಾಮಿಕ್ ಆಕ್ರಮಣದ ಯುಗದಲ್ಲಿ ಮತ್ತು ದೆಹಲಿ ಸುಲ್ತಾನರ ಪ್ರಾರಂಭದಲ್ಲಿ, ಅವರ ಕುಟುಂಬವು ದಕ್ಷಿಣಕ್ಕೆ ವಲಸೆ ಬಂದು ಎಲ್ಲೋರಾ ಗುಹೆಗಳ (ಮಹಾರಾಷ್ಟ್ರ) ಬಳಿಯ ಡೆಕ್ಕನ್ ಪ್ರದೇಶದಲ್ಲಿ ಹಿಂದೂ ಸಾಮ್ರಾಜ್ಯದಲ್ಲಿ ನೆಲೆಸಿತು.

ಯಾದವ ರಾಜವಂಶದ ರಾಜಸಿಂಹನ (1210–1247) ಆಸ್ಥಾನದಲ್ಲಿ ಶಾಙ್ಗದೇವ ಲೆಕ್ಕಪರಿಶೋಧಕನಾಗಿ ಕೆಲಸ ಮಾಡಿದರು. ಇವರು **"ಸಂಗೀತ ರತ್ನಾಕರ"** ಗ್ರಂಥದ ರಚನಾಕಾರರು. ಇದು ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತ ಪದ್ಧತಿಗಳೆರಡಕ್ಕೂ ಆಧಾರಗ್ರಂಥವೆನಿಸಿದೆ. ಇವರು ಕೆಲವು ಪ್ರಬಂಧಗಳನ್ನು ರಚಿಸಿದ್ದಾರೆ. ಅವುಗಳನ್ನು ರಾಗ "ಕದಂಬ" ಎನ್ನಲಾಗಿದೆ.

ಇವರ ಇತರ ರಾಗಮಾಲಿಕೆಗಳು ಮತ್ತು ತಾಳಮಾಲಿಕೆಗಳು:

1. ಶರಭಲೀಲ –8 ರಾಗಗಳು ಮತ್ತು 9 ತಾಳಗಳು,
2. ಶ್ರೀ ವಿಲಾಸ –5 ರಾಗಗಳು ಮತ್ತು 5 ತಾಳಗಳು.
3. ಶ್ರೀರಂಗ – 4 ರಾಗಗಳು ಮತ್ತು 4 ತಾಳಗಳು.
4. ಉಮಾತಿಲಕ – 3 ರಾಗಗಳು ಮತ್ತು 3 ತಾಳಗಳು.
5. ಪಂಚ ಭಂಗಿ – 2 ರಾಗಗಳು ಮತ್ತು 2 ತಾಳಗಳು

15 – 16ನೇ ಶತಮಾನದಲ್ಲಿ:

ತಾಳ್ಳಪಾಕಂ ಅಣ್ಣಮಾಚಾರ್ಯರು (1408 – 1503)

ಅಣ್ಣಮಾಚಾರ್ಯರು ಖ್ಯಾತರಾದ ಕವಿಗಳಾಗಿದ್ದು, ವಾಗ್ಗೇಯಕಾರರಾಗಿಯೂ, ಪ್ರಸಿದ್ಧರಾಗಿದದರು. ಇವರು ತನ್ನ ಆರಾಧ್ಯ ದೈವವಾದ ವೆಂಕಟಾಚಲಪತಿಯನ್ನು ಪೂಜಿಸುತ್ತಿದ್ದರು. ಇವರು ಸಂಕಿರ್ತನೆಗಳನ್ನು ಶೃಂಗಾರ ಪದಗಳನ್ನು, ಹೇರಳವಾಗಿ ರಚಿಸಿದ್ದಾರೆ. ಇವರು ದೇಶಿ ಸುಳಾದಿಯನ್ನು ರಚಿಸಿದ್ದಾರೆ. ಈ ರಚನೆಯ ಮೂಲ ರಾಗಗಳ ಬಗ್ಗೆ ವಿವರಗಳು ಕಾಣಬರುವುದಿಲ್ಲ. ಪ್ರಸಿದ್ಧ ಸಂಗೀತಶಾಸ್ತ್ರಜ್ಞರಾದ ಎಸ್.ಆರ್. ಜಾನಕಿರಾಮನ್ ರವರು ಈ ಸುಳಾದಿಗೆ ರಾಗಗಳನ್ನು ಸಂಯೋಜಿಸಿದರು.

ಈ ಸುಳಾದಿಯು ಏಳು ರಾಗಗಳನ್ನು ಮತ್ತು ಏಳು ತಾಳಗಳನ್ನು ಹೊಂದಿವೆ.

1. ಮಾಯಾಮಾಳವ ಗೌಳ ರಾಗ – ದ್ರುವತಾಳ
2. ರಾಮಕ್ರಿಯ ರಾಗ – ಮಠ್ಯ ತಾಳ
3. ವರಾಳಿ ರಾಗ – ರೂಪಕ ತಾಳ
4. ಗೌಳಿ ರಾಗ – ಝಂಪೆ ತಾಳ
5. ಪಾಡಿರಾಗ – ತ್ರಿಪುಟ ತಾಳ
6. ನಾಟ ರಾಗ – ಅಟ್ಟತಾಳ
7. ಶ್ರೀ ರಾಗ – ಏಕತಾಳ

ಶ್ರೀಪಾದರಾಯರು (1422 – 1480)

ಶ್ರೀಪಾದರಾಯರು ಭಕ್ತಿಮಾರ್ಗವನ್ನು ಮುಂದುವರಿಸಿದರು. ಇವರು ವ್ಯಾಸಕೂಟದ ಪ್ರಮುಖರು. ದಾಸಸಾಹಿತ್ಯ ಪ್ರವರ್ತಕರಾದ ಇವರು ದ್ವೈತಮತ ಸಿದ್ಧಾಂತ ಮತ್ತು ತತ್ವವನ್ನು ಮಾತೃಭಾಷೆಯಲ್ಲಿ ತಿಳಿಯಪಡಿಸಿದರು.

"ರಂಗವಿಠಲ" ಎಂಬ ಅಂಕಿತದೊಂದಿಗೆ ಸುಳಾದಿಗಳನ್ನು, ಭಕ್ತಿ ಶೃಂಗಾರ ಭಾವಪೂರ್ಣ ಕೀರ್ತನೆಗಳನ್ನು ರಚಿಸಿದರು. ಇವರು ಸಪ್ತತಾಳಗಳನ್ನು ಬಳಸಿ

ನೂರಾರು *ಸುಳಾದಿಗಳನ್ನು ರಚಿಸಿದ್ದಾರೆ. ಹಾಗೂ ಇವುಗಳು ವಿಭಿನ್ನ ರಾಗಗಳನ್ನು ಒಳಗೊಂಡಿವೆ.

ಪುರಂದರದಾಸರು:(ಕ್ರಿ. ಶ 1484 – 1565)

ನಮ್ಮ ಸಂಗೀತವು ಭರತ, ಮತಂಗ ಮುಂತಾದ ಲಾಕ್ಷಣಿಕರಿಂದ ರೂಪಿಸಲ್ಪಟ್ಟಿದ್ದರೂ ಕರ್ನಾಟಕ ಸಂಗೀತವನ್ನು ಸುಲಭವಾಗಿ ಅಭ್ಯಾಸ ಮಾಡುವಂತೆ ಮಾರ್ಗದರ್ಶನ ನೀಡಿದವರು ಪುರಂದರದಾಸರು. ವ್ಯವಹಾರ ಶುದ್ಧವಾದ ಲಕ್ಷ್ಯ ಸಂಗೀತವನ್ನು ಪ್ರಚಾರಪಡಿಸಿದವರು ಪುರಂದರದಾಸರು.

ಜನಹಿತ ಅಗತ್ಯಗಳನ್ನು ಅರ್ಥ ಮಾಡಿಕೊಂಡು ಅವುಗಳಿಗೆ ಅನುಗುಣವಾಗಿ ಸಂಗೀತದ ಸೌಧವನ್ನು ಚೊಕ್ಕಗೊಳಿಸಿದರು. ಹಲವಾರು ಲಕ್ಷ್ಯಗೀತೆಗಳನ್ನು ರಚಿಸಿದವರು. ಸಮಾನಾಂತರ ಶ್ರುತಿಯ ಮಾಳವಗೌಳದ ಹಿರಿಮೆಯನ್ನು ಸಾರಿದರು. ಅದರ ಜನ್ಯವಾದ ಮಲಹರಿ ರಾಗದಲ್ಲಿ ಅಭ್ಯಾಸಕ್ಕೆ ಅನುಕೂಲವಾದ ಗೀತೆಗಳನ್ನು ರಚಿಸಿದರು.

ಮಾಯಾಮಾಳವಗೌಳ ರಾಗದಲ್ಲಿ ದಕ್ಷಿಣ ದೇಶಾದ್ಯಂತ ಪ್ರಾರಂಭ ಪಾಠಗಳಿಗೆ ಅನುಕೂಲವಾಗುವಂತೆ ಸರಳೆ, ಜಂಟಿವರಸೆಗಳು, ಅಲಂಕಾರಗಳಲ್ಲದೆ ಪಿಳ್ಳಾರಿ ಗೀತೆಗಳು, ಸುಳಾದಿಗಳನ್ನೂ ರಚಿಸಿದ್ದಾರೆ. ಪ್ರೌಢ ಶೈಲಿಗಳನ್ನು ಅನುಸರಿಸಿರುವ ಬಂಧಗಳು, ತಿಲ್ಲಾನಗಳು, ವರ್ಣಗಳು, ಪದಗಳನ್ನೂ ರಚಿಸಿದ್ದಾರೆ. ತಾನವರ್ಣಗಳು, ತಿಲ್ಲಾನಗಳು ಲಭ್ಯವಿಲ್ಲದಿರುವುದು ದುರದೃಷ್ಟಕರ ಸಂಗತಿ.

ಪುರಂದರದಾಸರು ರಚಿಸಿರುವ "ಬ್ರಹ್ಮಾನಂದ ಸುಳಾದಿ"ಯು ಆರು ತಾಳ ಮತ್ತು ಆರು ರಾಗಗಳಿಂದ ಸಂಯೋಜಿಸಲ್ಪಟ್ಟಿದೆ.

1. ಕೇದಾರಗೌಳ – ಧ್ರುವ ತಾಳ.

2. ಮೋಹನ – ಮಠ್ಯ ತಾಳ

3. ಭೈರವಿ – ರೂಪಕ ತಾಳ

4. ಮಲಯಮಾರುತ – ಅಟ್ಟತಾಳ

5. ಮಧ್ಯಮಾವತಿ – ಆದಿತಾಳ

6. ಸುರಟಿ – ತ್ರಿಪುಟ ತಾಳ

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಏಕೈಕವಾಗಿ ರೂಢಿಯಲ್ಲಿರುವ ಸೂಳಾದಿತಾಳಗಳನ್ನು ಲಕ್ಷ್ಯದಲ್ಲಿ ಮತ್ತು ಶಾಸ್ತ್ರದಲ್ಲಿ ಬೆಳೆಸಿದುದು ಹರಿದಾಸರುಗಳ ಮತ್ತೊಂದು ಅಮೂಲ್ಯ ಕೊಡುಗೆಯಾಗಿದೆ. ತಾಳಗಳ ವಿಚಾರದಲ್ಲಿ ಇವರ ಸಾಧನೆ– ಅದ್ಭುತ, ಅತ್ಯುನ್ನತ.

17ನೇ ಶತಮಾನದಲ್ಲಿ, ಮಹಾರಾಜ ಶಹಾಜಿ (1670 – 1712)

ಇವರು ರಾಜ ವೆಂಕೋಜಿಯವರ ಸುಪುತ್ರರು ಮತ್ತು ಸಂಸ್ಕೃತ, ತೆಲುಗು, ಮರಾಠಿ, ಹಿಂದಿ, ತಮಿಳು ಭಾಷೆಗಳಲ್ಲಿ ಪಾರಂಗತರಾಗಿದ್ದರು. ಇವರು ಸಂಗೀತಶಾಸ್ತ್ರಜ್ಞರು, ಭಾಷಾ ಶಾಸ್ತ್ರಜ್ಞರೂ ಮತ್ತು ಸಂಯೋಜಕರೂ ಆಗಿದ್ದರು.

"ಶಹಾದಿ ರಾಗಲಕ್ಷಣಮು" ಇವರ ಸ್ವರಚಿತ ಕೃತಿಯಾಗಿದೆ, **ಶಂಕರ ಪಲ್ಲಕ್ಕಿ ಸೇವಾ ಪ್ರಬಂಧಂ** ಮತ್ತು **ತೆಲುಗಿನಲ್ಲಿ ತ್ಯಾಗೇಶ ಪದ**ಗಳನ್ನೂ ರಚಿಸಿರುವರು. ಇವರು ಯಕ್ಷಗಾನಗಳಿಗೆ ಪ್ರಬಂಧಗಳನ್ನು ರಚಿಸಿದ್ದಾರೆ.

"ಚತುರ್ದಶ ಭುವನ ಅನುರಾಗ ರಾಗಮಾಲಿಕಾ ದರು"ವನ್ನು ರಚಿಸಿದ್ದಾರೆ. ಈ ರಚನೆಯನ್ನು 14 ರಾಗಗಳಲ್ಲಿ ಸಂಯೋಜನೆಯನ್ನು ಮಾಡಲಾಗಿದೆ.

ಗೌಳ ರಾಗಮಾಲಿಕೆ – ಗೌಳ ಪ್ರತ್ಯೇಯಂತ್ಯ ಏಳು ರಾಗಗಳಲ್ಲಿ ಈ ರಾಗಮಾಲಿಕೆಯು ಸಂಯೋಜಿಸಲ್ಪಟ್ಟಿದೆ. ಈ ರಚನೆಯು **"ಸಪ್ತಸಾಗರ ಸುಳಾದಿ ಅಥವಾ ಸಪ್ತಸಾಲಗ ಪ್ರಬಂಧಲೀಲಾ ದರು"** ಎಂದು ಹೆಸರಿಸಲಪ್ಪಟ್ಟಿದೆ.

18ನೇ ಶತಮಾನದಲ್ಲಿ ರಾಮಸ್ವಾಮಿ ದೀಕ್ಷಿತರು (1735 – 1817)

ಇವರು ಮುತ್ತುಸ್ವಾಮಿ (ಮುದ್ದು ಸ್ವಾಮಿ) ದೀಕ್ಷಿತರ ತಂದೆ. ಇವರು ಮೆಲ್ಲಟೂರು ವೀರಭದ್ರಯ್ಯನವರಲ್ಲಿ ಸಂಗೀತಭ್ಯಾಸವನ್ನು ಮಾಡಿದರು. ಇವರು ಕರ್ನಾಟಕ ಸಂಗೀತದಲ್ಲಿ ಹೆಸರಾಂತ ವೈಣಿಕರೂ, ಗಾಯಕರೂ ಮತ್ತು ವಾಗ್ಗೇಯಕಾರರು ಆಗಿದ್ದರು. ಹಂಸಧ್ವನಿ ರಾಗದ ನಿರ್ಮಾಪಕರು ಹಾಗೂ ವೆಂಕಟಮಖಿ ಅವರ ಮೇಳಕರ್ತ ಪದ್ಧತಿಯನ್ನು ಪ್ರತಿಪಾದಿಸಿದರು ಮತ್ತು ಸಂಯೋಜಕರಾಗಿ ಉತ್ತಮ ಸಾಧನೆ ಮಾಡಿದ್ದರು. ಇವರು ಕೃತಿಗಳನ್ನು ವರ್ಣಗಳನ್ನು, ತೋಡಿರಾಗದಲ್ಲಿ ಸ್ವರಸ್ಥಾನದ ಪದವರ್ಣವನ್ನು ರಚಿಸಿದ್ದಾರೆ. ಅವರು ತಮ್ಮ ಸುದೀರ್ಘವಾದ ರಾಗಮಾಲಿಕೆಗಳಿಗೆ ಪ್ರಸಿದ್ಧರಾಗಿದ್ದಾರೆ. ಅವರ ಎಲ್ಲಾ ರಾಗಮಾಲಿಕೆಗಳು ತೆಲುಗುಭಾಷೆಯಲ್ಲಿದ್ದವು. ಅವರು ರಚಿಸಿರುವ "ಶತರಾಗ–ತಾಳ–ಮಾಲಿಕೆ"ಯು ಎಲ್ಲಾ ಕೃತಿಗಳ ಕಿರೀಟರತ್ನ ಆಗಿದೆ. ಇವರ ಕೊಡುಗೆಗಳು ಕರ್ನಾಟಕ ಸಂಗೀತಕ್ಕೆ ಮಹತ್ತರವಾದುದು.

"ಶತರಾಗ–ತಾಳ–ಮಾಲಿಕೆ"ಯು ಕರ್ನಾಟಕ ಸಂಗೀತದಲ್ಲಿ ದೀರ್ಘವಾದ ರಚನೆಯಾಗಿದೆ. ಅಷ್ಟೋತ್ತರ ಶತ–ರಾಗ–ತಾಳಮಾಲಿಕೆಯು 108 ರಾಗಗಳಲ್ಲಿ ರಚಿತವಾಗಿರುವ ಒಂದು ಅಪೂರ್ವ ರಚನೆಯಾಗಿದೆ. ಈ ರಾಗಮಾಲಿಕೆಯು ತಾಳ ವೈವಿಧ್ಯದಿಂದಲೂ ಕೂಡಿದ್ದು "ನಾಟಕಾದಿ" ಎಂಬ ಪದಗುಚ್ಛದಿಂದ ಆರಂಭವಾಗುತ್ತದೆ. ರಾಗ–ತಾಳ–ಮಾಲಿಕೆಯು 108 ರಾಗಗಳನ್ನು ಮತ್ತು ತಾಳಗಳನ್ನು ಹೊಂದಿರುವ ರಾಗಮಾಲಿಕೆಯಾಗಿದೆ.

ಈ ರಚನೆಯಲ್ಲಿ ಸಾಹಿತ್ಯದ ಪ್ರತಿ ಸಾಲು ಒಂದೊಂದು ರಾಗ ಮತ್ತು ಒಂದೊಂದು ತಾಳವನ್ನು ಹೊಂದಿದೆ ಹಾಗೂ ಈ ರಾಗಮಾಲಿಕೆಯು ವೆಂಕಟಕೃಷ್ಣ ಮೊದಲಿಯಾರ್ ಅಲಿಯಾಸ್ ಚಿನ್ನಯ್ಯ ಮೊದಲಿಯಾರ್ ಗೌರವಾರ್ಥವಾಗಿ ರಚಿತವಾಗಿದೆ.

ದುರದೃಷ್ಟವಶಾತ್ ಇದರ ಪೂರ್ಣ ಸಾಹಿತ್ಯವು ಲಭ್ಯವಿಲ್ಲ. ಪ್ರಸ್ತುತ ಲಭ್ಯವಿರುವ ಸುಬ್ಬರಾಮದೀಕ್ಷಿತರ ಸಂಪ್ರದಾಯಪ್ರದರ್ಶಿನಿಯಲ್ಲಿ ನೂರೆಂಟರಲ್ಲಿ 61 ರಾಗಗಳು ಮತ್ತು 57

ತಾಳಗಳ ವಿವರಗಳನ್ನು ಕಾಣಬಹುದು. ಈ ರಚನೆಯಲ್ಲಿ ಅತಿಚಮತ್ಕಾರದಿಂದ ಸಾಹಿತ್ಯದೊಂದಿಗೆ ರಾಗಮುದ್ರೆಯನ್ನೂ ತಾಳಮುದ್ರೆಯನ್ನೂ ಅಳವಡಿಸಲಾಗಿದೆ.

"ಮನಸಾವೇರಿತರುಲ"–48 ರಾಗಗಳನ್ನು ಒಳಗೊಂಡಿರುವ ಈ ರಾಗಮಾಲಿಕೆಯು ಭಗವಾನ್ ವೆಂಕಟೇಶ್ವರನನ್ನು ಕುರಿತದ್ದಾಗಿದೆ. ಈ ರಾಗಮಾಲಿಕೆಯನ್ನು ಇವರ ಪುತ್ರ ಚಿನ್ನಸ್ವಾಮಿ ದೀಕ್ಷಿತರು ಕಣ್ಣಿನ ದೃಷ್ಟಿ ಕಳೆದುಕೊಂಡಾಗ, ಭಗವಂತನ ಸ್ತುತಿಗಾಗಿ 48 ರಾಗಗಳಲ್ಲಿ ರಾಗಮಾಲಿಕೆಯನ್ನು ರಚಿಸಿ ಪ್ರಾರ್ಥಿಸಿದಾಗ ಚಿನ್ನಸ್ವಾಮಿಯವರಿಗೆ ದೃಷ್ಟಿ ಮರಳಿ ಬಂದಿತೆನ್ನುತ್ತಾರೆ.

ಶಿವ ಮೋಹನ ಶಕ್ತಿ – ರಾಗಮಾಲಿಕೆ

ಈ ರಾಗಮಾಲಿಕೆಯಲ್ಲಿ 44 ರಾಗಗಳು ಇವೆ. ಅವುಗಳಲ್ಲಿ ಪ್ರತಿಯೊಂದಕ್ಕೂ ರಾಗಮುದ್ರೆಯನ್ನು ಸಾಹಿತ್ಯದಲ್ಲಿ ಜಾಣ್ಮೆಯಿಂದ ನೇಯಲಾಗಿದೆ. ಈ ಕ್ರಮವನ್ನು ರಾಮಸ್ವಾಮಿದೀಕ್ಷಿತರು ತಮ್ಮ ಎಲ್ಲಾ ರಾಗಮಾಲಿಕೆಯಲ್ಲಿ ಸಂಯೋಜನೆಗಳಲ್ಲಿಯೂ ಅನುಸರಿಸಿದ್ದಾರೆ ಎನ್ನಬಹುದು.

ಈ ರಾಗಮಾಲಿಕೆಯ ಸಾಹಿತ್ಯದಲ್ಲಿ ಮಧುರೈ ದೇವಸ್ಥಾನದ ಮೀನಾಕ್ಷಿದೇವಿಯ ಬಗ್ಗೆ ವಿವಿಧ ವಿವರಣೆಗಳನ್ನು ನೀಡಲಾಗಿದೆ. ರಾಮಸ್ವಾಮಿ ದೀಕ್ಷಿತರು ಯಾವಾಗಲೂ ತಮ್ಮ ಸಂಯೋಜನೆಗಳಲ್ಲಿ ಬಳಸುತ್ತಿದ್ದ ಮುದ್ರೆ "ವೆಂಕಟಕೃಷ್ಣ" ಕೊನೆಯ ಸಾಲಿನಲ್ಲಿ ಕಂಡುಬರುತ್ತದೆ. ಈ ರಾಗಮಾಲಿಕೆಯಲ್ಲಿ ಸಂಯೋಜಕರು ವೈಶಿಷ್ಟ್ಯಪೂರ್ಣ ರಾಗಮುದ್ರೆಯನ್ನು ಕೌಶಲ್ಯದಿಂದ ಅಳವಡಿಸಿಕೊಂಡಿದ್ದಾರೆ. ಈ ರಚನೆಯು ಸಂಕೀರ್ಣವಾದ ಪದಗಳನ್ನು ಹೊಂದಿರುವ ಕಾರಣ, ಕೆಲವು ನುಡಿಗಟ್ಟುಗಳ ನಿಖರವಾದ ಅರ್ಥವನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ.

"ಸಮಾಜಗಮನ" 20 ರಾಗಗಳಲ್ಲಿ ಸಂಯೋಜಿಸಲ್ಪಟ್ಟಿರುವ ರಾಗಮಾಲಿಕೆಯಾಗಿದೆ. ಆದಿತಾಳದಲ್ಲಿ ಹೊಂದಿಸಲಾಗಿರುವ ಈ ರಾಗಮಾಲಿಕೆಯನ್ನು ರಾಜ ಅಮರಸಿಂಹನಿಗೆ ಸಮರ್ಪಿಸಲಾಗಿದೆ.

"ಕರ್ನಾಟಕ ಕೊಂಕಣ – ರಾಗ ಮಾಲಾ ಗೀತೆ"

ವೀಣಾವರದಯ್ಯನವರು (1877–1952) ರಾಗಮಾಲಾ ಈ ಗೀತೆಯನ್ನು ರಚಿಸಿದ್ದಾರೆ. ಈ ಗೀತೆಗೆ ತಾಳ ಸೂಚಿತವಾಗಿಲ್ಲ. ಆದರೆ ಅರೆಜಂಪೆ ಅಥವಾ ಖಂಡಛಾಪು ತಾಳಕ್ಕೆ ಹೊಂದುವಂತೆ ಧಾತುಮಾತುಗಳು ಅಳವಟ್ಟಿವೆ. ಎರಡು ಆವರ್ತದಲ್ಲಿ ರಾಗ ಬದಲಾಗುವಂತಿದೆ. ಒಟ್ಟು 36 ರಾಗಗಳಿಂದ ಸಂಯೋಜಿಸಲ್ಪಟ್ಟಿದ್ದರೂ ನಾಟರಾಗ ಎರಡು ಬಾರಿ ಅಳವಟ್ಟಿರುವುದು ಗಮನಾರ್ಹ. ರಾಗಮುದ್ರೆಗಳೊಂದಿಗೆ ಭಗವನ್ನಾಮವನ್ನು ಸೇರಿಸಿ ನನ್ನನ್ನು ರಕ್ಷಿಸು ಎಂಬ ಪ್ರಾರ್ಥನೆಯೊಂದಿಗೆ ಮುಕ್ತಾಯವಾಗುತ್ತದೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ವೇದಿಕೆಗಳಲ್ಲಿ, ಕಚೇರಿಗಳಲ್ಲಿ ಕಾಣಬರುವ ರಾಗಮಾಲಿಕಾ ಗೇಯರಚನೆಗಳ ಅವಲೋಕನ.

***ಸಂಗೀತ ಸಂಪ್ರದಾಯ ಪ್ರದರ್ಶಿನಿ ಸಂಪುಟ ಆರು**–ಮೂಲ ಗ್ರಂಥ ಬ್ರಹ್ಮಶ್ರೀ ಸುಬ್ಬರಾಮ ದೀಕ್ಷಿತರು – ಕನ್ನಡ ಅವತರಣಿಕೆ – ಪ್ರೊಫೆಸರ್ ಸಾ.ಕೃ.ರಾಮಚಂದ್ರರಾವ್ – ಸಂಪಾದಕ ವಿದ್ವಾನ್ ಆನಂದರಾಮ ಉಡುಪ. ರಾಗ ಮಾಲಿಕೆಗಳು – ಡಾ.ಟಿ.ಎನ್. ಪದ್ಮ, ಡಾ|| ಪಿ.ಪಿ. ನಾರಾಯಣಸ್ವಾಮಿ, ಕರ್ನಾಟಕ ಸಂಗೀತದಲ್ಲಿ ರಾಗ ಮಾಲೀಕ ಸಂಯೋಜನೆಗಳು ಎಂಬ ಲೇಖನದಿಂದ ಆಯ್ದುಕೊಳ್ಳಲಾಗಿದೆ.

ತಾನ ವರ್ಣಗಳು:

ಪಟ್ನಂ ಸುಬ್ರಹ್ಮಣ್ಯ ಅಯ್ಯರ್ (1845–1902)

ಪಟ್ನಂ ಸುಬ್ರಹ್ಮಣ್ಯಅಯ್ಯರ್ ರವರು ಭರತಂ ವೈದ್ಯನಾಥಅಯ್ಯರ್ ಪುತ್ರರು. ಇವರು ತಮ್ಮ ಸಂಗೀತ ಶಿಕ್ಷಣವನ್ನು ಮೇಲತ್ತೂರು ಶಾಸ್ತ್ರಿಗಳಿಂದ ಪ್ರಾರಂಭಿಸಿ ನಂತರ ಮಾನಂಬುಚಾವಡಿ ವೆಂಕಟಸುಬ್ಬಯ್ಯರ್ ಬಳಿ ಹೆಚ್ಚಿನ ಶಿಕ್ಷಣ ಪಡೆದರು. ಪಟ್ನಂರವರು ತಾನವನ್ನು ಹಾಡುವುದರಲ್ಲಿ ಅದ್ವಿತೀಯರು ಹಾಗೂ ಪಲ್ಲವಿಗಳನ್ನು ಹಾಡುವುದರಲ್ಲಿ ಅತಿ

ಸಮರ್ಥರು. 128 ಅಕ್ಷರಗಳ ವ್ಯಾಪ್ತಿ ಉಳ್ಳ ಹಾಗೂ ತಾಳಗಳಲ್ಲೇ ಅತಿ ದೊಡ್ಡದಾದ *ಸಿಂಹನಂದನ ತಾಳದಲ್ಲಿ ಆ ಕಾಲದಲ್ಲಿಯೇ ಪಲ್ಲವಿಯನ್ನು ಹಾಡಿದ ಪ್ರತಿಭಾವಂತರು. ಇವರು ಬೇಗಡೆ ರಾಗವನ್ನು ಹಾಡುವುದರಲ್ಲಿ ನಿಸ್ಸೀಮರು. ಇವರು ಮೈಸೂರು ಅರಮನೆಯಲ್ಲಿ ಮೂರು ದಿನ ಬೇಗಡೆ ರಾಗದ ಕಚೇರಿಯನ್ನು ನಡೆಸಿದುದರಿಂದ ಅವರಿಗೆ **"ಬೇಗಡೆ ಸುಬ್ರಹ್ಮಣ್ಯ ಅಯ್ಯರ್"** ಎಂಬ ಹೆಸರು ಬಂದಿತು. ಅವರು ಉತ್ತಮಗುಣಮಟ್ಟದ ಸಂಗೀತರಾಗಿರುವದಲ್ಲದೆ ಅತ್ಯುತ್ತಮ ವಾಗ್ಗೇಯಕಾರರು ಮತ್ತು ಸಂಯೋಜಕರಾಗಿದ್ದರು. ಇವರು ವರ್ಣಗಳನ್ನು ಕೃತಿಗಳನ್ನು, ತಿಲ್ಲಾನಗಳನ್ನು ರಚಿಸಿದ್ದಾರೆ.

ನವರಾಗಮಾಲಿಕವರ್ಣ

ವಲಚಿ ವಚ್ಚಿ – ಆದಿತಾಳ ಈ ನವರಾಗಮಾಲಿಕಾ ವರ್ಣದ ಪದವು ಸೂಚಿಸುವಂತೆ, ಒಂಬತ್ತು ರಾಗಗಳ ಸಂಕ್ಷಿಪ್ತ ನಿರೂಪಣೆಗಳ ಮಿಶ್ರಣವಾಗಿದೆ. 'ವಲಚಿ ವಚ್ಚಿ' ಯ ಒಂಬತ್ತು ರಾಗಗಳೆಂದರೆ ಕೇದಾರ, ಶಂಕರಾಭರಣ, ಕಲ್ಯಾಣಿ, ಬೇಗಡೆ, ಕಾಂಭೋಜಿ, ಯದುಕುಲಕಾಂಭೋಜಿ, ಬಿಲಹರಿ, ಮೋಹನ ಮತ್ತು ಶ್ರೀರಾಗ. ಈ ಸಂಯೋಜನೆಯು ಆದಿ ತಾಳದಲ್ಲಿದೆ. ವರ್ಣದ ಪೂರ್ವಾಂಗಗಳಾದ ಪಲ್ಲವಿ, ಅನುಪಲ್ಲವಿ ಮುಕ್ತಾಯ ಸ್ವರಗಳು ನಾಲ್ಕು ರಾಗಗಳಿಂದಲೂ ಮತ್ತು ಉತ್ತರಾಂಗ ಚರಣ ಮತ್ತು ಎತ್ತುಗಡೆ ಸ್ವರಗಳು ಐದು ರಾಗಗಳಿಂದ ಸಂಯೋಜಿಸಲ್ಪಟ್ಟಿದೆ. ಸಂಯೋಜಕರು ಈ ರಚನೆಯಲ್ಲಿ ವ್ಯತಿರಿಕ್ತ ರಾಗಗಳಿಗೆ ಬದಲಾಗಿ ಮಿತ್ರರಾಗಗಳನ್ನು ಒಂದಕ್ಕೊಂದು ಪಕ್ಕದಲ್ಲಿ ಇರಿಸುವಂತೆ ಆಯ್ಕೆ ಮಾಡಿದ್ದಾರೆ ಎಂಬುದು ಬಹಳ ಕುತೂಹಲಕಾರಿಯಾಗಿದೆ. ಇದು ತಾಂತ್ರಿಕವಾಗಿ ಸಂಕೀರ್ಣವಾದ ಮೇರುಕೃತಿಯಾಗಿದೆ. ಅನುಕ್ರಮವಾಗಿ ಮಿತ್ರರಾಗಗಳಿಂದ ಹೆಣೆಯಲ್ಪಟ್ಟು ರಾಗಗಳ ನಡುವಿನ ಸಣ್ಣ ವ್ಯತ್ಯಾಸಗಳನ್ನು ಅರಿಯುವಂತೆ ಮಾಡಿಸುವಲ್ಲಿ ವಿದ್ಯಾರ್ಥಿಗಳಿಗೆ ಈ ರಚನೆಯು ಉಪಯುಕ್ತ ವ್ಯಾಯಾಮವನ್ನು ನೀಡುತ್ತದೆ.

ಕಾಮ ಕೋಟಿ ಸುಂದರಾಂಗುಡು – ಚತುರ್ದಶ ರಾಗಮಾಲಿಕಾ ವರ್ಣ

ವೀಣೆ ಶೇಷಣ್ಣ (1852–1926)

ವೈಣಿಕ ಶಿಖಾಮಣಿ ನಾದಯೋಗಿ ವೀಣೆ ಶೇಷಣ್ಣನವರು "ವೀಣೆಯ ಬೆಡಗಿದು ಮೈಸೂರು" ಎಂಬ ನಾಣ್ಣುಡಿಯನ್ನು ತನ್ನ ನಲ್ಮೆಯ ನಾಡಿಗೆ ತಂದಿತ್ತ ಪ್ರತಿಭಾವಂತ ವೈಣಿಕಾಗ್ರಗಣ್ಯರು. *ಪಚ್ಚೆಮಿರಿಯಂ ಆದಿ ಅಪ್ಪಯ್ಯರವರು ಶೇಷಣ್ಣನವರ ವಂಶಿಕರಲ್ಲಿ ಒಬ್ಬರು. ಇವರು ತಂದೆ ಚಿಕ್ಕರಾಮಪ್ಪನವರಲ್ಲಿ ಸಂಗೀತ ಶಿಕ್ಷಣ ಪಡೆದಿದ್ದರು ಅಂದಿನ ಮೈಸೂರಿನ ಪ್ರಭುಗಳಾದ ಚಾಮರಾಜ ಒಡೆಯರ ಆಸ್ಥಾನ ವಿದ್ವಾಂಸರುಗಳಲ್ಲಿ ಪ್ರಮುಖರಾಗಿದ್ದರು. **"ವೈಣಿಕ ಶಿಖಾಮಣಿ"**ಎಂಬ ಬಿರುದನ್ನು ಹೊಂದಿದ್ದ ಇವರು ಸುಪ್ರಸಿದ್ಧ ವಾಗ್ಗೇಯಕಾರರೂ ಆಗಿದ್ದರು. **"ಶೇಷದಾಸ"** ಅಂಕಿತದೊಂದಿಗೆ ವರ್ಣ, ಕೃತಿ, ತಿಲ್ಲಾನ, ಜಾವಳಿ, ರಾಗಮಾಲಿಕೆಗಳನ್ನು ರಚಿಸಿದ್ದಾರೆ ಹಾಗೂ ಪೋಷಕಮುದ್ರೆಯನ್ನು ಹೊಂದಿದ ರಚನೆಗಳನ್ನು ಕಾಣಬಹುದು. ರಾಗಮಾಲಿಕೆಯಲ್ಲಿ ಮಾಳವಶ್ರೀ, ಅಭೇರಿ, ಕೋಕಿಲ, ಚಿತ್ರಮೋಹಿನಿ ಮುಂತಾದ ಅಪರೂಪದ ರಾಗಗಳೊಂದಿಗೆ ಖಂಡಜಾತಿ- ದ್ರುವತಾಳ, ಸಂಕೀರ್ಣಜಾತಿ- ಮಠ್ಯ ತಾಳ ಮೊದಲಾದ ಕ್ಲಿಷ್ಟ ತಾಳಗಳು ಉಪಯೋಗಿಸಲ್ಪಟ್ಟಿವೆ.

"ಕಾಮ ಕೋಟಿ ಸುಂದರಾಂಗುಡು" ಇದು ಚತುರ್ದಶ ರಾಗಮಾಲಿಕೆಯಾಗಿದೆ. ಈ ವರ್ಣವು ಮಿಶ್ರ ತ್ರಿಪುಟತಾಳವನ್ನು ಒಳಗೊಂಡಿದೆ. "ಮಹಿಷಾಸುರ ಸಂಹಾರಣಿ" 21 ರಾಗಗಳನ್ನು ಹೊಂದಿದ್ದು ಸಂಕೀರ್ಣ ಮಠ್ಯತಾಳ. ವೀಣೆ ಶೇಷಣ್ಣನವರು ಭಿನ್ನತಾಳಗಳಲ್ಲಿ ವರ್ಣವನ್ನೂ ರಚಿಸಿದ್ದಾರೆ. ಅವರ ಚತುರ್ದಶ ರಾಗಮಾಲಿಕಾ ವರ್ಣವನ್ನು ಅವಲೋಕಿಸಿದಾಗ ಪಟ್ನಂಸುಬ್ರಹ್ಮಣ್ಯಅಯ್ಯರ್ ಅವರ ನವರಾಗಮಾಲಿಕ ವರ್ಣದ ರಚನಾ ಕ್ರಮಕ್ಕೆ ಭಿನ್ನವಾಗಿರುವುದು ಕಾಣುತ್ತದೆ. ಈ ವರ್ಣದ ಪಲ್ಲವಿ, ಅನುಪಲ್ಲವಿ ಮತ್ತು ಚಿಟ್ಟೆಸ್ವರಗಳು ಏಕರಾಗದಲ್ಲಿ (ಬೇಹಾಗ್) ರಚಿಸಲ್ಪಟ್ಟು ಎತ್ತುಗಡೆ ಸ್ವರಗಳು ಉಳಿದ 13 ರಾಗಗಳನ್ನು ಹೊಂದಿದೆ. 21 ರಾಗಗಳನ್ನು ಹೊಂದಿರುವ "ಮಹಿಷಾಸುರ ಸಂಹಾರಣಿ" ವರ್ಣವೂ ಇದೇ ರೀತಿಯಲ್ಲಿ ರಚಿತವಾಗಿದೆ. ಈ ರೀತಿಯಾಗಿ ಶೇಷಣ್ಣನವರ ರಾಗಮಾಲಿಕಾ ರಚನೆಗಳು ಭಿನ್ನವಾಗಿ ಮೂಡಿ ಬಂದಿದೆ.

ಕಾಮಿತಾರ್ಥದಾಯಕಿ ಕಾಮಾಕ್ಷಿ– ಪಂಚ ರಾಗಮಾಲಿಕೆ –ಸಿ.ರಂಗಯ್ಯನವರು.

ಕಲೆಗಳಲ್ಲಿ ಅತ್ಯಂತ ಸೂಕ್ಷ್ಮವೂ ಪರಿಣಾಮಕಾರಿಯೂ ಆದುದು ಸಂಗೀತ. ಮೈಸೂರು ಜಿಲ್ಲೆಯ ಚಿಲಕುಂದದಲ್ಲಿ 1896ರಲ್ಲಿ ಜನಿಸಿದ ರಂಗಯ್ಯನವರು ವೃತ್ತಿಯಾಗಿ ಆಯ್ದುಕೊಂಡದ್ದು ಚಿತ್ರಕಲೆ ಪ್ರವೃತ್ತಿಯಾದದ್ದು ಸಂಗೀತ. ಇವರು ವಿದ್ವಾಂಸರಾದ ಚಿಕ್ಕಸುಬ್ಬರಾಯರು, ವೀಣಾವೆಂಕಟಗಿರಿಯಪ್ಪನವರು ಮತ್ತು ಮೈಸೂರು ವಾಸುದೇವಚಾರ್ಯರಲ್ಲಿ ಶಿಕ್ಷಣ ಪಡೆದರು. 72 ಮೇಳಕರ್ತರಾಗಳಲ್ಲೂ ಕೃತಿ ರಚನೆ ಮಾಡಿರುವುದು ಹೆಗ್ಗಳಿಕೆಯ ಸಂಗತಿ ಹಾಗೂ ಹೊಸ ಹೊಸ ರಾಗಗಳ ಅವಿಷ್ಕಾರವನ್ನು ಮಾಡಿ ಅವುಗಳಲ್ಲಿ ಕೃತಿ ರಚನೆ ಮಾಡಿ ರಾಗಗಳಿಗು ಭಾಷ್ಯವನ್ನು ಕೊಟ್ಟಿದ್ದಾರೆ.ಜತಿಸ್ವರಗಳನ್ನು, ಪದವರ್ಣಗಳನ್ನು, ತಾನವರ್ಣಗಳನ್ನು ಮತ್ತು ಪಂಚಜಾತಿ ರಾಗಮಾಲಿಕಾವರ್ಣವನ್ನು ರಚಿಸಿದ್ದಾರೆ. ಗಣಪತಿಯನ್ನು ಕುರಿತಾದ ಅಟ್ಟತಾಳ ವರ್ಣವನ್ನು ಕನ್ನಡ ಭಾಷೆಯಲ್ಲಿ ರಚಿಸಿದ್ದಾರೆ. ಅವುಗಳನ್ನಷ್ಟೇ ಗೇಯ ನಾಟಕಗಳನ್ನು ರಾಗಮಾಲಿಕೆಯಲ್ಲಿ *ಲಾವಣಿ ರಚಿಸಿದ್ದಾರೆ.

"ಕಾಮಿತಾರ್ಥದಾಯಕಿ ಕಾಮಾಕ್ಷಿ – ಪಂಚರಾಗಮಾಲಿಕೆ" ಪಂಚಜಾತಿಯೆಂದರೆ ರಾಗಮಾಲಿಕಾವರ್ಣದ ತಾಳದಲ್ಲಿ ಲಘು ತಿಶ್ರ, ಚತುರಶ್ರ, ಖಂಡ, ಮಿಶ್ರ, ಸಂಕೀರ್ಣವಾಗಿ ಬದಲಾಗುವುದೇ ಅಲ್ಲದೆ ರಾಗಗಳು ಪ್ರತಿ ಆವರ್ತದಲ್ಲಿ ಬದಲಾಗುತ್ತಾ ಹೋಗುತ್ತದೆ.

ಈ ವರ್ಣದಲ್ಲಿ ಔಡವರಾಗಗಳಾದ ಹಿಂದೋಳ, ಮೋಹನ, ಆಭೋಗಿ, ಹಂಸಧ್ವನಿ ಮತ್ತು ಮಧ್ಯಮಾವತಿ ರಾಗಗಳಲ್ಲಿ ಸಂಯೋಜಿಸಲಾಗಿದೆ ಮತ್ತು ಮಿಶ್ರಜಾತಿ, ಚತುರಶ್ರಜಾತಿ, ಖಂಡಜಾತಿ, ಮಿಶ್ರಜಾತಿ ಮತ್ತು ಸಂಕೀರ್ಣಜಾತಿಯಲ್ಲಿ ಆದಿತಾಳದಲ್ಲಿ ಬದ್ಧವಾಗಿದೆ. ಪಲ್ಲವಿಯ ಎರಡು ಆವರ್ತಕ್ಕೆ ಹಿಂದೋಳ –ತಿಶ್ರ, ಮೋಹನ–ಚತುರಶ್ರ, ರಾಗವನ್ನು ಎರಡು ಆವರ್ತಗಳು ಆಭೋಗಿ –ಖಂಡ ಮತ್ತು ಹಂಸಧ್ವನಿ–ಮಿಶ್ರಜಾತಿಯಲ್ಲಿ ಚಿಟ್ಟೆಸ್ವರವು ಮಧ್ಯಮಾವತಿ ಸಂಕೀರ್ಣ ಜಾತಿಯಲ್ಲಿ ರೂಪಗೊಂಡಿದೆ. ಚರಣ ಮತ್ತು ಮೊದಲ ಎತ್ತುಗಡೆ ಸ್ವರ ಮೋಹನ – ಚತುರಶ್ರ ಜಾತಿ, ಎರಡನೆಯ ಸ್ವರ ಹಿಂದೋಳ – ಚತುರಶ್ರ ಜಾತಿ, ಅಭೋಗಿ –ಖಂಡ ಜಾತಿ, ಹಂಸಧ್ವನಿ – ಮಿಶ್ರಜಾತಿ ಮತ್ತು ಮಧ್ಯಮಾವತಿ ಸಂಕೀರ್ಣ ಜಾತಿ ಅನುಸರಿಸಲಾಗಿದೆ.

ಇದನ್ನೇ *ರಟ್ಟೆಯಾಗಿ ಕೂಡ ಪರಿವರ್ತನೆಗೆ ಒಳಪಡಿಸುವ ಅವಕಾಶವಿದ್ದು ಧೃತಗಳು ಅಥವಾ ತಾಳದ ಉತ್ತರಾರ್ಧ ಚತುರ್ಥ್ಯದಲ್ಲಿ ಇರಬೇಕೆಂಬ ನಿಯಮಗಳಿಗೆ ಅನುಸಾರವಾಗಿ ಹಾಡಬಹುದು. ಈ ರಚನೆಯು ತಾಳದ ಸಂಕೀರ್ಣತೆಯನ್ನು ಹೊಂದಿದ್ದು ನಿಜಕ್ಕೂ ಸಾಧಕರಿಗೊಂದು ಸವಾಲೇ ನಿಜ !

"ಇಂತಕೋಪಮೇಲರ – ಘನರಾಗ ಮಾಲಿಕೆ"

ವೀಣಾ ಕುಪ್ಪಯ್ಯರ್ (1798–1860)

ತ್ಯಾಗರಾಜರ ವಿಶಿಷ್ಟ ಶಿಷ್ಯರು ಹಾಗೂ ಗಾಯನ ಮತ್ತು ವೀಣಾ ವಾದನದಲ್ಲಿ ಪರಿಣಿತರಾಗಿದ್ದರು. ಅವರ ತಂದೆ ಸಾಂಬಮೂರ್ತಿ ಶಾಸ್ತ್ರಿಗಳಿಂದ ತರಬೇತಿ ಪಡೆದು "ಗಾನಚಕ್ರವರ್ತಿ" ಬಿರುದು ಪಡೆದಿದ್ದರು. ಸಂಸ್ಕೃತ ತೆಲುಗು ಭಾಷೆಗಳ ವಿದ್ವಾಂಸರಾಗಿದ್ದ ಇವರು "ಗೋಪಾಲದಾಸ" ಎಂಬ ಅಂಕಿತದೊಂದಿಗೆ ವರ್ಣಗಳನ್ನು, ಕೃತಿಗಳನ್ನು ಮತ್ತು ರಾಗಮಾಲಿಕೆಗಳನ್ನು ರಚಿಸಿದ್ದಾರೆ. "ಇಂತ ಕೋಪಮೇಲರ– ಘನರಾಗ ಮಾಲಿಕೆ – ಆದಿತಾಳ" ನವಘನರಾಗಮಾಲಿಕೆ ವರ್ಣವು ಘನರಾಗಗಳಾದ ನಾಟ, ಗೌಳ, ವರಾಳಿ, ಆರಭಿ, ಶ್ರೀರಾಗ ಮತ್ತು ದ್ವಿತೀಯ ಘನಪಂಚಕ ರಾಗಗಳಾದ ನಾರಾಯಣಗೌಳ, ರೀತಿಗೌಳ, ಬೌಳಿ, ಕೇದಾರ ರಾಗಗಳನ್ನು ಒಳಗೊಂಡಿವೆ.

ಪ್ರೊಫೆಸರ್ ಪಿ.ಸಾಂಬಮೂರ್ತಿ (1901–1973)

20ನೇ ಶತಮಾನದಲ್ಲಿನ ಪ್ರಸಿದ್ಧ ಸಂಗೀತಶಾಸ್ತ್ರಜ್ಞರು, ಬರಹಗಾರರು ಮತ್ತು ತಿರುಪತಿ ಶ್ರೀ ವೆಂಕಟೇಶ್ರವರ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಸಾಂಬಮೂರ್ತಿ ಅವರು ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ ಮತ್ತು ಸಂಗೀತ ಮತ್ತು ಸಂಗೀತಶಾಸ್ತ್ರದ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಸಂಗೀತ ಶಿಕ್ಷಣ ಸಂಸ್ಥೆಗಳಲ್ಲಿ ಸಂಗೀತ ಬೋಧನೆಯನ್ನು ಪರಿಚಯಿಸುವ ಪ್ರವರ್ತಕರಾಗಿದ್ದರು, ಸಭಾ ಸಂಘಟಕರಾಗಿದ್ದರು ಹಾಗೂ **"ಸಂಗೀತ ಅಕಾಡೆಮಿಯ ಸ್ಥಾಪಕ ಪಿತಾಮಹ"**ರಲ್ಲಿ ಒಬ್ಬರು. ವಿವಿಧ ಸಂಗೀತ ಪ್ರಕಾರಗಳ ಸಂಯೋಜಕರು ಮತ್ತು ಕರ್ನಾಟಕ ಸಂಗೀತದ ರಾಯಭಾರಿಯಾಗಿ ಗುರುತಿಸಲ್ಪಟ್ಟರು. ಇವರು ಲೇಖಕರಾಗಿ

“Dictionary of South Indian Music and Musicians” ದಕ್ಷಿಣ ಭಾರತೀಯ ಸಂಗೀತ, ಶ್ರುತಿವಾದ್ಯಗಳು, ಮುಂತಾದ ಹಲವಾರು ಸಂಗೀತದ ಪುಸ್ತಕಗಳನ್ನು ಬರೆದಿದ್ದರು ಮತ್ತು “ಪದ್ಮಭೂಷಣ ಪ್ರಶಸ್ತಿ”, “ಸಂಗೀತ ಕಲಾನಿಧಿ “ಪ್ರಶಸ್ತಿ ಭಾಜನರಾಗಿದ್ದರು.

“ಅಷ್ಟರಾಗಮಾಲಿಕಾ ವರ್ಣ”

ರಾಗಮಾಲಿಕ ವರ್ಣಮು-ವರ್ಣದ ಪೂರ್ವಾಂಗ ಸಾಹಿತ್ಯದಲ್ಲಿ ಬಿಲಹರಿ, ಧನ್ಯಾಸಿ, ಮಧ್ಯಮಾವತಿ, ಕಲ್ಯಾಣಿ, ಪೂರ್ವಿಕಲ್ಯಾಣಿ ಕೇದಾರಗೌಳ ಮೋಹನ ಮತ್ತು ಭೂಪಾಲ ಎಂಬುದಾಗಿ “ರಾಗಮುದ್ರೆ”ಯನ್ನು ಅನುಪಲ್ಲವಿಯಲ್ಲಿ, “ಅಷ್ಟ ರಾಗಮಾಲಿಕ ವರ್ಣಮು” ಎಂಬ ಸಾಹಿತ್ಯದೊಂದಿಗೆ ಮತ್ತು ವರ್ಣದ ಉತ್ತರಾಂಗ ಭಾಗದಲ್ಲಿ “ಪ್ರಬಂಧ ಮುದ್ರೆ”ಯನ್ನು ಅತಿ ಚಮತ್ಕಾರದಿಂದ ಸಾಹಿತ್ಯದೊಂದಿಗೆ ಜೋಡಿಸಿದ್ದಾರೆ.

ಸುಗುಣ ಪುರುಷೋತ್ತಮನ್ (1941–25 ಫೆಬ್ರವರಿ 2015)

ಇವರು ಗಾಯಕಿಯಾಗಿಯೂ, ಶಿಕ್ಷಕಿಯಾಗಿಯೂ, ಸಂಯೋಜಕರು ಹಾಗೂ ರಚನಾಕಾರರು ಆಗಿದ್ದರು. ಇವರು ಮುಸುರಿ ಸುಬ್ರಹ್ಮಣ್ಯ ಅಯ್ಯರ್ ಅವರಲ್ಲಿ ಸಂಗೀತ ಶಿಕ್ಷಣ ಪಡೆದಿದ್ದರು ಹಾಗೂ ಪ್ರಸಿದ್ಧ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಬಳಿ ವಿಶೇಷ ತರಬೇತಿ ಪಡೆದಿದ್ದರು. ತಿನ್ನಿಯಂ ವೆಂಕಟರಾಮ ಅಯ್ಯರ್ ಅವರ ಮಾರ್ಗದರ್ಶನದಲ್ಲಿ ಪಲ್ಲವಿಗಳನ್ನು ಹಾಡುತ್ತಿದ್ದರು. “ದ್ವಿತಾಳ ಅವಧಾನವನ್ನು” ಕರಗತ ಮಾಡಿಕೊಂಡಿದ್ದರು. ಅವರು ಲಯದಲ್ಲಿ ಅದ್ಭುತವಾದ ಚಾತುರ್ಯವನ್ನು ಹೊಂದಿದ್ದರು ಬಹಳ ಅಪರೂಪವಾದ “ಶರಭನಂದನ ಮತ್ತು *ಸಿಂಹಾನಂದನ” (128 ಎಣಿಕೆಗಳು) ತಾಳಗಳಲ್ಲಿ ಪಲ್ಲವಿಗಳನ್ನು ಮತ್ತು ದ್ವಿತಾಳ ಪಲ್ಲವಿಗಳನ್ನು ವಿಶೇಷವಾಗಿ ಪ್ರಸ್ತುತಪಡಿಸುತ್ತಿದ್ದರು. ಇವುಗಳಿಂದಾಗಿ ಅವರು “ಪಲ್ಲವಿ ಸುಗುಣ” ಎಂದು ಪ್ರಸಿದ್ಧರಾಗಿದ್ದರು. “ಸಂಗೀತಚೂಡಾಮಣಿ”, “ಕಲೈಮಾಮಣಿ”, *ಪ್ರಶಸ್ತಿಗಳನ್ನು ಪಡೆದಿದ್ದರು.

“ಪ್ರಿಯರಾಗಮಾಲಿಕಾವರ್ಣ”ವು ರಾಗದ ಕೊನೆಯಲ್ಲಿ ಪ್ರಿಯಾ ಎಂಬ ಪ್ರತ್ಯಯಗಳನ್ನು ಹೊಂದಿರುವಂತಹ ಖರಹರಪ್ರಿಯ, ಕೋಕಿಲಪ್ರಿಯ, ರಾಮಪ್ರಿಯ, ಷಣ್ಮುಖಪ್ರಿಯ,

ಪಶುಪತಿಪ್ರಿಯ, ರಿಷಭಪ್ರಿಯ, ಗಾಯಕಪ್ರಿಯ ಮತ್ತು ರಸಿಕಪ್ರಿಯ ರಾಗಗಳಲ್ಲಿ ಸಂಯೋಜಿಸಲ್ಪಟ್ಟಿದೆ. ಸಾಹಿತ್ಯದಲ್ಲಿ ರಾಗ ಮುದ್ರೆಯನ್ನೂ ಕಾಣಬಹುದಾಗಿದೆ.

ಇವರು ರಚಿಸಿರುವ ಇತರ ರಾಗಮಾಲಿಕೆಗಳು:

ಭೈರವಿ, ಪ್ರಾಸಾಂತ್ಯದ ಭೈರವಿ, ನಟಭೈರವಿ, ವಸಂತಭೈರವಿ, ಸಾಲಗಭೈರವಿ, ಆನಂದಭೈರವಿ, ಸಿಂಧುಭೈರವಿ ಮತ್ತು ಆಹಿರ್‌ಭೈರವಿಯ ರಾಗಗಳಲ್ಲಿ ಸಂಯೋಜಿಸಲ್ಪಟ್ಟಿದೆ. "ಭೈರವಿ ಮಾಲಾ" ರಾಗಮಾಲಿಕೆ "ಭೈರವಿ ದೇವಿ"ಯನ್ನು ಕುರಿತದ್ದಾಗಿದೆ. ದೇವಮನೋಹರಿ, ಜಯಮನೋಹರಿ, ಸರಸ್ವತಿಮನೋಹರಿ, ಮತ್ತು ರಾಮಮನೋಹರಿ ಇರುವ "ಮನೋಹರಿ ಮಾಲೆ"ಯನ್ನೂ ರಚಿಸಿದ್ದಾರೆ. "ಪಂಚಕಲ್ಯಾಣಿ" ರಾಗಮಾಲಿಕೆ "ಘನರಾಗ ಮಾಲಿಕೆ" ಮತ್ತು "ತಾಳಮಾಲಿಕೆ"ಗಳ ರಚನೆಗಳನ್ನು ಕಾಣಬಹುದು. ಹೆಚ್ಚಿನ ರಚನೆಗಳು ಪಲ್ಲವಿಗೆ ಮಿಶ್ರಛಾಪು ಮತ್ತು ಚರಣಗಳಿಗೆ ಆದಿತಾಳ ಸಂಯೋಜಿಸಲಾಗಿದೆ. ವಾಸಂತಿ, ಹಂಸಾನಂದಿ ಮತ್ತು ಮಧುವಂತಿ ರಾಗಮಾಲಿಕೆಯ ತಿಲ್ಲಾನಗಳನ್ನೂ ಇವರು ರಚಿಸಿದ್ದಾರೆ.

ರಾಗಮಾಲಿಕಾ ಪದವರ್ಣಗಳು

ಕೆ.ಪೊನ್ನಯ್ಯ ಪಿಳ್ಳೆ (ಕ್ರಿ.ಶ 1888–1945)

ತಂಜಾವೂರ್ ಸಹೋದರ ಚತುಷ್ಟಯರಲ್ಲಿ ಪೊನ್ನಯ್ಯ ಪಿಳ್ಳೈ ಒಬ್ಬರು. ಇವರು ಕರ್ನಾಟಕ ಸಂಗೀತದ ಸಂಯೋಜಕರಲ್ಲಿ ಪ್ರಸಿದ್ಧರಾದವರು. ಚಿನ್ನಯ್ಯ, ಪೊನ್ನಯ್ಯ, ಶಿವಾನಂದ ಮತ್ತು ವಡಿವೇಲು ಈ ನಾಲ್ವರು ಸಹೋದರರು ಮುತ್ತುಸ್ವಾಮಿದೀಕ್ಷಿತರ ಶಿಷ್ಯರು ಹಾಗೂ ಪಾಲ್ಗಾಟ್ ಅನಂತರಾಮ ಭಾಗವತರಿಂದ ಕೆಲವು ಸಂಯೋಜನೆಗಳನ್ನು ಕಲಿತರು. ಪೊನ್ನಯ್ಯನವರು ಸಹೋದರರೆಲ್ಲರನ್ನು ಮೀರಿಸಿದ ವಾಗ್ಗೇಯಕಾರರು ಮತ್ತು ಭರತನಾಟ್ಯವನ್ನು, ಸಾಹಿತ್ಯವನ್ನೂ ಸಮೃದ್ಧಿಗೊಳಿಸಿದವರು ಆಗಿದ್ದಾರೆ. ಸ್ವರಜತಿಗಳನ್ನು, ಪದವರ್ಣಗಳನ್ನು, ನವರತ್ನರಾಗವರ್ಣಮಾಲಿಕ ಮತ್ತು ಕುರವಂಜಿ ಪದಗಳು ಮುಂತಾದವುಗಳನ್ನು ರಚಿಸಿದ್ದಾರೆ. 1932ರಲ್ಲಿ "ಸಂಗೀತ ಕಲಾನಿಧಿ" ಪ್ರಶಸ್ತಿಯನ್ನು ಪಡೆದಿದ್ದಾರೆ. "ಈಸೈಲೆ" ಎಂಬ ಸಂಗೀತಶಾಸ್ತ್ರದ ಪುಸ್ತಕವನ್ನು ಬರೆದಿದ್ದಾರೆ. ಇವರು ರಚಿಸಿರುವ ಸಾಮಿ ನಿನ್ನೇ ಕೋರಿ – ರೂಪಕ ತಾಳ – ತೋಡಿ, ಶಂಕರಾಭರಣ,

ಪಂತುವರಾಳಿ, ಅಠಾಣ, ಭೈರವಿ, ಕಲ್ಯಾಣಿ, ವಸಂತ ಮತ್ತು ಮುಖಾರಿ ರಾಗಗಳಲ್ಲಿ ಸಂಯೋಜನೆಗೊಂಡಿದೆ. ಪದವರ್ಣಗಳು ಹೆಚ್ಚಾಗಿ ನೃತ್ಯ ಪ್ರದರ್ಶನಕ್ಕೆ ಹೊಂದುವಂತಹುದು.

ಲಾಲ್ಗುಡಿ ಜಿ.ಜಯರಾಮನ್ (1930–2013)

ಶ್ರೀ ಲಾಲ್ಗುಡಿ ಜಿ.ಜಯರಾಮನ್‌ರವರು ಪ್ರಸಿದ್ಧ ಪಿಟೀಲು ವಾದಕರು ಮತ್ತು ಹೆಸರಾಂತ ಸಂಯೋಜಕರಾಗಿದ್ದರು. ವೀಣೆಶೇಷಣ್ಣನವರ ನಂತರ ಸಕ್ರಿಯವಾಗಿ ಸಂಯೋಜಿಸಿದ ಏಕೈಕ ಸಮೃದ್ಧ ವಾದ್ಯಕಲಾವಿದರು. ನೇದುನೂರಿ ಕೃಷ್ಣಮೂರ್ತಿ, ಡಿ.ಕೆ.ಜಯರಾಮನ್, ವೊಲೇಟಿ ವೆಂಕಟೇಶ್ವರುಲು, ಎಂ.ಎ. ವಸಂತಕುಮಾರಿಯಂತಹ ಪ್ರಸಿದ್ಧ ಧೀಮಂತ ಸಂಗೀತಗಾರರು ಮಾತ್ರವಲ್ಲದೆ ಪ್ರಮುಖ ನೃತ್ಯಗಾರರೂ ಇವರ ಸಂಯೋಜನೆ ಮತ್ತು ರಚನೆಗಳನ್ನು ಸಂಗೀತ ವೇದಿಕೆಯಲ್ಲಿ ಪ್ರದರ್ಶಿಸಿದ್ದಾರೆ. ಇವರ ರಚನೆಗಳು ಹಿಂದಿನಿಂದಲೂ ನೃತ್ಯ ಮತ್ತು ಸಂಗೀತ ವೇದಿಕೆಗಳಲ್ಲಿ ನಿಯಮಿತವಾಗಿ ಕಾಣಿಸಿಕೊಂಡಿವೆ. ಅನೇಕ ತಾನವರ್ಣಗಳನ್ನು ಪದವರ್ಣಗಳನ್ನು ಮತ್ತು ಕೃತಿಗಳನ್ನು ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿಸಿದ್ದಾರೆ. ಅಲ್ಲದೆ ಅವರ ರಚನೆಗಳಲ್ಲಿ ಆಕರ್ಷಕವಾದ ಲಯ ಅಥವಾ ಲಯಬದ್ಧ ಜಟಿಲತೆಯನ್ನು ಪರಿಚಯಿಸಿದ್ದಾರೆ. ಇವರು ದೇವಗಂಧಾರಿ ಮತ್ತು ನೀಲಾಂಬರಿಯಂತಹ ರಾಗಗಳಲ್ಲಿಯೂ ವರ್ಣಗಳನ್ನು ರಚಿಸಿದ್ದಾರೆ.

"ಅಂಗಯ್ಯರ್ ಕಣ್ಣೀ – ನವರಸರಾಗಮಾಲಿಕೆಯ ವರ್ಣ" ಬಿಲಹರಿ, ಹುಸೇನಿ, ವಲಚಿ, ಸಾರಂಗ, ಸುಚರಿತ್ರ, ಅಠಾಣಾ, ರಸಿಕಪ್ರಿಯಾ, ಶಹನ, ನಾದಾನಾಮಕ್ರಿಯ ರಾಗಗಳೊಂದಿಗೆ ನವರಸ ಭಾವಗಳನ್ನು ಹೊಂದಿರುವ, ಸಂಗೀತ ವೇದಿಕೆಯಲ್ಲಿ ಕಾಣಬರುವ ರಚನೆಯಾಗಿದೆ.

ಎಂ.ವಿ.ನರಸಿಂಹಾಚಾರಿ (1942–2015)

ಹಿರಿಯ ಶಾಸ್ತ್ರೀಯ ನೃತಗುರು ಎಂ.ವಿ.ನರಸಿಂಹಾಚಾರಿರವರು ಗಾಯನದಲ್ಲಿಯೂ, ಮೃದಂಗವಾದನದಲ್ಲಿಯೂ, ಪರಿಣಿತರಾಗಿದ್ದರು. ವಿದ್ವಾನ್ ಎಂ.ಡಿ.ರಾಮನಾಥನ್ ಮತ್ತು

*ಎಸ್.ಆರ್.ಜಾನಕಿ ರಾಮನವರಿಂದ ಗಾಯನ ಸಂಗೀತದ ಶಿಕ್ಷಣ ಪಡೆದಿದ್ದರು. "ನವರಸ ಗಾನಂ" ರಾಗಮಾಲಿಕಾವರ್ಣ ನವರಸಭರಿತ ನವರಾಗಗಳಾದ ಶಂಕರಾಭರಣ, ಸಾರಂಗ, ಹಂಸಧ್ವನಿ, ಷಣ್ಮುಖಪ್ರಿಯ, ಶಹನ, ಧನ್ಯಾಸಿ, ಬಿಲಹರಿ, ಮುಖಾರಿ, ಅಠಾಣ, ಸಾವೇರಿ ಮತ್ತು ಸಾಮ ರಾಗದಲ್ಲಿ ರಚಿಸಿದ್ದಾರೆ. ಈ ರಚನೆಯು ತಮಿಳು ಸಾಹಿತ್ಯವನ್ನು ಹೊಂದಿದ್ದು ರಾಮದೇವರನ್ನು ಕುರಿತದ್ದಾಗಿದೆ.

ಮುತ್ತುಸ್ವಾಮಿ ದೀಕ್ಷಿತರು (ಕ್ರಿ ಶ 1775–1835)

ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಕಿರಿಯರಾದ ಮುತ್ತುಸ್ವಾಮಿ ದೀಕ್ಷಿತರು ವೈಣಿಕ(ವೀಣಾವಾದಕ), ಸಂಗೀತ ಸಂಯೋಜಕರು ಸಾಧಕ ಮತ್ತು ಶ್ರೀವಿದ್ಯಾ ಉಪಾಸಕರು. ದೀಕ್ಷಿತರು ಬಹುಮುಖ ಸಂಯೋಜಕ, ಸಂಗೀತದ ವಿವಿಧ ವಿಶಿಷ್ಟ ಪ್ರಕಾರಗಳಲ್ಲಿ ಪ್ರವೀಣರಾಗಿದ್ದರು ಮತ್ತು ಪರಿಶುದ್ಧ ಭಾಷಾ ಸಾಮರ್ಥ್ಯಗಳನ್ನು ಹೊಂದಿದ್ದರು.ಅವರು ರಚಿಸಿದ ರತ್ನಗಳ ಮಹಾಪೂರವು ಕರ್ನಾಟಕ ಸಂಗೀತ ಸಂಗ್ರಹದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ರಾಮಸ್ವಾಮಿ ದೀಕ್ಷಿತರ ಪುತ್ರರಾದ ಇವರು ಸಂಗೀತ ತ್ರಿಮೂರ್ತಿಗಳಲ್ಲೊಬ್ಬರು. ಖ್ಯಾತ ಲಾಕ್ಷಣಿಕ ಹಾಗೂ ಸಂಗೀತ ವಿದ್ವಾಂಸರಾಗಿದ್ದ ಮುದ್ದು ವೆಂಕಟಮಖಿಯಲ್ಲಿ ಶಿಕ್ಷಣ ಪಡೆದಿದ್ದರು. ತಮ್ಮ ತಂದೆಯಲ್ಲಿಯೇ ಸಂಗೀತ ಮತ್ತು ವೀಣಾ ಅಭ್ಯಾಸಗಳನ್ನು ಕಲಿತು ಪರಿಣಿತರಾದರು. ಸಂಸ್ಕೃತ ಮಂತ್ರ ವೇದಶಾಸ್ತ್ರಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದರು. ಚಿದಂಬರನಾಥ ಸ್ವಾಮಿಯವರಲ್ಲಿ ಶಿಷ್ಯ ವೃತ್ತಿಯಲ್ಲಿದ್ದಾಗ ತಂತ್ರಶಾಸ್ತ್ರ ಉಪನಿಷತ್ ಯೋಗ ಮತ್ತು ಶ್ರೀವಿದ್ಯೋಪಾಸನೆಯ ದೀಕ್ಷೆಯನ್ನು ಪಡೆದರು. ದೀಕ್ಷಿತರಿಗೆ ದೀಕ್ಷೆಯನ್ನು ನೀಡಿದರು– "ಶ್ರೀ ಚಿದಾನಂದ ನಾಥೋಹಂ ಇತಿ". "ಶ್ರೀನಾಥದಿ ಗುರುಗುಹೋ ಜಯತಿ" ಹೆಸರನ್ನು ಬಳಸಿಕೊಂಡ ಅವರ ಮೊದಲ ಸಂಯೋಜನೆ ಎಂದು ಹೇಳಲಾಗುತ್ತದೆ. ಮುತ್ತುಸ್ವಾಮಿ ದೀಕ್ಷಿತರ ಸಂಗೀತದ ಸೈದ್ಧಾಂತಿಕ ಹಿನ್ನೆಲೆಯು ವೆಂಕಟಮಖಿಯ ಸಂಗೀತಶಾಸ್ತ್ರವಾಗಿದೆ. ಅವರು ರಚಿಸಿರುವ ಎಲ್ಲಾ ಕೃತಿಗಳಲ್ಲೂ ಭಕ್ತಿರಸ ಕೇಂದ್ರ ವಿಷಯ

ವಾಗಿದೆ. ಇವರು ನವಾವರಣ ಕೃತಿಗಳನ್ನು, ನವಗ್ರಹ ಕೃತಿಗಳನ್ನು, ಕೆಲವು ಸಮುದಾಯ ಕೃತಿಗಳನ್ನು, ವಿಶಿಷ್ಟ ರಾಗಮಾಲಿಕೆಗಳನ್ನು ಇನ್ನೂ ಹಲವಾರು ಕೃತಿಗಳನ್ನು **"ಗುರುಗುಹ"** ನಾಮಾಂಕಿತದಲ್ಲಿ ರಚಿಸಿದ್ದಾರೆ.

ಇವರು ರಚಿಸಿರುವ ಸುಪ್ರಸಿದ್ಧ ರಾಗಮಾಲಿಕೆಗಳು:

"ಪೂರ್ಣಚಂದ್ರಬಿಂಬ"– ರೂಪಕತಾಳ–ಷಡ್ರಾಗಮಾಲಿಕೆ.

ಈ ಸಂಯೋಜನೆಯ ಭೌಗೋಳಿಕ ಸ್ಥಳವು ತಿರುವಾರೂರ್ ಆಗಿದೆ, ಮತ್ತು ಈ ಹಾಡು ಕಮಲಾಂಬಾದೇವಿಯ ಸ್ತುತಿಯ ಕುರಿತಾಗಿದೆ. ಪೂರ್ಣಚಂದ್ರಿಕೆ, ಸರಸ್ವತಿಮನೋಹರಿ, ಶುದ್ಧ–ವಸಂತ, ಕೇದಾರ, ಹಂಸಧ್ವನಿ ಮತ್ತು ನಾಗಧ್ವನಿ ರಾಗಗಳಲ್ಲಿ ಸಂಯೋಜನೆಗೊಂಡಿದ್ದು ಲಲಿತಾಸಹಸ್ರನಾಮದಲ್ಲಿ ನಾರಾಯಣಿ, ವರದಾ,ಅಪರ್ಣ ಎಂಬ ದೇವಿಯ ನಾಮಗಳನ್ನು ಸಾಹಿತ್ಯದಲ್ಲಿ ಕಾಣಬರುತ್ತದೆ.

"ಶ್ರೀ ವಿಶ್ವನಾಥಂ ಭಜೇಹಂ" ಅತಿ ಭವ್ಯವಾದ ಉತ್ಕೃಷ್ಟವಾದ ಚತುರ್ದಶ ರಾಗಮಾಲಿಕೆ. ಶ್ರೀ ವಿಶ್ವನಾಥಂ ಚತುರ್ದಶ ರಾಗಮಾಲಿಕೆಯನ್ನು 14 ರಾಗಗಳಲ್ಲಿ ಹೊಂದಿಸಲಾಗಿದ್ದು ಒಂದು ಚರಣ ಅಥವಾ ಖಂಡಿಕೆಯು ಹೆಚ್ಚು ರಾಗಗಳನ್ನು ಹೊಂದಿರುವ ರಾಗಮಾಲಿಕೆಗಳಿಗೆ ಉದಾಹರಣೆಯಾಗಿದೆ. ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಚತುರ್ದಶ ಭುವನಗಳು ಅಥವಾ 14 ಲೋಕಗಳನ್ನು ಸಂಕೇತಿಸುವ ಈ ರಾಗಮಾಲಿಕೆಯು ಎರಡು ಭಾಗಗಳಲ್ಲಿ ಆಸಕ್ತಿದಾಯಕವಾಗಿ ವಿಭಜಿಸಲಾಗಿದೆ. ಅದ್ಭುತವಾಗಿ, ರಚನಾತ್ಮಕವಾಗಿ, ಶ್ರೀರಾಗದಿಂದ ಮೋಹನದವರೆಗೆ ಮೊದಲ ಆರು ರಾಗಗಳು ಹಿಮ್ಮುಖ ಕ್ರಮದಲ್ಲಿ ಅರ್ಧ ಆವರ್ತನಕ್ಕೆ ಮುಂದುವರೆಯುತ್ತದೆ ಮತ್ತು ಪ್ರತಿಯೊಂದು ಮುಕುಟಸ್ವರದೊಂದಿಗೆ ಪಲ್ಲವಿಗೆ ಹಿಂತಿರುಗುತ್ತದೆ. ಎರಡನೆಯ ಭಾಗವು ರಾಗ ಸಾಮದಿಂದ ಪ್ರಾರಂಭವಾಗಿ ಭೂಪಾಲದೊಂದಿಗೆ ಕೊನೆಗೊಳ್ಳುವ ಇತರ ಏಳು ರಾಗಗಳೊಂದಿಗೆ ಮುಂದುವರೆಯುತ್ತದೆ. ಪಲ್ಲವಿಯು ಹಿಮ್ಮುಖ ಕ್ರಮದಲ್ಲಿ ವಿಲೋಮ ಕ್ರಮದೊಂದಿಗೆ ಸೇರುತ್ತವೆ. ದೀಕ್ಷಿತರು ರಾಗಮುದ್ರೆಯನ್ನು ಸುಂದರವಾಗಿ ಬಳಸಿರುವುದನ್ನು ಕಾಣಬಹುದು.

ಈ ರಾಗಮಾಲಿಕೆಯಲ್ಲಿ ಚಿಟ್ಟೆಸ್ವರವು ಸಾಹಿತ್ಯ ಒಳಗೊಂಡಿದ್ದು ರಾಗಮುದ್ರೆಯನ್ನು ಹೊಂದಿದೆ. ಹಾಗೂ ಕೊನೆಯಲ್ಲಿ ವಿಲೋಮ ಕ್ರಮದಲ್ಲಿ ಸ್ವರ ಸಾಹಿತ್ಯಗಳು ಹೊಂದಿದ್ದು ಕೃತಿಯನ್ನು ಅನುಪಲ್ಲವಿಯಲ್ಲಿ ಬರುವ "ಮೋಹನರಾಗದ ಸಾಹಿತ್ಯ ಭಾಗದಿಂದ ಆರಂಭಿಸಿ ಶ್ರೀರಾಗದ ಹೃದಯ ನಿಲಯ"ದವರೆಗೂ ಹಾಡಿ ರಾಗಮಾಲಿಕೆಯನ್ನು ಮುಕ್ತಾಯ ಗೊಳಿಸಬೇಕು. ಯುವಕಲಾವಿದರು ಮತ್ತು ಸಂಗೀತಾಭ್ಯಾಸಿಗಳಿಂದ ಅತಿ ಹೆಚ್ಚು ಆಕರ್ಷಿಸಲ್ಪಟ್ಟಿರುವ, ಇಂದಿನ ಸಂಗೀತ ಕಚೇರಿಗಳಲ್ಲಿಯೂ ಕೇಳಲ್ಪಡುವ ಅತ್ಯುನ್ನತ ರಾಗಮಾಲಿಕೆಯಾಗಿದೆ. ಈ ರಾಗಮಾಲಿಕೆಯಲ್ಲಿ ಅಳವಡಿಸಿರುವ ಕೆಲವು ವಿಶೇಷ ರಾಗಗಳ ಕೃತಿಗಳು ಬಹಳ ಅಪರೂಪ. ಇಂತಹ ರಾಗಮಾಲಿಕೆಗಳನ್ನು ಕಲಿಯುವುದರಿಂದ ಬಹಳ ರಾಗಗಳ ಪರಿಚಯವನ್ನು ಮಾಡಿಕೊಂಡಂತಾಗುತ್ತದೆ. ದಶಾವತಾರಗಳನ್ನು ಸ್ತುತಿಸುವ **"ಮಾಧವೋ ಮಾಂಪಾತು"** –ದಶರಾಗ ಮಾಲಿಕೆ– ರೂಪಕ ತಾಳ ಘನರಾಗಗಳೊಂದಿಗೆ ಕೇದಾರ ವಸಂತ ಸುರುಟಿ ಸೌರಾಷ್ಟ್ರ ಮಧ್ಯಮಾವತಿಗಳೊಂದಿಗೆ ಸಂಯೋಜನೆಗೊಂಡಿದೆ.

"ಸಿಂಹಾಸನಸ್ಥಿತೇ" – ಚತುರ್ರಾಗ ಮಾಲಿಕೆ

ಸಿಂಹಾಸನಸ್ತಿತೆ ಚತುರ್ರಾಗಮಾಲಿಕೆ – ರೂಪಕ ತಾಳ

ಈ ರಾಗಮಾಲಿಕೆಯಲ್ಲಿ ಮಂಗಳಕರ ರಾಗಗಳಾದ ಸೌರಾಷ್ಟ್ರ, ವಸಂತ, ಮಧ್ಯಮಾವತಿ, ಸುರಟಿ ರಾಗಗಳನ್ನು ಸಂಯೋಜಿಸಲಾಗಿದೆ. ಈ ರಾಗಮಾಲಿಕೆಯನ್ನು ಕಚೇರಿಯಲ್ಲಿ ಕೊನೆಯಲ್ಲಿ ಮಂಗಳಪದವಾಗಿ ಹಾಡುತ್ತಾರೆ. ಈ ಕೃತಿ ಎಂಟನೆಯ (ಸಂಬೋಧನ ಪ್ರಥಮ) ವಿಭಕ್ತಿಯಲ್ಲಿದೆ. ಲಲಿತಾಸಹಸ್ರನಾಮದಲ್ಲಿ 'ಶ್ರೀಮತ್‌ಸಿಂಹಾಸನೇಶ್ವರಿ' ಎಂಬ ಹೆಸರು ಕಂಡುಬರುತ್ತದೆ. ಇದು ಇಲ್ಲಿನ ವಿಶೇಷಣವನ್ನು ಹೋಲುತ್ತದೆ. **'ಚಿದಾನಂದನಾಥ'** ಎಂಬುದು ಶ್ರೀ ಮುತ್ತುಸ್ವಾಮಿದೀಕ್ಷಿತರ ನಾಮವಾಗಿದೆ. ರಾಗಮಾಲಿಕಾ– ಮಂಗಳರಾಗಮಾಲಿಕಾ ಎಂದೂ ಕರೆಯಲ್ಪಟ್ಟಿದೆ.

ಸುಬ್ಬರಾಮ ದೀಕ್ಷಿತರು (ಕ್ರಿ. ಶ 1839–1906)

* ಬಾಲುಸ್ವಾಮಿ ದೀಕ್ಷಿತರ ಮೊಮ್ಮಗ ಸುಬ್ಬರಾಮದೀಕ್ಷಿತರು. ಪಟ್ಣಂಸುಬ್ರಹ್ಮಣ್ಯ ಅಯ್ಯರ್ ಮತ್ತು ಮಹಾವೈದ್ಯನಾಥ ಅಯ್ಯರ್ ಅವರ ಸಮಕಾಲೀನರು. ಇವರು ತಮ್ಮ 17ನೇ

ವಯಸ್ಸಿನಲ್ಲಿಯೇ ದರ್ಬಾರ್ ರಾಗದಲ್ಲಿ ತಾನವರ್ಣವನ್ನು ರಚಿಸಿದ್ದಾರೆ. ಒಂದು ನೃತ್ಯ ರೂಪಕಕ್ಕೆ ಆನಂದಭೈರವಿರಾಗದ ಚೌಕವರ್ಣ ಮತ್ತು ನವರಾಗಮಾಲಿಕೆಯೊಂದನ್ನು ರಚಿಸಿದರು. 1904ರಲ್ಲಿ ರಚಿಸಿದ ಸಂಪ್ರದಾಯ ಪ್ರದರ್ಶಿನಿಯು ವೆಂಕಟಮಖಿ ಸಂಪ್ರದಾಯವನ್ನು ಪ್ರತಿಪಾದಿಸುತ್ತದೆ. ವೆಂಕಟಮಖಿಯವರದೆ ಆದ ಗೀತೆಗಳನ್ನು, ಮುತ್ತುಸ್ವಾಮಿ ದೀಕ್ಷಿತರ ರಚನೆಗಳನ್ನು, ಪ್ರಬಂಧಗಳನ್ನು, ಚಿಟ್ಟೆತಾನಗಳನ್ನು ಮತ್ತು ಬೇರೆ ಬೇರೆ ವಾಗ್ಗೇಯಕಾರರುಗಳ ಅನೇಕ ಬಗೆ ಬಗೆಯ ಸಂಗೀತ ರಚನೆಯ ಪ್ರಕಾರಗಳನ್ನು ಹೊಂದಿದೆ.

"ಈ ಕನಕಾಂಬರಿ ನೆನಯುಮು." ಎಂಬ ಅಸಂಪೂರ್ಣ ಮೇಳ ಪದ್ಧತಿಯ ಮೇಳಗಳನ್ನು ಉಲ್ಲೇಖಿಸುವ *ರಾಗಾಂಗ ರಾಗಮಾಲಿಕೆಯ ರಚನೆಯ ಧಾತುಕರ್ತರು ಸುಬ್ಬರಾಯ ದೀಕ್ಷಿತರು.ಈ ರಾಗಮಾಲಿಕೆಯ ರಚನಾಂತ್ಯದಲ್ಲಿ **"ಪೋಷಕ ಮುದ್ರೆ"** ಇದೆ. ಸುಬ್ಬರಾಮ ದೀಕ್ಷಿತರು ತಮ್ಮ ರಾಗಾಂಗ ರಾಗಮಾಲಿಕೆಯಲ್ಲಿ ಒಂದು ಕುತೂಹಲ ಕಾರ್ಯ ವೈಶಿಷ್ಟ್ಯವನ್ನು ಬಳಸಿದ್ದಾರೆ. ದೀಕ್ಷಿತರ ಮನೆತನದವರು ಬಳಸುತ್ತಿದ್ದ 72 ರಾಗಾಂಗ ರಾಗಗಳನ್ನು ಅರ್ಥಮಾಡಿಕೊಳ್ಳಲು ಅತ್ಯುತ್ತಮ ರಾಗಮಾಲಿಕೆಯಾಗಿದೆ. ಈ ರಾಗಮಾಲಿಕೆಯು ಕನಕಾಂಬರಿಯಿಂದ ಪ್ರಾರಂಭಿಸಿ ರಸಮಂಜರಿಯಲ್ಲಿ ಕೊನೆಗೊಳ್ಳುತ್ತದೆ. ಸುಬ್ಬರಾಮ ದೀಕ್ಷಿತರು ರಚಿಸಿರುವ ಹಲವು ರಾಗಮಾಲಿಕೆಗಳು ರಾಜನ ಗೌರವಾರ್ಥ ರಚಿತವಾದುದು. "ನವರತ್ನಮಾಲಿಕೆ– ಎಂದುಕುರಾ ಈ ಕೋಪಮು" – ರಾಜಜಗವೀರ ಮತ್ತು ಸ್ವಾಮಿ ಎಟ್ಟಪ್ಪ ಅಯ್ಯನ್ ಗೌರವಾರ್ಥ ರಚಿತವಾದುದು.

"ನವರತ್ನಮಾಲಿಕೆ – ನೀ ಸರಿಲೇರನಿ ಕೋರಿನ" ಶ್ರೀ ರಾಮವರ್ಮ ತಿರುವಡಿ, ಕುಲಶೇಖರ ಕಿರೀಟ ಪತಿ ಮನ್ನೇ ಸುಲ್ತಾನ್ ಮಹಾರಾಜ ರಾಜಾ ರಾಮ ರಾಜ ಶಮ್‌ಶೀರ್ ಜಂಗ್ ತಿರುವನಂತಪುರ ರಾಜರ ಗೌರವಾರ್ಥವಾಗಿ ರಚಿತವಾಗಿದೆ*

"ನವರತ್ನ ಮಾಲಿಕೆ– ಗಾರವ ಮುಗನ್ನ ದೊರೆಯನಿ" ಯು ರಾಮನಾಡ್ ದೊರೆ ಭಾಸ್ಕರ ಸ್ವಾಮಿಯ ಗೌರವಾರ್ಥವಾಗಿ ರಚಿತವಾಗಿದೆ "ಕಾಮಿಂಚಿನ ಕಲಾವತಿ ರಾ"– ತಿಶ್ರ ಜಾತಿ ಏಕತಾಳ–32 ರಾಗಗಳು – ವಿಜಯನಗರದ ದೊರೆ ಪಶುಪತಿ ಆನಂದ ಗಜಪತಿ ರಾಜು ಗೌರವಾರ್ಥವಾಗಿ ರಚಿತವಾಗಿದೆ.

* **"ವಲಪು ಮೀರಿ ತೋಡಿ ತೆಮ್ಮನೆರ"–** ರೂಪಕ ತಾಳ – ತೋಡಿ – ಖಮಾಚ್ – ಭೈರವಿ – ಕಾಂಬೋಜಿ. – ಚತುರ್ರಾಗ ಮಾಲಿಕೆ ಈ ರಾಗಮಾಲಿಕೆಯು ಪ್ರತಿ ಖಂಡದಲ್ಲೂ ರಾಗಮುದ್ರೆಯನ್ನು ಹೊಂದಿದ್ದು ಚಿಟ್ಟೆಸ್ವರವು ಪದವರ್ಣದ ರೀತಿ ಸಾಹಿತ್ಯವನ್ನು ಹೊಂದಿದೆ. "ಮನತೋಡಿಣಂಗಿನ ಮಾತು ಮೀದು" – ಷಟ್‌ರಾಗಮಾಲಿಕೆ – ಆದಿತಾಳ; "ವನಿತರೊ ಏಮಿ– ಚತುರ್ರಾಗ ಮಾಲಿಕೆ" – ರೂಪಕ ತಾಳ ಈ ರಚನೆಯ ಸಂಗೀತ ಸಾಹಿತ್ಯಗಳನ್ನು 'ಪೊನ್ನಯ್ಯ ಪಿಳ್ಳೆ' ರಚಿಸಿದರಾದರೂ ಅನಂತರ ಇದರ ಸಾಹಿತ್ಯವನ್ನು ಸುಬ್ಬರಾಮಯ್ಯ ದೀಕ್ಷಿತರೆ ಮಾರ್ಪಡಿಸಿದರೆಂದು ತಿಳಿದು ಬರುತ್ತದೆ.

"ವೇಡುಕತೋ – ಪಂಚರಾಗಮಾಲಿಕೆ"–

ರೂಪಕ ತಾಳ. ಕೆಲವೊಂದು ರಚನೆಗಳಲ್ಲಿ "ಗುರುಗುಹ" ಪದವಿರುವುದು ಕೃತಿಕರ್ತರ ಬಗ್ಗೆ ಕೆಲವು ಸಂದೇಹವನ್ನು ವ್ಯಕ್ತಪಡಿಸುತ್ತದೆ. ಸುಬ್ಬರಾಮ ದೀಕ್ಷಿತರ ರಾಗಮಾಲಿಕೆಗಳು ರಾಗ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಕೇವಲ ಉಲ್ಲೇಖ ವಸ್ತುಗಳಾಗಿ ಕಾರ್ಯನಿರ್ವಹಿಸುವುದಿಲ್ಲ. ಈ ರಚನೆಗಳು ಸಂಗೀತವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ಈ ಎಲ್ಲಾ ರಚನೆಗಳು ತಾಳ ಪ್ರಸ್ತಾರದ ರಂಗದಲ್ಲಿ ಅವರಿಗಿದ್ದ ಪ್ರಬುದ್ಧತೆಯನ್ನೂ ಸಂಯೋಜಕರಾಗಿ ಸಂಗೀತದಲ್ಲಿದ್ದ ಕುಶಾಗ್ರಮತಿಯನ್ನು ಬಹಿರಂಗಪಡಿಸುತ್ತದೆ.

ಮಹಾವೈದ್ಯನಾಥ ಅಯ್ಯರ್ (1855–1892)

ಮಹಾವೈದ್ಯನಾಥ ಅಯ್ಯರ್, ಶಿವನ್ ಎಂದು ಜನಪ್ರಿಯರಾಗಿದ್ದವರು. ಇವರು ತಮ್ಮ ಸಂಗೀತದ ಆರಂಭಿಕ ತರಬೇತಿಯನ್ನು ಅವರ ತಂದೆ ಪಂಚನದ ಅಯ್ಯರ್ ಅವರಿಂದ ಪಡೆದರು. ಅವರ ಹಿರಿಯ ಸಹೋದರ ರಾಮಸ್ವಾಮಿಶಿವನ್ ಪ್ರವೀಣ ಸಂಗೀತಗಾರ ಮತ್ತು ಸಂಯೋಜಕರಾಗಿದ್ದರು. ವೈದ್ಯನಾಥ ಅಯ್ಯರ್ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಆಲಾಪನೆ ತಾನ ಪಲ್ಲವಿ ನೆರವೆಲ್ ಮತ್ತು ಕಲ್ಪನಾ ಸ್ವರವನ್ನು ನಿರೂಪಿಸುವಲ್ಲಿ ಪ್ರವೀಣರಾಗಿದ್ದರು. ಇವರು 128

ಅಕ್ಷರ ಅಥವಾ ಘಟಕಗಳನ್ನು ಒಳಗೊಂಡಿರುವ ಸಿಂಹನಂದನ ತಾಳ (ನೂರೆಂಟು ತಾಳಗಳಲ್ಲಿ ಉದ್ದವಾದದ್ದು) ಕಲ್ಯಾಣಿ ರಾಗದಲ್ಲಿ ದೀರ್ಘವಾದ ಮತ್ತು ಸಂಕೀರ್ಣವಾದ ಪಲ್ಲವಿಯ ಸಾಹಿತ್ಯ ನಿರೂಪಣೆ ಮಾಡಿದವರು. ಇದೇ ಪಲ್ಲವಿಯ ಸಾಹಿತ್ಯವನ್ನು ಸಿಂಹಾನಂದನ ತಾಳದಲ್ಲಿ ಕಲ್ಯಾಣಿ ರಾಗದಲ್ಲಿ ತಿಲ್ಲಾನವನ್ನು ರೂಪಿಸಿದರು. ಈ ತಿಲ್ಲಾನವನ್ನು ಕನ್ನಡ ರಾಗದಲ್ಲಿಯೂ ಹಾಡಲಾಗುವುದು. ಇವರ ರಚನೆಗಳು **"ಗುಹದಾಸ"** ಮುದ್ರೆಯನ್ನು ಒಳಗೊಂಡಿರುತ್ತವೆ.

"72 ಮೇಳರಾಗಮಾಲಿಕೆ" ಮಹಾವೈದ್ಯನಾಥ ಶಿವನ್ ಅವರ 72 ಮೇಳ ರಾಗ ಮಾಲಿಕೆಯು **ಪ್ರಣತಾರ್ತಿಹರ ಪ್ರಭೋ...** ಎಂಬದು ಸ್ಮಾರಕ ಸಂಯೋಜನೆಯಾಗಿದೆ. ಈ ರಾಗಮಾಲಿಕೆಯು ಶ್ರೀರಾಗದಲ್ಲಿ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರ ಮತ್ತು ಭವ್ಯವಾದ ಸೋಲ್ಕಟ್ಟು ಜತಿಯೊಂದಿಗೆ ಪ್ರಾರಂಭವಾಗುತ್ತದೆ. ಮೊದಲ ರಾಗವಾದ ಕನಕಾಂಗಿಯನ್ನು **ಕನಕಾಂಗ್ಯಾರ ಮಯ...** ಎಂಬ ಎರಡು ಸಾಲಿನ ಸಾಹಿತ್ಯಕ್ಕೆ ಹೊಂದಿಸಲಾಗಿದ್ದು ನಂತರ ಕನಕಾಂಗಿರಾಗದಲ್ಲಿ ಚಿಟ್ಟೆಸ್ವರವು ಒಂದೂವರೆ ಆವರ್ತನವಿದ್ದು, ಅರ್ಧ ಆವರ್ತನ ಮುಂದಿನ ರಾಗ ರತ್ನಾಂಗಿಯಲ್ಲಿ ಸ್ವರಕ್ಕೆ ಜೋಡಿಸಲಾಗಿದ್ದು ಎಲ್ಲಾ 72 ಮೇಳರಾಗಗಳು ಈ ರಚನೆಯನ್ನು ಅನುಸರಿಸುತ್ತದೆ. 12ನೇ ಮೇಳರಾಗವಾದ ರೂಪವತಿಯಲ್ಲಿ ಕೊನೆಯಲ್ಲಿ ಅರ್ಧ ಆವರ್ತನ ಸ್ವರವನ್ನು ಶ್ರೀರಾಗದಲ್ಲಿ ಹೊಂದಿಸಲಾಗಿದ್ದು ನಂತರ ಹಾಡು ಶ್ರೀರಾಗದಲ್ಲಿ ಪಲ್ಲವಿಯಲ್ಲಿ ವಿಲೀನಗೊಳ್ಳುತ್ತದೆ. ಇದೇ ವ್ಯಾಕರಣ ಕ್ರಮದಲ್ಲಿ ಎಲ್ಲಾ 72 ಮೇಳ ರಾಗಗಳನ್ನು ರಾಗಮಾಲಿಕೆಗಳಾಗಿ ಹಾಡಲಾಗುತ್ತದೆ. ಎರಡು ಚಕ್ರಗಳು ಅಥವಾ 12 ಮೇಳ ರಾಗಗಳ ನಂತರ ಪಲ್ಲವಿಯನ್ನು ಹಾಡುವುದರ ಮೂಲಕ ಶ್ರೀರಾಗದ ಸ್ವರದ ಅರ್ಧ ಆವರ್ತನವು ಸಾಮಾನ್ಯ ಅಭ್ಯಾಸದಲ್ಲಿದೆ. ಈ ರಾಗಮಾಲಿಕೆಯಲ್ಲಿ 72 ಮೇಳ ರಾಗಗಳ ಸಮಗ್ರ ಪರಿಚಯವು ಮಹಾವೈದ್ಯನಾಥಶಿವನ್ ಅವರ ಮೂಲ ಕೃತಿಯಲ್ಲಿ ನಿರೂಪಿಸಲಾಗಿದೆ.

ಸಾಮಾನ್ಯವಾಗಿ ರಾಗಮಾಲಿಕೆಯಲ್ಲಿ ಕಾಣಬರುವ ಅಂಶಗಳು:

1. ರಾಗಮಾಲಿಕೆಗಳ ರಚನೆಯು ಸಾಹಿತ್ಯದ ಪ್ರತಿ ಖಂಡಗಳು ಬೇರೆ ಬೇರೆ ರಾಗಗಳನ್ನು ಹೊಂದಿರುತ್ತದೆ.
2. ರಾಗಮುದ್ರೆಯು ಸಾಹಿತ್ಯದಲ್ಲಿ ಸೇರ್ಪಡೆಯಾಗಿರುತ್ತದೆ.

3. ಚಿಟ್ಟೆಸ್ವರಗಳನ್ನು ಪ್ರತಿ ಖಂಡದಲ್ಲಿಯೂ ಅಳವಡಿಸಲಾಗಿರುತ್ತದೆ.
4. ಕೆಲವೊಂದು ರಾಗಮಾಲಿಕೆಗಳಲ್ಲಿ ಮುಕುಟ ಸ್ವರವು ಪಲ್ಲವಿಯನ್ನು ಸೇರಿಕೊಳ್ಳಲು ಅನುಕೂಲವಾಗುವಂತೆ ಕೆಲವೊಂದು ರಚಿತವಾಗಿರುವುವು.
5. ಚಿಟ್ಟೆಸ್ವರಗಳಲ್ಲಿ ವಿಲೋಮ ಕ್ರಮವನ್ನು ಕೊನೆಯ ರಾಗಗಳ ಚಿಟ್ಟೆಸ್ವರದಲ್ಲಿ ಕಾಣಬಹುದು.
6. ಕೆಲವೊಂದು ರಚನೆಗಳಲ್ಲಿ ಚಿಟ್ಟೆಸ್ವರ ಮತ್ತು ಮುಕುಟಸ್ವರಕ್ಕೂ ಸಾಹಿತ್ಯವನ್ನು ಅಳವಡಿಸಲಾಗುವುದು.

ಸಾಮಾನ್ಯವಾಗಿ ಕಾಣಬರುವ ಈ ಅಂಶವನ್ನಲ್ಲದೆ ಮಹಾವೈದ್ಯನಾಥರ ಅವರ 72 ಮೇಳ ರಾಗಮಾಲಿಕೆಯಲ್ಲಿ ಪಲ್ಲವಿಯಲ್ಲಿ ಜತಿಗಳನ್ನು ಕಾಣಬಹುದಾಗಿದೆ. ಪ್ರತಿಯೊಂದು ರಾಗದಿಂದ ಮೊತ್ತೊಂದು ರಾಗಕ್ಕೆ ಬದಲಾವಣೆಯಾಗುವ ಸಮಯದಲ್ಲಿ ಎರಡೂ ರಾಗಗಳ ನಡುವೆ ಸೇತುವೆಯಾಗಿ ಸ್ವರದ ಎರಡನೇ ಆವರ್ತದಲ್ಲಿ ಅರ್ಧ ಆವರ್ತ ಮುಂದಿನ ರಾಗದ ಸ್ವರಗಳನ್ನು ಹೊಂದಿರುತ್ತದೆ. ಮಹಾವೈದ್ಯನಾಥ ಅಯ್ಯರ್ ಅವರ ಶಿಷ್ಯ* ಟಿ.ಎಸ್. ಸುಬೇಶ ಅಯ್ಯರ್ ಗುರುಗಳಿಂದ ಕಲಿತ ಈ ರಾಗಮಾಲಿಕೆಯನ್ನು ತಮ್ಮ ಶಿಷ್ಯರಾದ *ಮುಸುರಿ ಸುಬ್ರಹ್ಮಣ್ಯ ಅಯ್ಯರ್ (ಕ್ರಿ.ಶ 1899–1975) ಕಲಿಸಿಕೊಟ್ಟರು. ಈ ಬೃಹತ್‌ಕೃತಿಯನ್ನು ಎರಡು ಚಕ್ರಗಳ ರಾಗಗಳನ್ನು ಕಚೇರಿಗಳಲ್ಲಿ ಹಾಡಲು ಪ್ರಾರಂಭಿಸಿದರು. ವಿದುಷಿ ಎಂ.ಎಸ್. ಸುಬ್ಬಲಕ್ಷ್ಮಿಯವರು ಹಾಡಿರುವ ಧ್ವನಿಸುರುಳಿಗಳಿಂದ ಸಂಪೂರ್ಣ ಎಪ್ಪತ್ತೆರಡು ಮೇಳಗಳ ರಾಗಮಾಲಿಕೆಯು ಸಂಗೀತ ಭಂಡಾರದಲ್ಲಿ ಶಾಶ್ವತವಾಗಿ ಉಳಿಯುವಂತಾಯಿತು. ಇದರಿಂದಾಗಿ ಈಗಲೂ ಈ ಮಹಾರಾಗಮಾಲಿಕೆಯನ್ನು ಕಲಿಯಲು ಬಹಳ ಅನುಕೂಲವಾಗಿದೆ.

ಸ್ವಾತಿತಿರುನಾಳ್ ಮಹಾರಾಜರು ಕೇರಳ ಸಾಮ್ರಾಜ್ಯದ ತಿರುವಾಂಕೂರಿನ ಮಹಾರಾಜರಾಗಿದ್ದರು. ಅವರನ್ನು ಶಾಸ್ತ್ರೀಯ ಸಂಗೀತದ ಶ್ರೇಷ್ಠ ಸಂಯೋಜಕರು ಎಂದೂ ಪರಿಗಣಿಸಲಗಿದೆ. ಅವರು ಕವಿ, ವಿದ್ವಾಂಸ ಮತ್ತು ಭಾಷಾ ಶಾಸ್ತ್ರಜ್ಞರಾಗಿದ್ದರು ಮತ್ತು ಸಂಸ್ಕೃತ, ಮಲಯಾಳಂ, ಮರಾಠಿ, ಹಿಂದೂಸ್ತಾನಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಇವರು ಸಂಗೀತದ ಪ್ರತಿಭೆಯುಳ್ಳ ಉದಾರ ಪೋಷಕರು ಎಂದು

ಪರಿಗಣಿಸಲ್ಪಟ್ಟಿದ್ದಾರೆ. ಅವರ ಆಸ್ಥಾನವನ್ನು ಸಂಗೀತ ವಿದ್ವಾಂಸರುಗಳಾದ ಪರಮೇಶ್ವರ ಭಾಗವತರು, ವಡಿವೇಲು ಮುಂತಾದವರು ಅಲಂಕರಿಸಿದ್ದರು. ಮಹಾರಾಜರ ಆಸ್ಥಾನದಲ್ಲಿ ಹಿಂದೂಸ್ತಾನಿ ಸಂಗೀತ ಕರ್ನಾಟಕ ಸಂಗೀತ ಮತ್ತು ಭರತನಾಟ್ಯದ ಖ್ಯಾತ ಕಲಾವಿದರುಗಳಿದ್ದರು.

ಸಂಗೀತ ಶಾಸ್ತ್ರದಲ್ಲಿ ಉತ್ತಮ ಪಾಂಡಿತ್ಯವನ್ನು ಪಡೆದಿದ್ದ ಮಹಾರಾಜರು ವಾಗ್ಗೇಯಕಾರರಾಗಿ ವಿಧ ವಿಧವಾದ ಸಂಗೀತ ರಚನೆಗಳನ್ನು ಮಾಡಿದ್ದಾರೆ. ಸ್ವಾತಿತಿರುನಾಳರು **ಪದ್ಮನಾಭ** ಅಂಕಿತದೊಂದಿಗೆ ಸುಮಾರು 300ಕ್ಕೂ ಹೆಚ್ಚು ಕೀರ್ತನೆಗಳನ್ನು, ಪದಗಳನ್ನು ವರ್ಣಗಳನ್ನು, ತಿಲ್ಲಾನಗಳನ್ನು ಮತ್ತು ರಾಗಮಾಲಿಕೆಗಳನ್ನು ಹಾಗೂ ಧ್ರುವಪದಗಳು, ಟಪ್ಪಗಳು, ಖ್ಯಾಲ್‌ಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನವು ಮಣಿಪ್ರವಾಳ ರಚನೆಗಳು. ಇವರು ಸಂಸ್ಕೃತ, ತೆಲುಗು, ಹಿಂದಿ ಮಲಯಾಳಂ, ಕನ್ನಡ ಭಾಷೆಗಳಲ್ಲಿಯೂ ರಚಿಸಿದ್ದಾರೆ.

ಸಂಗೀತ ಕಚೇರಿ ಗಾಯನಕ್ಕೆ ಬೇಕಾದ ಎಲ್ಲಾ ಬಗೆಯ ರಚನೆಗಳನ್ನು ಇವರು ರಚಿಸಿರುವುದು ಒಂದು ವಿಶೇಷ. ವರ್ಣದಿಂದ ಆರಂಭಿಸಿ ತಿಲ್ಲಾನ ಮತ್ತು ಜಾವಳಿಯವರೆಗೂ ಇವರ ರಚನೆಗಳನ್ನೇ ಹಾಡಬಹುದಾಗಿದೆ. ಇವರು ಸಂಗೀತದ ವಿವಿಧ ಪ್ರಕಾರಗಳಾದ ಜತಿಸ್ವರ, ವರ್ಣ, ಕೃತಿ, ಕೀರ್ತನೆ, ಪದ, ಶ್ಲೋಕ ಮತ್ತು ತಿಲ್ಲಾನಗಳೊಂದಿಗೆ ಒಟ್ಟು 11 ರಾಗಮಾಲಿಕೆಗಳನ್ನು ರಚಿಸಿದ್ದಾರೆ.

ದಕ್ಷಿಣ ಭಾರತದಲ್ಲಿ ಹರಿಕಥಾ ಕಾಲಕ್ಷೇಪವು ಜನಪ್ರಿಯವಾಗುವಂತೆ ಮಾಡಿದವರಲ್ಲಿ ಸ್ವಾತಿ ತಿರುನಾಳ್ ಮಹಾರಾಜರು ಮೊದಲಿಗರು. "ಪಂಚರಾಗ"ಗಳಿಂದ ಕೂಡಿದ ಈ "ಜತಿಸ್ವರ"ವು ಮಿಶ್ರಛಾಪು ತಾಳದಲ್ಲಿ ಇವರಿಂದ ರಚಿಸಲ್ಪಟ್ಟಿದೆ. ಆಸ್ಥಾನ ವಿದ್ವಾಂಸರಾದ ಪರಮೇಶ್ವರ ಭಾಗವತರು ಈ ಜತಿಸ್ವರಕ್ಕೆ ಸಾಹಿತ್ಯವನ್ನು ಒದಗಿಸಿದರೆಂದು ತಿಳಿದು ಬಂದಿದೆ. "ಪನ್ನಗೇಂದ್ರ ಶಯನ" ಈ ರಾಗಮಾಲಿಕೆಯು ಇವರ ರಚನಾ ಕೌಶಲ್ಯಕ್ಕೆ ಉತ್ತಮ ನಿದರ್ಶನವಾಗಿದೆ. ಪ್ರತಿ ಭಾಗದಲ್ಲಿರುವ ಅಲ್ಪ ಅವಕಾಶದಲ್ಲಿಯೇ ರಾಗಗಳ ಸೌಂದರ್ಯವು ಪ್ರಕಾಶಕ್ಕೆ ಬರುವಂತೆ ಮತ್ತು ಪ್ರತಿಭಾಗದ ಚಿಟ್ಟೆಸ್ವರಗಳು ವಿಶೇಷ ಸೊಬಗನ್ನು ಕೊಡುವಂತೆ ರಚಿಸಿದ್ದಾರೆ. ಈ ರಚನೆಯು ರಾಗಮಾಲಿಕೆಯಲ್ಲಿ ಅನುಸರಿಸಬೇಕಾದ ರಾಗಗಳ ಕ್ರಮವನ್ನು ಸೂಚಿಸುತ್ತದೆ. ಪನ್ನಗೇಂದ್ರ ಶಯನ ರಾಗಮಾಲಿಕೆಯು ತಿರುವನಂತಪುರಂನಲ್ಲಿರುವ ಸ್ತುತಿಗಾಗಿ

ಮಾಡಲಾಗಿದೆ. ಇದು ಬಹಳ ಸುಂದರವಾದ ಪದವಾಗಿದೆ. ಸಂಜೆ ರಾಗವಾದ ಧೀರ–ಶಂಕರಾಭರಣದಿಂದ ಆರಂಭಗೊಂಡು ಮುಂಜಾನೆಯ ಬೆಡಗಿನ ಭೂಪಾಲದೊಂದಿಗೆ ಮುಕ್ತಾಯ ಗೊಳ್ಳುತ್ತದೆ. ಸೀತಾರಾಮ ಅಯ್ಯರ್‌ರವರ ನಿತ್ಯಕಲ್ಯಾಣಿ ರಾಗಮಾಲಿಕೆಯ ರಚನಾ ಕ್ರಮವು ಇದೇ ರೀತಿಯಲ್ಲಿ ಕಾಣಬರುತ್ತದೆ. ಪ್ರತಿ ಖಂಡದಲ್ಲಿಯೂ ರಾಗ ಮುದ್ರೆಯನ್ನೂ ಕಾಣಬಹುದು.

"ದಶರಾಗಮಾಲಿಕೆ–ಕಮಲಜಾಸ್ಯ" ಮುದ್ರೆಗಳನ್ನು ಒಳಗೊಂಡಿಲ್ಲವೆಂಬುದು ಈ ರಾಗಮಾಲಿಕೆಯಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶ. ಮಹಾರಾಜರ ಈ ರಚನೆಯಲ್ಲಿ ಶುದ್ಧ, ಸೂಚಿತ, ಮಿಶ್ರ ರೀತಿಯ ಸ್ವರಾಕ್ಷರಗಳಿವೆ. ಒಂದು ವಿಶೇಷವಾದ ಸೌಂದರ್ಯ ಗಾಂಭೀರ್ಯವಿದೆ. ಈ ದಶರಾಗಮಾಲಿಕೆಯಲ್ಲಿ ನರಸಿಂಹಾವತಾರ ಪ್ರಸ್ತುತಿ ಇರುವ ಚರಣವು ಸಾರಂಗರಾಗಕ್ಕೆ ಅಳವಟ್ಟಿರುವುದು ಗಮನಾರ್ಹ ಅಂಶ. ಏಕೆಂದರೆ ವೀರ ಮತ್ತು ರೌದ್ರರಸ ಪ್ರತಿಪಾದನೆಗಾಗಿ ಈ ರಾಗವನ್ನೇ ಬಳಸುವುದು ಕಥಕ್ಕಳಿಯಲ್ಲಿ ಸಂಪ್ರದಾಯ. ಇಲ್ಲಿಯೂ ವಾಗ್ಗೇಯಕಾರರು ಸಾರಂಗ ರಾಗವನ್ನು ಬಳಸಿದ್ದಾರೆ. ಮೋಹನ, ಬಿಲಹರಿ, ಧನ್ಯಾಸಿ, ಸಾರಂಗ, ಮಧ್ಯಮಾವತಿ, ಆಠಾಣ, ನಾಟಕುರಂಜಿ, ಆನಂದ ಭೈರವಿ ಮತ್ತು ಸೌರಾಷ್ಟ್ರ ಅಳವಡಿಸಲಾಗಿದೆ.

"ಭಾವಯಾಮಿ ರಘುರಾಮಂ"– ರಾಮಾಯಣ ರಾಗಮಾಲಿಕೆ ಇದು ಆತ್ಮವನ್ನು ಕಲಕುವ ಮಹಾಕಾವ್ಯವಾದ ರಾಮಾಯಣದ ಸಂಪೂರ್ಣ ಕಥೆಯನ್ನು ಸಾರುವ ರಾಗಮಾಲಿಕೆಯಾಗಿದೆ. ಸ್ವಾತಿತಿರುನಾಳ್ ಮಹಾರಾಜರ ರಚನೆ ಪ್ರಸ್ತುತ ರಚನೆಯಲ್ಲಿ ಶ್ರೀಮದ್ ರಾಮಾಯಣದ ಬಾಲಕಾಂಡದಿಂದ ಮೊದಲ್ಗೊಂಡು ಇಡೀ ರಾಮಾಯಣದ ವಿಷಯ ಅಡಕವಾಗಿರುವುದರಿಂದ "ರಾಮಾಯಣ ರಾಗಮಾಲಿಕೆ" ಎಂದೇ ಕರೆಯಲ್ಪಟ್ಟಿದೆ. ಪರಿಶುದ್ಧವಾದ ಸಂಸ್ಕೃತದಲ್ಲಿರುವ ಈ ಸುಂದರವಾದ ಗೀತೆಯನ್ನು ಮಹಾರಾಜ ಸ್ವಾತಿ–ತಿರುನಾಳ್‌ರವರು ಒಂದೇ ರಾಗದಲ್ಲಿ ಅಂದರೆ ಸಾವೇರಿ ರಾಗದಲ್ಲಿ ರಚಿಸಿದ್ದರೆನ್ನಲಾಗಿದೆ. ರೂಪಕ ತಾಳದಲ್ಲಿ ರಚಿತವಾಗಿದ್ದ ಈ ರಾಗಮಾಲಿಕೆಯು ಸುಮಾರು ನೂರು ವರ್ಷಗಳ

ನಂತರ, ಮೂಲರಾಗ ಸಾವೇರಿಯಲ್ಲಿ ಪಲ್ಲವಿ ಮತ್ತು ಅನುಪಲ್ಲವಿಯನ್ನು ಹಾಗೂ ಚರಣಗಳು ನಾಟಕುರಂಜಿ, ಧನ್ಯಾಸಿ, ಮೋಹನ, ಮುಖಾರಿ ಮತ್ತು ಮಧ್ಯಮಾವತಿ ರಾಗಗಳಲ್ಲಿ ಮಹಾನ್

ಸಂಗೀತ ವಿದ್ವಾನ್ ಸೆಮ್ಮಂಗುಡಿ ಶ್ರೀನಿವಾಸಅಯ್ಯರ್ ಅವರಿಂದ ಚಿಟ್ಟೆಸ್ವರಗಳೊಂದಿಗೆ ರಾಗಮಾಲಿಕೆಯಾಗಿ ಪರಿವರ್ತಿತವಾಗಿ ಎಂ.ಎಸ್.ಸುಬ್ಬುಲಕ್ಷ್ಮಿಯವರಿಂದ ಜನಪ್ರಿಯವಾಗಿದೆ. ಪ್ರತಿಯೊಂದು ಚರಣದ ಖಂಡವು ವಾಲ್ಮೀಕಿರಾಮಾಯಣದ ಆವೃತ್ತಿಗೆ ಅನುಗುಣವಾಗಿದೆ. ಲೇಖಕರು 24,000 ಶ್ಲೋಕಗಳ ವಸ್ತುವನ್ನು ಕೇವಲ ಆರು ಚರಣಗಳಲ್ಲಿ ಮೂಡುವಂತೆ ರೂಪಿಸಿದ್ದಾರೆ.

"ಕಲ್ಯಾಣಿ ಕಲಯತಿ" – ರೂಪಕ ತಾಳದ ರಾಗಮಾಲಿಕೆಯಲ್ಲಿ ಕಲ್ಯಾಣಿ, ಮೋಹನ, ಸಾರಂಗ ಮತ್ತು ಧೀರಶಂಕರಾಭರಣ ರಾಗಗಳಲ್ಲಿ ಸಂಯೋಜನೆಗೊಂಡಿದೆ. ಕಲ್ಯಾಣಿ ಕಲೆಯತಿ ಎಂಬ ಸಾಹಿತ್ಯದೊಂದಿಗೆ ಈ ರಾಗಮಾಲಿಕೆ ಪ್ರಾರಂಭವಾಗಿ ಪ್ರತಿಖಂಡದಲ್ಲಿಯೂ ಚಿಟ್ಟೆಸ್ವರವನ್ನು ಹೊಂದಿದ್ದು ಮಕುಟಸ್ವರ ಕಲ್ಯಾಣಿಯೊಂದಿಗೆ ಪಲ್ಲವಿಯನ್ನು ಸೇರಿಕೊಳ್ಳುತ್ತದೆ.

"ಸುಮಸಾಯಕ– ವರ್ಣ" ರೂಪಕ ಈ ವರ್ಣವು ಪಟ್ಣಂಸುಬ್ರಹ್ಮಣ್ಯ ಅಯ್ಯರ್ ಅವರ ನವರಾಗಮಾಲಿಕಾ ವರ್ಣದ ರಚನೆಗಿಂತಲೂ ಭಿನ್ನವಾಗಿ ಕಾಣಬರುತ್ತದೆ. ಈ ವರ್ಣದ ಕೊನೆಯ ಎತ್ತುಗಡೆ ಸ್ವರದಲ್ಲಿ ಎರಡೆರಡು ಆವರ್ತನಗಳು ಕಲ್ಯಾಣಿ, ಕಮಾಚ್, ವಸಂತ, ಮತ್ತು ಮೋಹನ ರಾಗಗಳಲ್ಲಿ ಸ್ವರಗಳನ್ನು ಹೊಂದಿವೆ. ಉಳಿದೆಲ್ಲ ವರ್ಣದ ಭಾಗಗಳು ಕಾಪಿ ರಾಗದಲ್ಲಿ ಸಂಯೋಜಿಸಲ್ಪಟ್ಟಿದೆ.

ಮೈಸೂರು ವಾಸುದೇವಾಚಾರ್ಯರು (1865–1961)

ಕನ್ನಡ ನಾಡಿನ ದಕ್ಷಿಣ ಭಾರತದ ಸಂಗೀತ ಪ್ರಪಂಚದಲ್ಲಿ ಶ್ರೀ ವಾಸುದೇವಾಚಾರ್ಯರು ಅಗ್ರಗಣ್ಯರೆಂದು ಪ್ರಸಿದ್ಧರಾಗಿದ್ದಾರೆ. ಇವರು ಸುಬ್ಬರಾಯರು, ವೀಣೆ ಶೇಷಣ್ಣನವರು ಮತ್ತು ವೀಣಾ ಪದ್ಮನಾಭಯ್ಯನವರಲ್ಲಿ ಸಂಗೀತಾಭ್ಯಾಸವನ್ನು ಮಾಡಿದ್ದರು. ನಂತರ ತಿರುವಾರೂರಿನಿಂದ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದರು.

ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಆಸ್ಥಾನ ವಿದ್ವಾಂಸರೂ ಆಗಿದ್ದರು. ಸುಮಾರು 200 ಕ್ಕಿಂತ ಹೆಚ್ಚಾಗಿ ಕಾಣಬರುವ ತೆಲುಗು ಮತ್ತು ಸಂಸ್ಕೃತದಲ್ಲಿವೆ.

ಸ್ವರಜತಿ, ವರ್ಣ, ಕೃತಿ, ರಾಗಮಾಲಿಕೆಗಳನ್ನು ರಚಿಸಿದ್ದಾರೆ. ಇವರ ರಚನೆಗಳನ್ನು **"ದೇವ ಕೀರ್ತನ ಮಂಜರಿ"** ಎಂಬ ಗ್ರಂಥದಲ್ಲಿ ಪ್ರಕಟಿಸಿದರು. **"ಸಂಗೀತ ಭಾವಜ್ಞ ಶಿಖಾಮಣಿ", ಸರಸ ಗಾನ ಶಿರೋಮಣಿ, "ಸಂಗೀತಶಾಸ್ತ್ರ ರತ್ನ"** ಮುಂತಾದ ಬಿರುದಾವಳಿಗಳಿಂದ ಪ್ರಖ್ಯಾತಿ ಪಡೆದ ವಾಗ್ಗೇಯಕಾರರೆಂದರೆ **ವಾಸುದೇವಾಚಾರ್ಯ**ರೆನ್ನಬಹುದು.

ಇವರು 10–12 ರಾಗಮಾಲಿಕೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸಂಗೀತ ತ್ರಿಮೂರ್ತಿಗಳನ್ನು ಕುರಿತಾಗಿಯೂ ರಚಿಸಿದ ರಾಗಮಾಲಿಕೆಗಳೂ ಸೇರಲ್ಪಟ್ಟಿವೆ. **"ಶ್ರೀ ಮುತ್ತುಸ್ವಾಮಿ ದೀಕ್ಷಿತ ಚರಿತಂ":** ಗಮನಶ್ರಮ, ಆರಭಿ, ಸಾರಂಗ, ನಾಗಸ್ವರಾವಳಿ, ಕೇದಾರಗೌಳ ಮತ್ತು ಮಧ್ಯಮಾವತಿ ಚತುರಶ್ರ ತ್ರಿಪುಟ ತಾಳದಲ್ಲಿ ನಿಬದ್ಧವಾಗಿದೆ.

ಈ ರಚನೆಯು **"ಅಂಕಿತ ಮುದ್ರೆ"**ಯನ್ನು ಮಾತ್ರ ಒಳಗೊಂಡು ಪ್ರತಿ ಖಂಡಗಳಿಗೂ ರಾಗವನ್ನು ಬದಲಾಯಿಸುತ್ತ ಚಿಟ್ಟೆ ಸ್ವರಗಳನ್ನು ಹೊಂದಿವೆ.

"ಶ್ರೀತ್ಯಾಗರಾಜ ಚರಿತಂ": ಶಂಕರಾಭರಣ, ಭೈರವಿ, ಸಿಂಹೇಂದ್ರ ಮಧ್ಯಮ, ಕಮಾಚ್ ಮತ್ತು ಮೋಹನ ಅಂಕಿತ ಮುದ್ರೆಯನ್ನು ಚಿಟ್ಟೆ ಸ್ವರವನ್ನು ಹೊಂದಿದೆ. ಈ ರಾಗಮಾಲಿಕೆಯನ್ನು ವಿದ್ವಾನ್ .ಎಮ್.ಡಿ ರಾಮನಾಥನ್‌ರವರು ಹಾಡಿರುವ ಧ್ವನಿಮುದ್ರಣದಲ್ಲಿ ಕೇಳಬಹುದಾಗಿದೆ. ಇವರು ರಚಿಸಿರುವ "ಶ್ರೀ ಜಯಚಾಮರಾಜ ಪಂಚರತ್ನ" – ಮಿಶ್ರಮತ್ಯ ತಾಳದಲ್ಲಿ ನಿಬದ್ಧವಾಗಿದೆ (ಕಮಾಚ್, ಬೇಹಾಗ್, ಹಿಂದೋಳ ಸಾರಂಗ ಮತ್ತು ಕಾಪಿ) ಮತ್ತು **"ರಾಜಾಶೀರ್ವಾದ"** ರಾಗಮಾಲಿಕೆಯು 11 ರಾಗಗಳನ್ನು ಹೊಂದಿದ್ದು ಪ್ರತಿಖಂಡದಲ್ಲಿಯೂ ರಾಗ ಬದಲಾವಣೆ ಮತ್ತು ಚಿಟ್ಟೆಸ್ವರಗಳನ್ನು ಕಾಣಬಹುದಾಗಿದೆ. ವಿಶೇಷವಾಗಿ ಗುರುತಿಸಬೇಕಾದ ಅಂಶವೆಂದರೆ, ಈ ರಾಗಮಾಲಿಕೆಯಲ್ಲಿ ರಾಗಮುದ್ರೆಯಾಗಲೀ, ಅಂಕಿತ

ಮುದ್ರೆಯಾಗಲಿ ಕಾಣಬರುವುದಿಲ್ಲ. ಪೋಷಕ ಮುದ್ರೆ **"ಜಯಚಾಮರಾಜ"** ಎಂಬುದನ್ನು ಈ ಎರಡು ರಾಗಮಾಲಿಕೆಗಳಲ್ಲಿ ಗುರುತಿಸಬಹುದಾಗಿದೆ.

"ಯದುಕುಲ ವಾರಿಧಿ– ರಜತೋತ್ಸವ ರಾಗಮಾಲಿಕೆ"ಯಾಗಿದೆ. ಅಪರೂಪದ ರಾಗ **"ಪುಷ್ಪಲತ"**, ಕೇದಾರಗೌಳ, ಅಠಾಣ, ಕಲ್ಯಾಣಿ, ಕಾಂಬೋದಿ ರಾಗಗಳಲ್ಲಿ ಸಂಯೋಜನೆಗೊಂಡಿದೆ. ಈ ರಾಗಮಾಲಿಕೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಪ್ರಶಂಶಿಸಲಾಗಿದೆ. ಈ ರಚನೆಯಲ್ಲಿ ಆರು ಖಂಡಿಕೆಗಳಿದ್ದರೂ ಐದು ಖಂಡಿಕೆಗಳಿಗೆ ಮಾತ್ರ ಧಾತು ಸಂಯೋಜನೆ ಮಾಡಲಾಗಿದೆ. ಇವುಗಳಲ್ಲದೆ ದಧಿವಾಮನ ಸ್ತೋತ್ರ, ಶ್ರೀ ನರಸಿಂಹ ಸ್ತೋತ್ರ, ಈ ಮಾತಂಗಿ ಸ್ತೋತ್ರಗಳಿಗೂ ರಾಗಮಾಲಿಕೆಗಳಂತೆ ಇವರು ಸಂಯೋಜಿಸಿರುವುದನ್ನು ಕಾಣಬಹುದು.

ಗಾಯಕ ಶಿಖಾಮಣಿ ಸಂಗೀತ ಕಲಾನಿಧಿ ಹರಿಕೇಶನಲ್ಲೂರ್ ಮುತ್ತಯ್ಯ ಭಾಗವರು

(ಕ್ರಿ.ಶ 1877–1945)

ತ್ಯಾಗರಾಜೋತ್ತಮರ ಕಾಲದಲ್ಲಿ ಕರ್ನಾಟಕ ಸಂಗೀತವನ್ನು ಸಂಪತ್ಭರಿತವಾಗಿಸಿದ ವಿದ್ವಾಂಸರಲ್ಲಿ ಮುತ್ತಯ್ಯ ಭಾಗವತರದ್ದು ವಿಶಿಷ್ಟ ಸ್ಥಾನ. ವೇದಾದಿಗಳ ಉತ್ಕೃಷ್ಟ

ಹಿನ್ನೆಲೆಯಿಂದಾಗಿ ಭಾಗವತರು ಬಹುಮುಖ ಪ್ರತಿಭಾವಂತರು ಹಾಗೂ ಗಾಯಕರಾಗಿ ಕೀರ್ತನಕಾರರಾಗಿ ವಾಗ್ಗೇಯಕಾರರಾದ ಭಾಗವತರು ಸ್ವಾತಿತಿರುನಾಳ್ ಅಕಾಡೆಮಿ ಆಫ್ ಮ್ಯೂಸಿಕ್ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದವರು.

ಮುತ್ತಯ್ಯ ಭಾಗವತರು **"ಹರಿಕೇಶ"** ಎಂಬ ಅಂಕಿತದಲ್ಲಿ **ಸಂಗೀತ ಕಲ್ಪದ್ರುಮ** ಗ್ರಂಥವನ್ನೂ, ಸುಮಾರು 400 ರಚನೆಗಳನ್ನು ರಚಿಸಿದ್ದಾರೆ. ಇದರಲ್ಲಿ ತಾನವರ್ಣಗಳು, ಪದವರ್ಣಗಳು, ದರು ವರ್ಣಗಳು, ರಾಗಮಾಲಿಕೆಗಳು ಅಧಿಕ ಸಂಖ್ಯೆಯ ಕೃತಿಗಳಿವೆ. ಸಂಸ್ಕೃತ, ತೆಲುಗು, ಕನ್ನಡ ಹಾಗೂ ತಮಿಳು ಭಾಷೆಯನ್ನು ಇವರ ರಚನೆಗಳಲ್ಲಿ ಬಳಸಲಾಗಿದೆ.

ಮುತ್ತಯ್ಯ ಭಾಗವತರು ಚಾಮುಂಡಾಂಬ ಅಷ್ಟೋತ್ತರ ಕೃತಿಗಳನ್ನು ಮತ್ತು ಶಿವ ಅಷ್ಟೋತ್ತರ ಶತಕೃತಿಗಳನ್ನು ರಚಿಸಿದ್ದಾರೆ. ಚಾಮುಂಡಾಂಬ ಅಷ್ಟೋತ್ತರ ಗುಚ್ಛದಲ್ಲಿನ ಕೃತಿಗಳ

ಸಾಹಿತ್ಯವನ್ನು ಕನ್ನಡ ಭಾಷೆಯಲ್ಲಿ ದೇವೋತನ ಜೋಯಿಸರು ಸೃಷ್ಟಿಸಿದರೆಂದು, ಅದಕ್ಕೆ ಸಂಗೀತ ಸಂಯೋಜನೆ ಮುತ್ತಯ್ಯ ಭಾಗವತರದೆಂದು ಹೇಳುತ್ತಾರೆ. ಭಾಗವತರು ಜನಕರಾಗ, ಜನ್ಯರಾಗ, ಸ್ವಸೃಷ್ಟಿಯ ರಾಗ, ಪುನರುದ್ಧರಿತ ರಾಗಗಳೆಲ್ಲವನ್ನೂ ಬಳಸಿದ್ದಾರೆ. ಇವರ ರಚನೆಗಳಲ್ಲಿ ಹರಿಕೇಶ ಎಂಬ ವಾಗ್ಗೇಯ ಮುದ್ರೆಯೇ ಅಲ್ಲದೆ ಅಪರೂಪವಾಗಿ ರಾಗ ಮುದ್ರೆ, ಪೋಷಕ ಮುದ್ರೆಗಳನ್ನೂ ಬಳಸಿದ್ದಾರೆ. ಸಂಗತಿ, ಸ್ವರಾಕ್ಷರ, ಚಿಟ್ಟೆಸ್ವರ, ಮುಕುಟಸ್ವರ, ಮಧ್ಯಮ ಕಾಲ ಸಾಹಿತ್ಯ, ಯತಿ ಮಾದರಿಗಳು ಲಕ್ಷಣಗಳು ಇವರ ರಚನೆಗಳಲ್ಲಿ ಕಾಣಬರುತ್ತವೆ.

ಬಹುಮುಖ ಪ್ರತಿಭೆಯ ಡಾ.ಎಲ್.ಮುತ್ತಯ್ಯ ಭಾಗವತರು ಸಂಗೀತದಲ್ಲಿ ಸಂಶೋಧನೆ ನಡೆಸಿ **ಡಾಕ್ಟರೇಟ್** ಪದವಿಯನ್ನು ಪಡೆದ ಅಗ್ರಮಾನ್ಯರು.

"ಸ್ವರ್ಣಾಕರ್ಷಣ – ರಾಗಮಾಲಿಕೆ"

ಆದಿತಾಳ, ಶ್ರೀಚಕ್ರದ ನವಾವರಣಗಳ ಕುರಿತಾದ ರಾಗಮಾಲಿಕೆ ಸ್ವರ್ಣಾಕರ್ಷಣ ರಾಗಮಾಲಿಕೆಯು ಆದಿತಾಳದಲ್ಲಿ ಸಂಯೋಜನೆಗೊಂಡಿದೆ. ಇದು ಶ್ರೀಚಕ್ರದ ನವಾವರಣವಗಳನ್ನು ವೈಭವೀಕರಿಸುವ ಸಂಯೋಜನೆಯಾಗಿದೆ, ಇದು ಮುತ್ತುಸ್ವಾಮಿ ದೀಕ್ಷಿತರ ಕಮಲಾಂಬಾ ನವಾವರಣ ಕೀರ್ತನೆಗಳಿಗೆ ಅನುಗುಣವಾಗಿದೆ. ದೀಕ್ಷಿತರಂತೆಯೇ ಭಾಗವತರು ಈ ರಾಗಮಾಲಿಕೆಯನ್ನು ಭಗವಾನ್ ಗಣಪತಿಗೆ ನಮಸ್ಕರಿಸುತ್ತಾ ಪ್ರಾರಂಭಿಸುತ್ತಾರೆ. ಅವರ ಕ್ರಮವು ಒಂಬತ್ತು ಚರಣಗಳು ವಿಭಾಗಗಳನ್ನೂ ಅನುಸರಿಸುತ್ತವೆ. ಪ್ರತಿಯೊಂದು ಶ್ರೀಚಕ್ರದ ಒಂದು ಆವಾರಣಕ್ಕೆ ಮೀಸಲಾಗಿವೆ.

ಸಂಯೋಜನಕರು ಪ್ರತಿಚರಣಕ್ಕೂ ಕಮಲಾಂಬಾ ನವವಾರಣ ಸರಣಿಯಂತೆ ವಿಭಿನ್ನ ವಿಭಕ್ತಿಗಳನ್ನು (ವಿಭಕ್ತಿಗಳನ್ನು) ಬಳಸಿದ್ದಾರೆ.

ಹನ್ನೊಂದನೆಯ ಮತ್ತು ಸಮಾಪ್ತಿಯ ಭಾಗವಾದ ಮಂಗಳಚರಣವು ಮಂಗಳಕರವಾದ ಶ್ರೀರಾಗವನ್ನು ಹೊಂದಿದೆ. ಈ ರಾಗಮಾಲಿಕೆಯ ಮಹತ್ವ ಮತ್ತು ಅರ್ಥವನ್ನು ಅರ್ಥಮಾಡಿಕೊಳ್ಳಲು ಶ್ರೀಸಾಮಾನ್ಯರು ಶ್ರೀಚಕ್ರ ಮತ್ತು ಅದರ ಜ್ಯಾಮಿತೀಯ

ವೈಶಿಷ್ಟ್ಯಗಳ ಅವಲೋಕನವನ್ನು ಹೊಂದಿರಬೇಕು. ಈ ರಾಗಮಾಲಿಕೆಯ ಪ್ರತಿ ಹನ್ನೊಂದು ಚರಣಗಳಲ್ಲಿ ಬುದ್ಧಿವಂತಿಕೆಯಿಂದ ಅಂತರ್ನಿಮಿತ ರಾಗಮುದ್ರೆಯನ್ನು ಅಳವಡಿಸಲಾಗಿದೆ. ಅದರ ಪವಿತ್ರತೆ, ಪರಿಕಲ್ಪನೆಯಲ್ಲಿನ ಆಳ ಮತ್ತು ಆಳವಾದ ಶ್ರೀವಿದ್ಯೆಯ ತತ್ತ್ವಶಾಸ್ತ್ರದ ಕಾರಣದಿಂದಾಗಿ ಮತ್ತು ಈ ರಾಗಮಾಲಿಕೆಯನ್ನು ಸಾರ್ವಜನಿಕ ಸಂಗೀತ ಕಚೇರಿಗಳಲ್ಲಿ ಎಂದಿಗೂ ಕೇಳಲಾಗುವುದಿಲ್ಲ.

“ಮಂಗಳದಾಯಿನಿ – ಪಂಚರಾಗಮಾಲಿಕೆ”

ಮಂಗಳದಾಯಿನಿ ರಾಗಮಾಲಿಕೆಯು ಪ್ರಸ್ತುತ ಸಂಗ್ರಹದಲ್ಲಿರುವ **ಕನ್ನಡ ಭಾಷೆಯ ಏಕೈಕ ರಾಗಮಾಲಿಕೆ”**. ಕಲ್ಯಾಣಿ, ಭೈರವಿ, ಕಾಂಬೋಜಿ, ಆನಂದಭೈರವಿ, ಶ್ರೀರಾಗಗಳಲ್ಲಿ ಸಂಯೋಜಿಸಲ್ಪಟ್ಟಿದೆ. ಇದು ದೇವಿಸ್ತುತಿಯಾಗಿದೆ.

ಪ್ರಸ್ತುತ ಕೃತಿಯಲ್ಲಿ ಹೆಸರಿಸಲ್ಪಟ್ಟಿರುವ ಕಂಠೀರವ ನರಸಿಂಹರು, *ಯದು ವಂಶದ ದೊರೆಗಳಾದ ಜಯಚಾಮರಾಜೇಂದ್ರ ಒಡೆಯರು ಮತ್ತು ಅವರ ಪತ್ನಿ ಸತ್ಯ ಪ್ರೇಮ ಕುಮಾರಿ ಅವರೆಲ್ಲರನ್ನೂ ಅನವರತ ಪೊರೆಯುವಂತೆ ಮಾತೇ ಶ್ರೀ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸಿದ್ದಲ್ಲದೆ ಆನಂದವಾಗಿ ರಾಜ್ಯಭಾರ ನಡೆಸಲು ಅನುಗ್ರಹಿಸುವಂತೆ ಭಾಗವತರು ಕೋರಿದ್ದಾರೆ.

ಈ ರಚನೆಯಲ್ಲಿ *ಪೋಷಕ ಮುದ್ರೆ, ರಾಗ ಮುದ್ರೆ, ವಾಗ್ಗೇಯಕಾರ ಮುದ್ರೆಗಳು ಸಾಹಿತ್ಯಾರ್ಥಕಕ್ಕೆ ಲೋಪವಾಗದ ರೀತಿಯಲ್ಲಿ ಅಳವಟ್ಟಿರುವುದು ಗಮನಾರ್ಹ.

“ಓಂಕಾರೇಶ್ವರ ಸಪ್ತರಾಗ ಮಾಲಿಕೆ” ಆದಿತಾಳ – ಮಹಾಶಿವನನ್ನು ಪ್ರಾರ್ಥಿಸುವ ವಿಶೇಷ ರಾಗಮಾಲಿಕೆಯಾಗಿದೆ. ಯಮುನಾಕಲ್ಯಾಣಿ, ಶ್ರೀ ರಾಗ, ವಸಂತ ಭೈರವಿ, ಪಂಚಮ, ಮೇಘರಂಜಿನಿ, ನಟನಾರಾಯಣಿ ರಾಗಗಳೊಂದಿಗೆ ಆದಿತಾಳದಲ್ಲಿ ನಿಬದ್ಧವಾಗಿದೆ.

ಶ್ರೀಚಕ್ರ ರಾಜ ಸಿಂಹಾಸನೇಶ್ವರಿ – ಆದಿತಾಳ :

ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಸಂಗೀತ ಕಲಾರಸಿಕರಿಂದ ವಿದ್ವಾಂಸರುಗಳಿಂದ ಆಸ್ವಾದಿಸಲ್ಪಡುತ್ತಿರುವ ರಾಗಮಾಲಿಕೆ ಎನ್ನಬಹುದು. **“ಶ್ರೀಚಕ್ರ ರಾಜ ಸಿಂಹಾಸನೇಶ್ವರೀ”,** ದೇವಿಯು ತನ್ನ ಕೋರಿಕೆಯನ್ನು ಪುರಸ್ಕರಿಸಿದ್ದಕ್ಕಾಗಿ ಸಂಯೋಜಕರು ಪಲ್ಲವಿ ಮತ್ತು ಅನುಪಲ್ಲವಿಯಲ್ಲಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಾರೆ ಮತ್ತು ನಂತರದ ಮೂರು ಚರಣಗಳಲ್ಲಿ ಅದೇ ಕಾರಣಗಳನ್ನು ವಿವರಿಸುತ್ತಾರೆ ಮತ್ತು ಮೊದಲ ಚರಣವು ವಿನಂತಿಯ ರೂಪವನ್ನು ತೆಗೆದುಕೊಳ್ಳುತ್ತದೆ ಮತ್ತು ಮುಂದಿನ ಎರಡು ಕೊಡುಗೆಗಳಲ್ಲಿ ಅವರಿಗೆ ಧನ್ಯವಾದಗಳು ಅರ್ಪಿಸುತ್ತಾರೆ.

ಶ್ರೀಚಕ್ರರಾಜ ಸಿಂಹಾಸನೇಶ್ವರಿ ಮಾತೆ ದೇವಿಯನ್ನು ಸ್ತುತಿಸುವ ಈ ರಾಗಮಾಲಿಕೆಯು ಅಗಸ್ತ್ಯರಿಂದ ರಚಿಸಲ್ಪಟ್ಟಿದೆ. ಸಾಹಿತ್ಯದ ಪದಗಳು ಸಂಸ್ಕೃತ ಮತ್ತು ತಮಿಳಿನಲ್ಲಿವೆ. ಅಗಸ್ತ್ಯರು ಹಯಗ್ರೀವನ ರೂಪದಲ್ಲಿ ಕಾಣಿಸಿಕೊಂಡ ವಿಷ್ಣುವಿನಿಂದ ಶ್ರೀವಿದ್ಯಾ ಸಂಪ್ರದಾಯಕ್ಕೆ (ದೇವಿ ಆರಾಧನೆ) ದೀಕ್ಷೆ ನೀಡಿದರೆಂಬುದು ಬಹುಶಃ ಕಲ್ಪಿತ ಕಥೆಯಾಗಿದೆ. ಝಂಝೂಟಿ ಪುನ್ನಾಗವರಾಳಿ, ನಾದನಾಮಕ್ರಿಯ ಮತ್ತು ಸಿಂಧುಭೈರವಿ ರಾಗಗಳಲ್ಲಿ ಈ ಹಾಡನ್ನು ರಚಿಸಲಾಗಿದೆ. ಅತಿ ಸರಳ ಸುಂದರ ರಾಗಮಾಲಿಕೆಯು ಇದಾಗಿದೆ. ಈ ಹಾಡನ್ನು ಮಹಾರಾಜಪುರಸಂತಾನಂ ರವರು ಜನಪ್ರಿಯಗೊಳಿಸಿದರು ಮತ್ತು ಈಗಲೂ ಸಂಗೀತ ವೇದಿಕೆಯಲ್ಲಿ ಕಂಡುಬರುವಂತಹ ವಿಶೇಷ ರಾಗಮಾಲಿಕೆಯಾಗಿದೆ.

ಸಾರಂಗಪಾಣಿ ವಿರಚಿತ – **“ಕನ್ನತಲ್ಲಿ ಕರುಣಿಂಚಿ ಬ್ರೋವುಮಿಕ”** – ಎಂಬ ಸಾಹಿತ್ಯದಿಂದ ಆರಂಭಗೊಳ್ಳುವ ಈ ರಾಗಮಾಲಿಕೆಯಲ್ಲಿ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳಿವೆ. ಪ್ರತಿ

ಚರಣದಲ್ಲಿ ನಾಲ್ಕು ಪಾದಗಳಿದ್ದು ಪ್ರತಿಯೊಂದು ಪಾದವು ಬೇರೆ ಬೇರೆ ರಾಗದಲ್ಲಿದ್ದು ಸಾಹಿತ್ಯದಲ್ಲಿ ರಾಗ ಮುದ್ರೆಯನ್ನೊಳಗೊಂಡಿದೆ. ಈ ರಚನೆಯ ಧಾತು ಮತ್ತು ಮಾತು ಒಬ್ಬನೇ ವಾಕ್ಯಕಾರನಿಂದ ರಚಿಸಲ್ಪಟ್ಟ ರಾಗಮಾಲಿಕೆಯಾಗಿದ್ದು ಅತ್ಯುತ್ತಮ ಕೀರ್ತನೆಗೆ ನಿದರ್ಶನವಾಗಿದೆ.

ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಸಂಗೀತ ಕಲಾರಸಿಕರಿಂದ ವಿದ್ವಾಂಸರುಗಳಿಂದ ಆಸ್ವಾದಿಸಲ್ಪಡುತ್ತಿರುವ ರಾಗಮಾಲಿಕೆ ಇದಾಗಿದೆ ಎನ್ನಬಹುದು.

ವೈಕುಂಠಪುರಂ ಎಸ್.ಕೃಷ್ಣಶಾಸ್ತ್ರಿ (1881–1937) ಅವರು **ಪಾಲಯ ಕರುಣಾಸಾಗರ ರಾಗಮಾಲಿಕೆಯ** ಸಾಹಿತ್ಯಕರ್ತೃ,ವಿದ್ವಾನ್ ಟಿ.ಕೆ. ರಾಮಮೂರ್ತಿರವರು ಧಾತು ಸಂಯೋಜಕರು. ಕೃಷ್ಣಶಾಸ್ತ್ರಿಗಳು ಶ್ರೀ ಶೃಂಗೇರಿ ಮಹಾಸಂಸ್ಥಾನದ ಶ್ರೀ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳವರ ಭಕ್ತರು ಆಗಿದ್ದವರು. ಪ್ರಸ್ತುತ ಈ ರಚನೆಯಲ್ಲಿ ಶ್ರೀ ರಾಮನೆಸಗಿದ ಮಹತ್ಕಾರ್ಯಗಳನ್ನು ಸ್ಮರಿಸಲಾಗಿದೆ.

ಈ ರಾಗಮಾಲಿಕೆಯು ಸಾಮಾನ್ಯ ಕೃತಿ ರೂಪದಂತೆಯೇ ಪಲ್ಲವಿ ಅನುಪಲ್ಲವಿ ಚರಣಗಳನ್ನು ಹೊಂದಿದ್ದು, ಮುಂದಿನ ಚರಣಗಳು ವಿವಿಧ ರಾಗಗಳಿಗೆ ಒಳಪಟ್ಟು ರಾಗಮಾಲಿಕೆಯಾಗಿದೆ. ಈ ರಾಗಮಾಲಿಕೆಯು ಪಲ್ಲವಿ ಅನುಪಲ್ಲವಿ, ಚಿಟ್ಟೆಸ್ವರ ಮತ್ತು ಒಂದನೇ ಚರಣ ಹಾಗೂ ಚಿಟ್ಟೆಸ್ವರ ಪೂರ್ವಿಕಲ್ಯಾಣಿ ರಾಗಕ್ಕೆ ಅಳವಟ್ಟು ಕ್ರಮವಾಗಿ ಅಠಾಣ, ಮಲಯಮಾರುತ, ವರಾಳಿ, ಶಹನಾ, ಆಂದೋಲಿಕ ಮತ್ತು ಮಣಿರಂಗು ರಾಗಗಳಲ್ಲಿ, ಚಿಟ್ಟೆಸ್ವರವನ್ನು ಹೊಂದಿದ್ದು ಮುಕ್ತಾಯವನ್ನೂ ಒದಗಿಸಿ ಪಲ್ಲವಿಯ ರಾಗದ ಸ್ವರಗಳೊಂದಿಗೆ ಪಲ್ಲವಿಯ ಸಾಹಿತ್ಯಕ್ಕೆ ಸೇರಿಕೊಳ್ಳುತ್ತದೆ. ಮತ್ತು ಕೊನೆಯ ಚಿಟ್ಟೆಸ್ವರವು ಎಲ್ಲಾ ರಾಗಗಳ ಅಂಶಗಳನ್ನು ವಿಲೋಮ ಕ್ರಮದಲ್ಲಿ ಹೊಂದಿದ್ದು ಮೊದಲನೆಯ ರಾಗದಲ್ಲಿ ಮುಗಿಯುತ್ತದೆ. ಈ ರಾಗಮಾಲಿಕೆಯು ಸಪ್ತರಾಗಮಾಲಿಕೆಯೂ ಆಗಿದೆ.

“ರಂಜನಿ ರಾಗಮಾಲಿಕೆ”

ತಂಜಾವೂರ್ ಶಂಕರಅಯ್ಯರ್ ಇವರು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧ ಗಾಯಕರು ಮತ್ತು ಸಂಯೋಜಕರು ಆಗಿದ್ದರು. *85 ವರ್ಷಗಳ ಕಾಲ ಪ್ರದರ್ಶಕರಾಗಿ ಸಂಯೋಜಕರಾಗಿ ಗುರು ತಂಜಾವೂರ್ ಶಂಕರ್‌ಅಯ್ಯರ್ ತಮ್ಮನ್ನು ಕಲೆಗಾಗಿ ಮುಡಿಪಾಗಿಟ್ಟಿದ್ದರು. ಪ್ರಸಿದ್ಧ ಗಾಯಕ ವಿದ್ವಾನ್ ನೈವೇಲಿ ಸಂತಾನಗೋಪಾಲನ್‌ರವರು ಇವರನ್ನು “ಸಂಗೀತಗಾರರ ಸಂಗೀತಗಾರ” ಎಂದು ಶ್ಲಾಘಿಸುತ್ತಾರೆ. 20ನೇ ಶತಮಾನದ ಅಗ್ರಗಣ್ಯ ಸಂಯೋಜಕರಾದ ಸುಬ್ರಮಣ್ಯ ಭಾರತಿ ಮತ್ತು ಪಾಪನಾಶಂಶಿವನ ಅವರ ಅಗ್ರಗಣ್ಯ ಸಂಯೋಜಕರಾದ ಸುಬ್ರಮಣ್ಯ ಭಾರತಿ ಮತ್ತು ಪಾಪನಾಶಂಶಿವನ ಅವರ ಒಡಂಬಡಿಕೆಗೆ ಸೇರಿದವರು. ಸಂಶೋಧನೆ ಆಧಾರಿತ ಸಂಗೀತ ಶಂಕರ್‌ಅಯ್ಯರ್ ಅವರದು. ರೇವತಿ ರಾಗದ **ಮಹಾದೇವ ಶಿವ ಶಂಭೋ** ಕೃತಿಯ ಕರ್ತೃ. ತಮಿಳು ಮತ್ತು ಸಂಸ್ಕೃತದಲ್ಲಿ ಅಯ್ಯರ್‌ರವರು ಕೃತಿಗಳನ್ನು ವರ್ಣಗಳನ್ನು ಲಕ್ಷಣ ಕೀರ್ತನೆಗಳನ್ನು, ತಿಲ್ಲಾನಗಳು ಮತ್ತು ಜಾವಳಿಗಳು ರಚಿಸಿದ್ದಾರೆ.

<u>“ರಂಜನಿ ರಾಗಮಾಲಿಕೆ – ಆದಿತಾಳ”.</u>

ರಂಜಿನಿ ಮಾಲ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಈ ಗೀತೆಯು ದೇವಿಯನ್ನು ರಂಜನಿ, ಶ್ರೀರಂಜನಿ, ಮೇಘರಂಜನಿ ಮತ್ತು ಜನರಂಜನಿ ರಾಗಗಳಲ್ಲಿ ವಿಶಿಷ್ಟವಾಗಿ ಸಂಯೋಜಿಸಲ್ಪಟ್ಟಿದೆ. ನಾಲ್ಕು ರಾಗಗಳನ್ನು ಹೊಂದಿದ್ದು ಚತುರ್‍ರಾಗಮಾಲಿಕೆಯಾಗಿದೆ. ಸುಂದರ ಸರಳ ರಾಗಮಾಲಿಕೆಯಾಗಿದೆ. ರಾಗಮುದ್ರೆಯು ಎಲ್ಲಾ ನಾಲ್ಕು ರಾಗಗಳಿಗೆ ದೇವಿಯ ಹೆಸರಾಗಿ ಕಾಣಿಸಿಕೊಂಡಿದೆ.

ರಂಜನಿ ಪ್ರತ್ಯಯಗಳು ಹೊಂದಿರುವಂತಹ ನಾಲ್ಕು ರಾಗಗಳು ರಂಜನಿ, ಶ್ರೀರಂಜನಿ, ಮೇಘರಂಜನಿ ಮತ್ತು ಜನರಂಜನಿ ಸಂಯೋಜಕರು ಅಳವಡಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸಂಗೀತ ಕಚೇರಿಗಳಲ್ಲಿ ಆಗಾಗ್ಗೆ ಕೇಳಿಬರುತ್ತಿರುವ ಈ ರಾಗಮಾಲಿಕೆಯನ್ನು ವಿದುಷಿ *ಡಿ.ಕೆ. ಪಟ್ಟಮ್ಮಾಳ್/ ಶ್ರೀ ಡಿ.ಕೆ. ಜಯರಾಮನ್ * ಅವರ ಶಾಲೆಯು ಜನಪ್ರಿಯಗೊಳಿಸಿತು. ಅನೇಕ ಕಲಾವಿದರು ಹಾಡಿದ್ದಾರೆ ಮತ್ತು ಸಂಗೀತ ವೇದಿಕೆಯಲ್ಲಿ ಸಾಕಷ್ಟು ಜಯಪ್ರಿಯವಾಗಿದೆ.

20ನೇ ಶತಮಾನದ ಸಂಯೋಜಕರಲ್ಲಿ ತರಂಗಂಪಾಡಿ ಪಂಚನದಯ್ಯರ್:

ಕರ್ನಾಟಕ ಸಂಗೀತಕ್ಕೆ ಕೊಡುಗೆಗಳನ್ನು ನೀಡಿದವರಲ್ಲಿ ಒಬ್ಬರು. ಇವರ ಸಂಯೋಜನೆಯ ಕಲ್ಯಾಣಿ ರಾಗದ ಬಿರಾನಬ್ರೋವು ಮತ್ತು ಆರಭಿಮಾನಂ, 12 ರಾಗಗಳನ್ನು ಒಳಗೊಂಡ ರಾಗಮಾಲಿಕೆಯು ಬಹುಪ್ರಸಿದ್ಧಿಯಾಗಿದೆ.**"ಅರಭಿಮಾನಮ್–ಆದಿತಾಳ"** ತಮಿಳಿನಲ್ಲಿ ಭಾಷೆಯಲ್ಲಿ ಸರಳವಾದ ಅನೇಕ ರಾಗಮಾಲಿಕೆಗಳು ಅಸ್ತಿತ್ವದಲ್ಲಿದೆ. ಇತ್ತೀಚಿನ ದಿನಗಳಲ್ಲಿ ರಾಗಮಾಲಿಕೆಗಳು ಅಸ್ತಿತ್ವದಲ್ಲಿದೆ. ಇತ್ತೀಚಿನ ದಿನಗಳಲ್ಲಿ ರಾಗಮಾಲಿಕಾ ಸಂಯೋಜನೆ ರೂಪವಾಗಿ ಅನೇಕ ಲೇಖಕರ ಸಾಹಿತ್ಯಗಳು ಪ್ರಸಿದ್ಧಿ ಪಡೆದಿವೆ.

ಈ ಹಾಡು ದೇವಿಯಸ್ತುತಿಯಾಗಿದೆ. ಸಂಪೂರ್ಣ ನಿರ್ಮಾಣವು ರಾಗಗಳ ಹೆಸರುಗಳ ಸುತ್ತ ಹೆಣೆಯಲ್ಪಟ್ಟಿದೆ ಅವುಗಳಲ್ಲಿ ಹಲವು ದೇವಿಯ ಹೆಸರನ್ನು ಸೇರಿಸಲಾಗಿದೆ. 12 ರಾಗಗಳಿಂದ ಸಂಯೋಜಿಸಲ್ಪಟ್ಟು ಇದು ವಿಶಿಷ್ಟ ದ್ವಾದಶ ರಾಗಮಾಲಿಕೆಯಾಗಿದೆ. ಆರಭಿ, ಆನಂದಭೈರವಿ, ಕಲ್ಯಾಣಿ, ಹಂಸಧ್ವನಿ, ಸಾರಂಗ, ಸಾಮ, ಮೋಹನ, ಲಲಿತ, ದರ್ಬಾರ್, ಭೈರವಿ ಮತ್ತು ಕಮಲಾಮನೋಹರಿ ಸಾಹಿತ್ಯದ ಹೆಸರಿನಲ್ಲಿಲ್ಲದ ಪೂರ್ವಿಕಲ್ಯಾಣಿ ರಾಗವನ್ನು ಎರಡನೆಯ ಚರಣದ ಚಿಟ್ಟೆಸ್ವರದಲ್ಲಿ ಸಂಯೋಜಿಸಲಾಗಿದೆ. ಪಲ್ಲವಿ ಅನುಪಲ್ಲವಿ ಚಿಟ್ಟೆಸ್ವರವು ನಾಲ್ಕು ರಾಗಗಳನ್ನು ಹೊಂದಿದ್ದು ಚಿಟ್ಟೆಸ್ವರದಲ್ಲಿ ವಿಲೋಮ ಪದ್ಧತಿಯಲ್ಲಿ ಆರಂಭಿಯ ನಂತರ ಪಲ್ಲವಿಯನ್ನು ಸೇರಿಕೊಳ್ಳುತ್ತದೆ ಇದೇ ರೀತಿ ಮತ್ತೆರಡು ಕ್ಷಣಗಳಿಗೂ ನಾಲ್ಕು ನಾಲ್ಕು ಭಾಗಗಳನ್ನು ಹೊಂದಿಸಲಾಗಿದೆ. ಈ ರೀತಿಯಾಗಿ ಈ ರಾಗಮಾಲಿಕೆಯು ಭಿನ್ನರೀತಿಯಲ್ಲಿ ಸಂಯೋಜಿಸಲ್ಪಟ್ಟಿದೆ.

ಜಯ ಜಯ ಗೋಕುಲ ಬಾಲ:

ನಾರಾಯಣತೀರ್ಥರ ಜಯ ಜಯ ಗೋಕುಲ ಬಾಲ ಹಿಂದಿನ ದಿನಗಳಲ್ಲಿ ನಾಟಕ ವೇದಿಕೆಯಲ್ಲಿ ಬಹು ಜನಪ್ರಿಯವಾದ ರಚನೆಯಾಗಿತ್ತು. ಈ ರಚನೆಯನ್ನು ಮೂಲದಲ್ಲಿ ಕುರಂಜಿರಾಗದಲ್ಲಿ ಹಾಡಲಾಗುತ್ತಿತ್ತು. ಇದನ್ನು ತಿರುವೊಟ್ಟಿಯೂರ್ ತ್ಯಾಗಯ್ಯರ್‌ರವರ ಭೈರವಿ,

ಅಠಾಣಾ, ಕಾಂಬೋಜಿ ಕಲ್ಯಾಣಿ ಮತ್ತು ಸುರುಟಿ ರಾಗಗಳಿರುವ ರಾಗಮಾಲಿಕೆಯಾಗಿ ಪರಿವರ್ತಿಸಿದ್ದಾರೆ. ಇದೇ ರೀತಿಯಲ್ಲಿ **ಅರುಣಾಚಲ ಕವಿರಾಯರ ರಾಮ ನಾಟಕಂ** ರೂಪದಲ್ಲಿ ಇರುವ **ಎನಕ್ಕುಂ ಇರುಪದಂ** – ಎಂಬ **ಸೌರಾಷ್ಟ್ರ ರಾಗದ** ರಚನೆಯನ್ನು ರಾಗಮಾಲಿಕೆಯಾಗಿ ಪರಿವರ್ತಿಸಿದ್ದಾರೆ.

ಆರ್.ಕೆ. ಸೂರ್ಯನಾರಾಯಣ್

ಇವರು ಮೈಸೂರು ಆಸ್ಥಾನ ವಿದ್ವಾನ್ ಆರ್.ಎಸ್. ಕೇಶವಮೂರ್ತಿ ಅವರ ಪುತ್ರರು. ತಮ್ಮ 14ನೇ ವಯಸ್ಸಿನಲ್ಲಿಯೇ ಗಾಯಕರಾಗಿದ್ದು. ವೀಣಾವಾದನದಲ್ಲೂ ಪ್ರವೀಣರಾಗಿದ್ದರು. "ವೈಣಿಕ ಶಿರೋಮಣಿ" "ನಾದಜ್ಯೋತಿ" ಮುಂತಾದ ಬಿರುದಾಂಕಿತರಾದ ಇವರು ವಾಗ್ಗೇಯಕಾರರೂ ಆಗಿ ಕರ್ನಾಟಕದ ಸಂಗೀತದ ಸಂಪತ್ತನ್ನು ಅಭಿವೃದ್ಧಿಗೊಳಿಸಿದ್ದಾರೆ. 72 ಮೇಳರಾಗ ಕೃತಿಗಳನ್ನಲ್ಲದೆ, ಸ್ವರಜತಿಗಳನ್ನು ಗುರು ರಾಘವೇಂದ್ರರ ಕೃತಿಗಳನ್ನು ಹಲವು ರಾಗಮಾಲಿಕೆಗಳನ್ನು ರಚಿಸಿದ್ದಾರೆ. **"ಹರಪುರೀಶ"** ಅಂಕಿತದೊಂದಿಗೆ ಅಪರೂಪದ ರಾಗಗಳಲ್ಲಿಯೂ ಇವರ ರಚನೆಗಳನ್ನು ಕಾಣಬಹುದು. ಇವರ ರಚನೆಗಳು ಸರಳವಾದ ಸಾಹಿತ್ಯವಿರುವ ರಾಗಭಾವದಿಂದ ತುಂಬಿರುವ ರಚನೆಗಳಾಗಿವೆ.

ಪ್ರಣಮಾಮ್ಯಹಂ – ಚತುರ್ರಾಗ ಮಾಲಿಕೆ.

ಶ್ರೀ ಗುರು ರಾಘವೇಂದ್ರಸ್ವಾಮಿಗಳನ್ನು ಕುರಿತಾದ ಈ ರಚನೆಯು ರೂಪಕ ತಾಳದಲ್ಲಿ ಬದ್ಧವಾಗಿದೆ. ಪುನ್ನಾಗವರಾಳಿ, ಸಿಂಧೂಭೈರವಿ, ಸಾರಂಗ ಮತ್ತು ಮಣಿರಂಗು ರಾಗಗಳಲ್ಲಿ ರಚನೆಗೊಂಡಿದ್ದು ಚಿಟ್ಟೆಸ್ವರಗಳಿಲ್ಲದೆ ಅತಿಸುಂದರ ಸರಳ ರಾಗಮಾಲಿಕೆಯಾಗಿದೆ. ಮೂರು ಭಾಷಾಂಗ ರಾಗಗಳನ್ನು, ಮಂಗಳಕ್ಕೆ ಮಣಿರಂಗು ರಾಗವನ್ನು ಅಳವಡಿಸಲಾಗಿದ್ದು ಭಾಷಾಂಗ ರಾಗಗಳನ್ನು ಸಂಗೀತಾಭ್ಯಾಸಿಗಳಿಗೆ ಪರಿಚಯಿಸಲು ಉತ್ತಮ ರಾಗಮಾಲಿಕೆಯಾಗಿದೆ.

ಆರ್.ಎನ್. ದೊರೆಸ್ವಾಮಿ ಅಯ್ಯಂಗಾರ್:

ಕರ್ನಾಟಕದ ಹಾಸನ ಜಿಲ್ಲೆಯ ರುದ್ರಪಟ್ಟಣದಲ್ಲಿ ಜನಿಸಿದರು. ಶತವಧಾನಿ ವೆಂಕಟರಾಮಯ್ಯನವರಲ್ಲಿ ಸಂಗೀತದ ಶಿಕ್ಷಣವನ್ನು ಪಡೆದರು ಹಾಗೂ ಮೈಸೂರಿನ ಆಸ್ಥಾನ

ವಿದ್ವಾನ್ ವೆಂಕಟಗಿರಿಯಪ್ಪನವರಲ್ಲಿ ವೀಣಾವಾದನದಲ್ಲಿ ಶಿಕ್ಷಣ ಪಡೆದು 1947ರಲ್ಲಿ ಮಹಾರಾಜ ಜಯಚಾಮರಾಜ ಒಡೆಯರ್ ಆಸ್ಥಾನದ ವಿದ್ವಾಂಸರಾದರು. ಅನೇಕ ಸ್ವರಜತಿ, ತಾನವರ್ಣ, ಪದವರ್ಣಗಳನ್ನು ತಿಲ್ಲಾನಗಳು ಗೇಯ ಪ್ರಕಾರಗಳನ್ನು ರಚಿಸಿದ್ದಾರೆ. ಲಕ್ಷ್ಮೀರಮಣ ಕೃತಿ ಮಂಜರಿಯಲ್ಲಿ ಎರಡು ರಾಗ ಮುದ್ರಿಕೆಗಳನ್ನು ಕಾಣಬಹುದು. ಇವರು **"ಶ್ರೀ ವೆಂಕಟೇಶ ನವರಾಗಮಾಲಿಕೆ"**ಯನ್ನು ಧನ್ಯಾಸಿ ಹಮೀರ್ ಕಲ್ಯಾಣಿ, ಭೂಪಾಲ, ಬೇಗಡೆ ಮತ್ತು ಪೂರ್ವಿಕಲ್ಯಾಣಿ ರಾಗಗಳಲ್ಲಿ ಸಂಯೋಜಿಸಿದ್ದಾರೆ. ಈ ರಾಗಮಾಲಿಕೆಯಲ್ಲಿ ಪ್ರತಿ ಖಂಡದಲ್ಲಿಯೂ ಸಾಹಿತ್ಯದೊಂದಿಗೆ ಚಿಟ್ಟೆಸ್ವರವೂ ಸಂಯೋಜಿಸಲ್ಪಟ್ಟು, ಸಾಮಾನ್ಯವಾಗಿ ಎಲ್ಲ ರಾಗಮಾಲಿಕೆಗಳಲ್ಲಿ ಕಂಡು ಬರುವ ಅಂಶಗಳನ್ನೇ ಹೊಂದಿವೆ.

ಮಾತಂಗಮುಖ ಶಿವಸುತಂ ಎಂಬ ಸಾಹಿತ್ಯವನ್ನು ಹೊಂದಿರುವ ಗೌಳಪಂಚ ರಾಗಮಾಲಿಕೆಯು ಗೌಳ, ಕೇದಾರಗೌಳ, ರೀತಿಗೌಳ, ಮಾಯಾಮಾಳವಗೌಳ ಮತ್ತು ಕನ್ನಡ–ಗೌಳ ರಾಗಗಳಲ್ಲಿ ಸಂಯೋಜನೆಯಾಗಿದೆ. ಈ ರಾಗಮಾಲಿಕೆಯಲ್ಲಿ ಕಂಡುಬರುವ ಅಂಶವೆಂದರೆ ಅನುಪಲ್ಲವಿ ಮತ್ತು ಚರಣಗಳು ಮಾತ್ರ ನಾಲ್ಕು ಆವರ್ತಗಳ ಚಿಟ್ಟೆಸ್ವರವನ್ನು ಹೊಂದಿದ್ದು, ಪಲ್ಲವಿಯನ್ನು ಸೇರಿಕೊಳ್ಳುತ್ತದೆ.

ಆರ್.ಚಂದ್ರಶೇಖರಯ್ಯ (1915 – 1999)

ಮೈಸೂರು ಸಹೋದರರೆಂದು ಹೆಸರುವಾಸಿಯಾಗಿದ್ದ ನಾಲ್ಕು ಮಂದಿ ಸಹೋದರರಲ್ಲಿ ಚಂದ್ರಶೇಖರಯ್ಯನವರು ಹಿರಿಯರು. ಚಿಕ್ಕಂದಿನಲ್ಲಿ ತಮ್ಮ ತಾಯಿಯವರಲ್ಲಿ ಸಂಗೀತ ಶಿಕ್ಷಣ ಪಡೆದು ತಮ್ಮ ಸ್ವಂತ ಪರಿಶ್ರಮದಿಂದ ಪ್ರೌಢಿಮೆಯನ್ನು ಗಳಿಸಿದರು. ಇವರ ಸಹೋದರರಾದ ಡಾ.ಆರ್.ಸತ್ಯನಾರಾಯಣ ಸಂಗೀತಶಾಸ್ತ್ರಜ್ಞರು, ವಿದ್ವಾಂಸರೂ, ಲೇಖಕರೂ ಆಗಿದ್ದಾರೆ. ಮತ್ತೊಬ್ಬ ಸಹೋದರರಾದ ಪ್ರೊ. ವಿಶ್ವೇಶ್ವರನ್ ಖ್ಯಾತ ವೈಣಿಕರಾಗಿದ್ದಾರೆ.

ಚಂದ್ರಶೇಖರಯ್ಯನವರು ವಾಗ್ಗೇಯಕಾರರಾಗಿ ತೆಲುಗು, ಸಂಸ್ಕೃತ, ಕನ್ನಡದಲ್ಲಿ ಸುಮಾರು 400 ವರ್ಣ, ತಿಲ್ಲಾನ, ರಾಗಮಾಲಿಕೆಗಳನ್ನು ರಚಿಸಿದ್ದಾರೆ.

"108 ಮಹಾ ಮಾರ್ಗತಾಳಗಲ್ಲಿ" ಪಲ್ಲವಿಗಳನ್ನು ರಚಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಇವರ ರಚನೆಗಳೆಲ್ಲವೂ "ಕೃತಿರತ್ನಮಾಲ" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ.

ಪ್ರೊಫೆಸರ್.ರಾ.ವಿಶ್ವೇಶ್ವರನ್

"ಗಜಮುಖ ಮುನನುಂಡಿ" – ರಾಗಮಾಲಿಕೆ.

ಇದು ಖಂಡಛಾಪು ತಾಳದ ಸಪ್ತರಾಗಮಾಲಿಕೆಯಾಗಿದೆ.

ಕಾಂಬೋದಿ, ಕಾವೇರಿ, ತರಂಗಿಣಿ, ಆನಂದಭೈರವಿ, ಸಾರಂಗ, ಹಂಸಾನಂದಿ ಮತ್ತು ಮಧ್ಯಮಾವತಿ ರಾಗಗಳಲ್ಲಿ ಸಂಯೋಜಿಸಲಾಗಿದೆ.

ರಾಜರಾಜೇಶ್ವರಿ ಮಂಗಳ– ತಿಶ್ರ, ಆದಿತಾಳ ಮತ್ತು ಖಂಡಜಾತಿಯಲ್ಲಿ ಸಂಯೋಜಿಸಲಾಗಿದೆ. ಝುಂಝೂಟಿ, ಪುನ್ನಾಗವರಾಳಿ, ಆನಂದಭೈರವಿ, ಲಲಿತ, ಸೌರಾಷ್ಟ್ರ ಮಧ್ಯಮಾವತಿ, ಸುರುಟಿ ರಾಗಗಳೊಂದಿಗೆ ಸಂಯೋಜಿಸಲ್ಪಟ್ಟ ಸಪ್ತ ರಾಗಮಾಲಿಕೆಯಾಗಿದೆ.

ಶ್ರೀ ರಾಜರಾಜೇಶ್ವರಿ ಅಂಗ ಪೂಜಾ ಸ್ತೋತ್ರ – ಏಕಾದಶ, ರಾಗಮಾಲಿಕೆಯಾಗಿ ಖಂಡಗತಿ ಆದಿತಾಳಕ್ಕೆ ಅಳವಟ್ಟಿದೆ.

ಗ್ರಹಭೇದಕ್ಕೆ ಒಳಪಟ್ಟಿರುವ ರಾಗಮಾಲಿಕೆಗಳು

ಗ್ರಹಭೇದವು ತುಂಬಾ ಸ್ವಾರಸ್ಯಕರವೂ ಅದ್ಭುತವೂ ಆದ ಸಂಗಿತ ಕಲಾನುಭೂತಿ. ಆದರೆ ಇದರ ಹಿಂದಿರುವ ಗಣಿತ ಅಥವಾ ಭೌತಶಾಸ್ತ್ರೀಯ ಸಂಗತಿ ತುಂಬಾ ಸರಳ ಸುಲಭ. ಇದನ್ನು ಗ್ರಹಸ್ವರಭೇದವೆಂದರೆ ತಿಳಿಯಾಗಿ ತಿಳಿದೀತು. ರಾಗವೊಂದರ ಗ್ರಹಸ್ವರ (ಆಧಾರ ಷಡ್ಜ)ವನ್ನು ಕ್ರಮವಾಗಿ ಅದರ ಮುಂದಿನ ಸ್ವರಗಳ ಸ್ಥಾನಗಳಿಗೆ ಬದಲಾಯಿಸುತ್ತಾ ಬಂದರೆ ಹಾಡುತ್ತಿರುವ ರಾಗವೇ ಬೇರೆ ಬೇರೆ ರಾಗಗಳಂತೆ ಕೇಳತೊಡಗುತ್ತದೆ.

ಶ್ರವ್ಯಕಲೆಯಾದ ಸಂಗೀತದಲ್ಲಿ ನಾದ ಮಾಧ್ಯಮದ ತರಂಗಾಂತರಂಗಗಳ ಮೂಲಕ ಸಾಧಿಸುವ ಈ ವಿಸ್ಮಯವನ್ನು ಯಮಕಾಲಂಕಾರಗಳಿಗೂ ಹೋಲಿಸಬಹುದು. ಇಂತಹ ಗ್ರಹಭೇದವನ್ನು ಅತಿಸಮರ್ಪಕವಾಗಿ ನಿರ್ವಹಿಸಬಲ್ಲ ಗಾಯಕನಿಗೆ ಶ್ರುತಿಯ ಮೇಲೆ ಅಸಾಧಾರಣವಾದ ಹತೋಟಿ ಇರಬೇಕು.

ಡಾ.ಎಮ್.ಬಾಲಮುರಳಿಕೃಷ್ಣ (1930–2016)

ಮಂಗಳಂಪಲ್ಲಿ ಬಾಲಮುರುಳಿಕೃಷ್ಣ.

ಕರ್ನಾಟಕ ಸಂಗೀತದ ಗಾಯಕರು, ಹಿನ್ನೆಲೆ ಗಾಯಕರು ಮತ್ತು ಪ್ರಸಿದ್ಧವಾಗ್ಗೇಯಕಾರರು. ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ **"ಸಂಗೀತ ಕಲಾನಿಧಿ ಪ್ರಶಸ್ತಿಯನ್ನು ಮತ್ತು ಪದ್ಮವಿಭೂಷಣ ಪ್ರಶಸ್ತಿ"**ಯನ್ನು ಪಡೆದಿದ್ದಾರೆ. ಇವರು ತಮ್ಮ ಆರನೇ ವಯಸ್ಸಿನಲ್ಲಿಯೇ ವೃತ್ತಿಜೀವನವನ್ನು ಆರಂಭಿಸಿದರೆನ್ನಬಹುದು. ಇವರು ಪ್ರಪಂಚಾದ್ಯಂತ ಸುಮಾರು 25 ಸಾವಿರ ಸಂಗೀತ ಕಚೇರಿಗಳನ್ನು ನೀಡಿದ್ದರೆನ್ನಬಹುದು. ತೆಲುಗು, ಕನ್ನಡ, ಸಂಸ್ಕೃತ, ತಮಿಳು, ಮಲಯಾಳಂ, ಹಿಂದಿ, ಬೆಂಗಾಲಿ ಮತ್ತು ಪಂಜಾಬಿ ಸೇರಿದಂತೆ ಇವರ ರಚನೆಗಳು ಕಾಣಬರುತ್ತವೆ. 72 ಮೇಳಕರ್ತರಾಗಗಳಲ್ಲಿ ಸಂಯೋಜಿಸಿದ್ದವರಲ್ಲಿ ಇವರು ಒಬ್ಬರು.

ಗ್ರಹಭೇದ ಪ್ರಿಯ ತಿಲ್ಲಾನ– ರಾಗಮಾಲಿಕೆ

ದ್ರು ತೋಂ ನಾನಾನ – ಆದಿತಾಳ

ಪಲ್ಲವಿ – ಗುರುಪ್ರಿಯ ರಾಗದಲ್ಲಿ ಆರಂಭಗೊಂಡು ರಸಿಕಪ್ರಿಯ – ಗಾಯಕಪ್ರಿಯ – ಸುನಾದಪ್ರಿಯ–ಖರಹರಪ್ರಿಯ ಮುಕ್ತಾಯಗೊಳ್ಳುತ್ತದೆ. ರಾಗಮುದ್ರೆಯನ್ನು ಪ್ರತಿ ಖಂಡದಲ್ಲಿಯೂ ಕಾಣಬಹುದು.

ಬೆಂಗಳೂರು ನಾಗರಾಜ್ – ಮೀನಾಕ್ಷಿಸುತ ಎಂದು ಕರೆಯಲ್ಪಡುವ ಇವರು ಈಶ್ವರ ಅಯ್ಯರ್ ಅವರ ಪುತ್ರರು. ಇವರು ದೇವಿ ಉಪಾಸಕರು, ಸ್ವಯಂ ಪ್ರೇರಿತರಾಗಿ ಮೀನಾಕ್ಷಿದೇವಿಯ ಮತ್ತು ಹಲವಾರು ದೇವತೆಗಳ ಮೆಲೆ ಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ **"ರಕ್ಷಮಾಂ ಶರಣಾಗತಂ" ಚೆಂಬೈವೈದ್ಯನಾಥ ಭಾಗವತರು** ಬಹಳವಾಗಿ ಹಾಡುತ್ತಿದ್ದು ಜನಪ್ರಿಯವಾಗಿದೆ.

ಭುವನತ್ರಯನುತಮ್ – ರಾಗಮಾಲಿಕೆ

ಮೋಹನಕಲ್ಯಾಣಿ ರಾಗ – ರಾಗಮಾಲಿಕೆ

ಸ್ಮರ ಲಲಿತಾಂ – ರಾಗಮಾಲಿಕೆ

ವಿದುಷಿ ಶ್ರೀಮತಿ ವಸಂತಮಾಧವಿಯವರು ಕರ್ನಾಟಕದ ಸುಪ್ರಸಿದ್ಧ ಹಿರಿಯ ಸಂಗೀತ ವಿದ್ವಾಂಸರು. ಇವರು ಸಂಸ್ಕೃತದಲ್ಲಿ ಕೋವಿದ ಪದವಿಯನ್ನು ಗಳಿಸಿದ್ದಾರೆ. ಸಂಸ್ಕೃತ,ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಂಗೀತ ಸಂಯೋಜನೆಗಳನ್ನು ಮಾಡಿದ್ದಾರೆ.ಇವರು ಹಲವಾರು ರಾಗಮಾಲಿಕೆಗಳನ್ನು, ವರ್ಣಗಳು, ಜತಿಸ್ವರ, ವಿಶೇಷ ಕೃತಿ, ..ಷೋಡಶ ಗಣಪತಿ ಕೃತಿಗಳು,ತಿಲ್ಲಾನಗಳು,ಪಲ್ಲವಿಗಳು,ಶ್ಲೋಕಗಳನ್ನು ರಚಿಸಿದ್ದಾರೆ.

ರಾಗಮಾಲಿಕೆಗಳು:

1.**ಸಹಸ್ರಾರ ಚಕ್ರವಾಸಿನೀಂ(ವಿಷ್ಣು ದಶಾವತಾರ)**

2.**ಪಾರ್ಥಿವ ತತ್ವಾಂ (ಪಂಚತತ್ವ ವರ್ಣನ)**

3.**ಶ್ರೀ ಬ್ರಹ್ಮಾಣೀ (ಸಪ್ತಮಾತೃಕಾ ಸ್ತುತಿ)** ಇವುಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ.

ನೆರೂರು ಶ್ರೀನಿವಾಸಾಚಾರ್ ಅಯ್ಯರ್ರವರು ದಶರಾಗಮಾಲಿಕೆ, 72 ಮೇಳರಾಗಮಾಲಿಕೆ, 35 ರಾಗತಾಳಮಾಲಿಕೆ, 108 ತಾಳರಾಗಮಾಲಿಕೆ –ರಾಮಸ್ವಾಮಿದೀಕ್ಷಿತರ ರಚನೆಯಂತೆ ರಚಿಸಿದ್ದಾರೆ. ತಮಿಳು ಭಾಷೆಯಲ್ಲಿ ರಾಗಮಾಲಿಕೆಗಳನ್ನು ರಚಿಸಿದ್ದಾರೆ.

"ಮಂಗಳ ಕೃತಿಗಳಲ್ಲಿ ರಾಗಮಾಲಿಕೆ".

ಮಂಗಳಂ ಮೀನಾಕ್ಷತೇ– ಏಕಾದಶ ರಾಗಮಾಲಿಕೆ ಕೃಷ್ಣಸ್ವಾಮಯ್ಯ ರವರ ರಚನೆಯಾಗಿದೆ.

ಶ್ರೀಮತಿ ಅಂಬುಜಂ ಕೃಷ್ಣ.

ಅಂಬುಜ ಕೃಷ್ಣ ಅವರು ಸಂಸ್ಕೃತ ಕನ್ನಡ ತಮಿಳು ಮತ್ತು ತೆಲುಗು ಮುಂತಾದ ವಿವಿಧ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಮಣಿಪ್ರವಾಳ ಕೃತಿಯನ್ನೂ ರಚಿಸಿರುವರು ಇವರು. ಇವರ ಸಾಹಿತ್ಯಗಳಿಗೆ ಸಂಗೀತ ವಿದ್ವಾಂಸರುಗಳಾದ ಶ್ರೀ. ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ವಿ.ವಿ.ಶಡಗೋಪನ್, ಎಸ್.ರಾಮನಾಥನ್. ಟಿ.ಎನ್.ಶೇಷನ್ ಗೋಪಾಲನ್ ಮುಂತಾದವರು ರಾಗ ಸಂಯೋಜಿಸಿದ್ದಾರೆ. **ಗಾನಮಳೈ,ದೇವಕಿದಾನ್‌ಕುಲ,ಕಣ್ಣಾ ವಾ ಮಣಿ ವಣ್ಣಾ ವಾ ಕೃತಿಗಳು ರಾಗಮಾಲಿಕೆಗಳಾಗಿ ಸಂಯೋಜಿಸಲ್ಪಟ್ಟಿವೆ.**

ಚಿತ್ರವೀಣಾ ಎನ್ ರವಿಕಿರಣ್ (1967 –   )

ಚಿತ್ರವೀಣಾ ಎನ್. ರವಿಕಿರಣ್ ರವರು ಒಬ್ಬ ಅದ್ಭುತ ಸಂಗೀತಗಾರರು ಮತ್ತು ಸಮೃದ್ಧ ಸಂಯೋಜಕರು. ಸಾಂಪ್ರದಾಯಿಕ ಕರ್ನಾಟಕ ಸಂಗೀತದ ಪ್ರಕಾರಗಳಾದ ಕೃತಿ, ವರ್ಣ, ತಿಲ್ಲಾನ, ಜಾವಳಿಗಳು ಪದಂಗಳಂತಹ ರಚನೆಗಳನ್ನು ರಚಿಸಿದ್ದಾರೆ. ಅವರ ಹೆಚ್ಚಿನ ಸಂಯೋಜನೆಗಳಲ್ಲಿ ರವಿ–ಶಶಿ, ಮತ್ತು ರವಿಕಿರಣ್ ಎಂಬ ಮುದ್ರೆಗಳನ್ನು ಕಾಣಬಹುದು. ಮೇಳಕರ್ತರಾಗಮಾಲಿಕಾ ಗೀತೆಯನ್ನು ಪೂರ್ವಾಂಗ ಸ್ವರಗಳು ಮತ್ತು ರಾಗದ ಹೆಸರುಗಳನ್ನು ಒಳಗೊಂಡಿರುವಂತೆ ರಚಿಸಿದ್ದಾರೆ. ಅಷ್ಟಲಕ್ಷ್ಮೀ ರಾಗಮಾಲಿಕೆ, ಮೇಳರಾಗ ಗೀತ ರಚಿಸಿದ್ದಾರೆ.

ಮನೋಹರಿ ರಾಗಮಾಲಿಕೆ

ವಿದ್ವಾನ್ ಆರ್. ಸುಬ್ರಹ್ಮಣ್ಯಂ ಅವರ –ರಚನೆ– ಏನ್ಬಾ ಮೆಲ್ಲಾಂ ತರುಮ್. ಈ ರಾಗಮಾಲಿಕೆಯ ಪಲ್ಲವಿಯಲ್ಲಿ –ಮನೋಹರಿ–ಕಮಲಮನೋಹರಿ–ಈಶಮನೋಹರಿ–ಜಯಮನೋಹರಿ– ಸಾಹಿತ್ಯಕ್ಕೆ ರಾಗಮುದ್ರೆಯು ಹೊಂದಿಸಲ್ಪಟ್ಟಿದೆ ಹಾಗೂ ಸ್ವರಗಳು ವಿಲೋಮ ಕ್ರಮದಲ್ಲಿ ಅಳವಟ್ಟಿದೆ.

ಅನುಪಲ್ಲವಿ:

ಮೇಘಮನೋಹರಿ–ಲಲಿತ ಮನೋಹರಿ–ಸರಸ್ವತಿ ಮನೋಹರಿ–ಗೌರಿಮನೋಹರಿ– ಈ ಖಂಡವು ಅನುಪಲ್ಲವಿಯ ರಾಗಗಳನ್ನು ಮುದ್ರೆಯನ್ನು ಹೊಂದಿದ್ದು ಅನುಪಲ್ಲವಿಯಲ್ಲಿ ಬಳಸಿರುವ ರಾಗಗಳಲ್ಲದೆ ಪಲ್ಲವಿಯ ರಾಗಗಳೊಂದಿಗೆ ವಿಲೋಮ ಕ್ರಮದಲ್ಲಿ ಪಲ್ಲವಿಯನ್ನು ಸೇರುತ್ತದೆ.

ಚರಣವು: ರಮಾಮನೋಹರಿ–ದೇವಮನೋಹರಿ–ದೇವಮನೋಹರಿ–ಗಂಧರ್ವಮನೋಹರಿ–ವಸಂತಮನೋಹರಿ ರಾಗಗಳಲ್ಲಿ ಸಂಯೋಜಿಸಲ್ಪಟ್ಟಿದ್ದು 12 ರಾಗಗಳನ್ನು ಹಾಡಿ ಪಲ್ಲವಿಯನ್ನು ಸೇರುವಂತೆ ರಚಿಸಲಾಗಿದೆ.

ಪಾಪನಾಶಂಶಿವನ್ :

ಶ್ರೀರಾಮಚರಿತ ಗೀತಂ– 24 ರಾಗಗಳನ್ನು ಒಳಗೊಂಡು ರಾಗಮಾಲಿಕೆಯಾಗಿ ರಚಿತವಾಗಿದೆ. ಘನಂ ಕೃಷ್ಣಾಯ್ಯನವರು 21 ರಾಗಗಲ್ಲಿ ಮಂಗಳ ಕೃತಿಯನ್ನು

ಸಂಯೋಜಿಸಿದ್ದಾರೆ. ಈ ರೀತಿಯಾಗಿ ಸಂಗೀತ ವೇದಿಕೆಗಳಲ್ಲಿ ಪ್ರದರ್ಶಿತವಾಗುವ ಕರ್ನಾಟಕ ಸಂಗೀತದ ಎಲ್ಲ ಪ್ರಕಾರಗಳು ರಾಗಮಾಲಿಕೆಯಾಗಿ ವಾಗ್ಗೇಯಕಾರರುಗಳು ರಚಿಸಿರುವುದನ್ನು ಕಾಣಬಹುದು.

*** ಅರಿಯಾಕುಡಿ ರಾಮಾನುಜ ಅಯ್ಯಂಗಾರ್ :**

ಭಾರತ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದ ಕರ್ನಾಟಕ ಸಂಗೀತದ ವಿಶಿಷ್ಟ ಗಾಯಕರು. ಕರ್ನಾಟಕ ಸಂಗೀತದಲ್ಲಿ ಆಧುನಿಕ ಕಚೇರಿ ಸಂಪ್ರದಾಯಗಳನ್ನು ಸ್ಥಾಪಿಸಿದವರು. *ವಿದುಷಿ ಡಿ.ಕೆ. ಪಟ್ಟಮ್ಮಾಳ್ ವಿದ್ವಾನ್ ಡಿ.ಕೆ.ಜಯರಾಮನ್ ಇವರು ಪ್ರಪಂಚಾದ್ಯಂತ ಕರ್ನಾಟಕ ಸಂಗೀತ ಪ್ರೇಮಿಗಳಿಂದ ಮೆಚ್ಚುಗೆ ಪಡೆದಿದ್ದಾರೆ. ಡಿ.ಕೆ. ಪಟ್ಟಮ್ಮಳ್, ಅವರ ಸಮಕಾಲೀನರಾದ ಎಂ.ಎಸ್. ಸುಬ್ಬುಲಕ್ಷ್ಮಿ ಮತ್ತು ಎಂ.ಎಲ್. ವಸಂತಕುಮಾರಿ ಯವರೊಂದಿಗೆ ಕರ್ನಾಟಕ ಸಂಗೀತದ ಸ್ತ್ರೀ ತ್ರಿಮೂರ್ತಿಗಳು ಎಂದು ಜನಪ್ರಿಯವಾಗಿ ಕರೆಯುತ್ತಾರೆ. ಸಮೃದ್ಧ ತಮಿಳು ಸಂಯೋಜಕರಾದ ಪಾಪನಾಶಂಶಿವಂ ಅವರಲ್ಲಿ ನೇರ ಅಧ್ಯಯನವನ್ನು ಮಾಡಿದರು. ಡಿ.ಕೆ. ಜಯರಾಮನ್ ಇವರ ಸಹೋದರರಾಗಿದ್ದರು. ನಂತರ ಆಕೆಯ ಗಾಯನದ ಜೊತೆಗಾರರಾದರು.

---

*ಸುಳಾದಿ: ಕರ್ನಾಟಕದ ಹಾರಿದಾಸರುಗಳು ರಚಿಸಿದ ರಚನೆ.

* ಬ್ರಹ್ಮಾನಂದ ಸುಳಾದಿ – ಕರ್ನಾಟಕ ಸಂಗೀತ ತರಂಗಿಣಿ – ಪ್ರೊಫೆಸರ್ ರಾಮರತ್ನಂ

*ಈ ಗೀತೆಯು "ಸಂಗೀತ ಸ್ವರಾರ್ಥ ಸಾರ ಸಂಗ್ರಹಮು" ಗ್ರಂಥದಲ್ಲಿ ಕಾಣಬರುತ್ತದೆ (ಉಲ್ಲೇಖ; ರಾಗ ಮಾಲಿಕೆಗಳು ಡಾ: ಟಿ.ಎನ್.ಪದ್ಮ ಪುಟ 47)

*ನಾದಸುರಭಿ – ಸಂಗೀತ ಲೇಖನಗಳಲ್ಲಿ ವಿದುಷಿ ಸುಗುಣ ಪುರುಷೋತ್ತಮನ್ ಸ್ಪಷ್ಟಪಡಿಸಿದ್ದಾರೆ.

*ರೆಟ್ಟೆ ಎಂದರೆ ಲಘು ಯಾವ ನಡೆಯಲ್ಲಾದರೂ ಒಂದೇ ಪೆಟ್ಟಿಗೆ ಅಕ್ಷರಗಳು ಅಳಪಡುವಂತದ್ದು.

* ಸಂಗತ್ಯದಂತಹ ಎರಡು ಸಾಲಿನ 25 ಚರಣಗಳುಳ್ಳ ರಚನೆ.

* ಮೈಸೂರು ವಾಗ್ಗೇಯಕಾರರ ಸಾಧನೆ ಸಿದ್ಧಿ ಹಾಗೂ ವರ್ಣಗಳು, ಸಂಪಾದಕರು ಡಾ॥ ಸುಕನ್ಯಾ ಪ್ರಭಾಕರ್ –ಪುಟ 53

* ಭೈರವಿ ರಾಗದ" ವಿರಿಬೋಣಿ ಅಟ್ಟ ತಾಳ ವರ್ಣವನ್ನು ರಚಿಸಿದವರು.

* ದ್ವಿತಾಳ ಅವಧಾನ: ಎರಡು ಕೈಗಳಲ್ಲಿ ಏಕಕಾಲದಲ್ಲಿ ವಿಭಿನ್ನ ಗತಿಗಳ ಎರಡು ತಾಳಗಳನ್ನು ನಿರ್ವಹಿಸುವುದು. ಸಿಂಹನಂದನ ತಾಳ: 128 ಎಣಿಕೆಗಳು.

* ನಾದ ಸುರಭಿ ಸಂಗೀತ ಲೇಖನಗಳು ದಿಂದ ಆಯ್ದುಕೊಳ್ಳಲಾಗಿದೆ.

* ಕಲೈಮಾಮಣಿ: ಭಾರತದ ತಮಿಳುನಾಡು ರಾಜ್ಯದಲ್ಲಿ ತಮಿಳುನಾಡು ಸರ್ಕಾರ ಕಲೆ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ನೀಡುವ ಅತ್ಯುನ್ನತ ನಾಗರೀಕ ಪ್ರಶಸ್ತಿಯಾಗಿದೆ.

* ಮೈಲಾಪುರ ಟೈಮ್ಸ್ ಪತ್ರಿಕೆ, ಆಗಸ್ಟ್ 19, 2015,

* ಎಂ.ಡಿ. ರಾಮನಾಥನ್:

* ಎಸ್.ಆರ್.ಜಾನಕಿ ರಾಮನ್ : ಗೋವಿಂದರ ಸಂಗ್ರಹಚೂಡಮಣಿ ಮತ್ತು ಸುಬ್ಬರಾಮ ದೀಕ್ಷಿತರ ಸಂಪ್ರದಾಯ ಪ್ರದರ್ಶಿನಿ ಅಂತಹ ಹಲವಾರು ಪ್ರಸಿದ್ಧ ಸಂಗೀತಶಾಸ್ತ್ರದ ಗ್ರಂಥ ಅವಲೋಕಿಸಿ ಬಹಳ ಸುಪ್ರಸಿದ್ಧ ಮತ್ತು ಅಧಿಕೃತ ಪ್ರಸ್ತುತಿಯನ್ನು ನೀಡಿದವರು.

* ಮುತ್ತುಸ್ವಾಮಿ ದೀಕ್ಷಿತರ ಕಿರಿಯ ಸಹೋದರ

* ರಾಗಾಂಗ ರಾಗ– ಅಸಂಪೂರ್ಣ ಪದ್ಧತಿಯಲ್ಲಿ ಮೇಳಕರ್ತರಾಗಗಳು

* ಸಂಗೀತ ಸಂಪ್ರದಾಯ ಪ್ರದರ್ಶಿನಿ – ಸಂಪುಟ 6 – ಮೂಲ ಗ್ರಂಥ ಬ್ರಹ್ಮಶ್ರೀ ಸುಬ್ಬರಾಮ ದೀಕ್ಷಿತರು – ಕನ್ನಡ ಅವತರಿಣಿಕೆ ಸಂಗೀತ ಕಲಾ ರತ್ನ ಪ್ರೊಫೆಸರ್ ಸಾ. ಕೃ ರಾಮಚಂದ್ರರಾವ್ – ವಿದ್ವಾನ್ ಆನಂದರಾಮ ಉಡುಪ, ಸಂಪಾದಕರು ಪುಟ ಸಂಖ್ಯೆ 1599–1621.

* ಕರ್ನಾಟಕ ಸಂಗೀತ ದೀಪಿದೆ – ಪುಟ 373 ಪಿ.ಪಿ.ನಾರಾಯಣಸ್ವಾಮಿ ಅವರ ಲೇಖನಗಳಿಂದ ಆಯ್ದುಕೊಳ್ಳಲಾಗಿದೆ.

ಗಾಯಕ ಶಿಖಾಮಣಿ ಡಾ. ಎಲ್ ಮುತ್ತಯ್ಯ ಭಾಗವರ ರಚನಾ ಸಂಗ್ರಹ – ಸಂಕಲನ ಕರ್ನಾಟಕ ಕಲಾಶ್ರೀ ಟಿ.ಎನ್. ಪದ್ಮ.

ಅಧ್ಯಾಯ ಹತ್ತು

ಸಂಗೀತ ವಿದ್ವಾಂಸರುಗಳು ಪ್ರಸಿದ್ಧಿಗೊಳಿಸಿರುವ ಹಾಗೂ ಜನಪ್ರಿಯವಾಗಿರುವ ಕೆಲವು ರಾಗಮಾಲಿಕೆಗಳು.

ವಿದುಷಿ ಡಾ ಎಂ..ಎಸ್.ಸುಬ್ಬುಲಕ್ಷ್ಮಿ.

ಭಾರತದ ಅತ್ಯುನ್ನತ ನಾಗರಿಕ ಗೌರವವಾದ ಭಾರತರತ್ನ ಪ್ರಶಸ್ತಿಯನ್ನು ಪಡೆದ ಮೊದಲ ಸಂಗೀತಗಾರ್ತಿ. ಅವರ ಚಿಕ್ಕ ವಯಸ್ಸಿನಲ್ಲಿಯೇ ಕರ್ನಾಟಕ ಸಂಗೀತವನ್ನು ಕಲಿಯಲು ಪ್ರರಂಭಿಸಿ ಸೇಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ಸಂಗೀತದಲ್ಲಿ ತರಬೇತಿ ಪಡೆದರು. ಇವರು ತಮ್ಮ ಸಂಗೀತ ಪ್ರದರ್ಶನಗಳಲ್ಲಿ ಹಲವಾರು ರಾಗಮಾಲಿಕೆಗಳನ್ನು ಜನಪ್ರಿಯಗೊಳಿಸಿದರು.

ಸ್ತೋತ್ರಗಳು.

ಗಣೇಶ ಪಂಚರತ್ನ

ಭಜಗೋವಿಂದಂ

ಮೈತ್ರಿಂಭಜತಾಂ

ಎಂತ ಮಾತ್ರಮುನ

ಮುಂತಾದವುಗಳು ರಾಗಮಾಲಿಕೆಗಳಾಗಿ ಸಂಯೋಜಿಸಲ್ಪಟ್ಟು ಸಿದ್ಧಿ ಪಡೆದವು.

ವಿದ್ವಾನ್ ಮಹಾರಾಜಪುರಂ ಸಂತಾನಂ (1928 – 1992)

ಸಾರಂಗ ಮರುಗನೆ – ಯಾಲ್ಪಣಂ ವೀರಮಣಿ ಅಯ್ಯರ್ ರಚನಾಕಾರರು

ನಳಿನಕಾಂತಿಮತಿ – ಮದುರೈ.ವಿ. ಕೃಷ್ಣಸ್ವಾಮಿ.

ರಾಗತಿಲ್ ಸಿರಿಂದ – ಕೂಡಲೂರು ಸುಬ್ರಹ್ಮಣ್ಯಂ

ತುಂಗಾತೀರವಿ ರಾಜಂ – ಕಮಲೇಶವಿಠಲರು

ಕ್ಷೀರಾಬ್ದಿ ಕನ್ನಿಕೆ – ಪುರಂದರದಾಸರು

ಕರ್ಪಗವಲ್ಲಿ ನಿನ್ –ಸಾರಂಗ ಮರಗನ್ನೈ –ಟಿ.ಎಂ.ಸುಂದರ್‌ರಾಜನ್ (1923–2013) ಯಾಲ್ಪಣಂ ವೀರಮಣಿ ಅಯ್ಯರ್ ರಚನೆ (1931–2003) 4 ರಾಗಗಳು ದೇವಿಕೃತಿ ಬಹಳವಾಗಿ ಪ್ರಸಿದ್ಧಿ ಪಡೆದಿದೆ.

ವಿದುಷಿ ಎ.ಕನ್ಯಾಕುಮಾರಿ–ಪ್ರಸಿದ್ಧ ವೈಯಲಿನ್‌ವಾದಕರು

108 ರಾಗಗಳ ರಾಗಮಾಲಿಕೆಯನ್ನು ರಚಿಸಿ 100 ಸಂಗೀತ ವಿದ್ವಾಂಸರುಗಳೊಂದಿಗೆ ವೇದಿಕೆಯಲ್ಲಿ ಪ್ರದರ್ಶಿಸಿದರು.

ಪಲ್ಲವಿಯ ಸಾಹಿತ್ಯವು ಕಾಪಿ ರಾಗದಲ್ಲಿದೆ "ತಿರುಪತಿ ವೆಂಕಟೇಶ ಕೃಪಾಕರ ದಯಾಪಯೋನಿಧೇ ಅಲಮೇಲ್ ಮಂಗಾ ಸಹಿತ ಶ್ರೀನಿವಾಸ". ಪಲ್ಲವಿ ಸಾಹಿತ್ಯದೊಂದಿಗೆ ಪ್ರಾರಂಭವಾಗಿ ಪ್ರತಿ ಚರಣವು 6 ರಾಗಗಳ ಸ್ವರಗಳು ಮತ್ತು ಆಯಾ ರಾಗದ ಹೆಸರುಗಳೊಂದಿಗೆ ಸಂಯೋಜಿಸಲ್ಪಟ್ಟಿದ್ದು, ಆರನೇ ರಾಗದಲ್ಲಿ ಪಲ್ಲವಿಯ ಸಾಹಿತ್ಯವನ್ನು ಸೇರುತ್ತದೆ. ಕೊನೆಯ ಚರಣವು 17 ರಾಗಗಳನ್ನೊಳಗೊಂಡಿದ್ದು ಮಧ್ಯಮಾವತಿ ರಾಗದೊಂದಿಗೆ ಮುಕ್ತಾಯಿ ಸ್ವರಗಳು ಮಧ್ಯಮಾವತಿ ರಾಗದಲ್ಲಿ ಪ್ರಸ್ತುತಗೊಂಡು ಕಾಪಿ ರಾಗದ ಸ್ವರಗಳೊಂದಿಗೆ ಪಲ್ಲವಿಯನ್ನು ಕಾಪಿ ರಾಗದಲ್ಲಿ ಮುಕ್ತಾಯಗೊಳ್ಳುತ್ತದೆ.

ವಿದ್ವಾನ್ ಆರ್. ಸೂರ್ಯಪ್ರಕಾಶ್ 30–ರಾಗಗಳಲ್ಲಿ ಸಂಯೋಜನೆಗೊಂಡು ರಾಗ ಮುದ್ರೆಯೊಂದಿಗೆ ಆಯಾರಾಗದ ಪ್ರಸಿದ್ಧ ಕೃತಿಗಳ ಸಾಹಿತ್ಯದ ಸಾಲುಗಳನ್ನು ಸೇರಿಸಿ ಹೆಣೆಯಲಾಗಿದೆ ಉದಾಹರಣೆ ನಾಟ ರಾಗದ "ಪರಿಪಾಲಯ"ಕೆ ಚನ್ನಕೇಶ್ವರರವರ ದಶಾವತಾರ ರಾಗಮಾಲಿಕೆ 11 ರಾಗಗಳನ್ನು ಒಳಗೊಂಡಿದ್ದು ಝುಂಪೆ ತಾಳದಲ್ಲಿ ನಿಬದ್ಧವಾಗಿದೆ.

ಪುರಂದರದಾಸ, ನಾರಾಯಣತೀರ್ಥ, ಅಣ್ಣಮಾಚಾರ್ಯ, ಉತ್ತುಕ್ಕಾಡು ವೆಂಕಟಕವಿ ಸುಬ್ಬಯರ್, ಅರುಣಾಚಲ ಕವಿ, ಸುಬ್ರಹ್ಮಣ್ಯ ಭಾರತಿ ಇವರುಗಳ ರಚನೆಯನ್ನು ರಾಗಮಾಲಿಕೆಯಲ್ಲಿ ಹಾಡುವುದು ಬಹಳವಾಗಿ ಕೇಳಿ ಬರುತ್ತದೆ.

ಈ ಕೀರ್ತನೆಗಳನ್ನು ಅನೇಕ ಸಂಗೀತಗಾರರು ರಾಗ ಸಂಯೋಜಿಸಿ ರಾಗಮಾಲಿಕೆಯಾಗಿ ಪ್ರದರ್ಶಿಸಿದ್ದಾರೆ.

ಪುರಂದರದಾಸರ,ಚಂದ್ರಚೂಡ ಶಿವಶಂಕರಪಾವರ್ತಿ ಕೀರ್ತನೆಯನ್ನು ವಿದುಷಿ ಎಂ.ಎಲ್.ವಸಂತಕುಮಾರಿ ಯವರು ರಾಗಗಳಲ್ಲಿ ಸಂಯೋಜಿಸಿದ್ದಾರೆ.

ನೀನ್ಯಾಕೋ ನಿನ್ನ ಹಂಗ್ಯಾಕೋ ಕೀರ್ತನೆಯನ್ನು ರಾಗಮಾಲಿಕೆಯಾಗಿ ಸಂಯೋಜಿಸಿದರು ವಿದ್ವಾನ್ ಟಿ.ಆರ್.ಸುಬ್ರಹ್ಮಣ್ಯಂ, ಅನ್ನಮಾಚಾರ್ಯರ ಎಂತಮಾತ್ರಮುನ, ಎಂ.ಎಸ್.ಸುಬ್ಬಲಕ್ಷ್ಮಿ ಅವರು ಧ್ವನಿಯಲ್ಲಿ ಕೇಳಬಹುದು. ಉತ್ತುಕ್ಕಾಡು ವೆಂಕಟಸುಬ್ಬಯ್ಯರ್ ರವರ ರಚನೆಗಳಿಗೆ ನೀಡಾಮಂಗಳಂ ಕೃಷ್ಣಮೂರ್ತಿ ಭಾಗವತರವರಿಂದ ರಾಗಗಳು ಸಂಯೋಜಿಸಲ್ಪಟ್ಟವು.

ಅರುಣಾಚಲಕವಿಯವರ ರಚನೆಗಳ ಕೀರ್ತನೆಗಳನ್ನು ಸಂಯೋಜಿಸಿದ "ರಾಮ ನಾಟಕಂ" ಅರಿಯಕುಡಿ ರಾಮಾನುಜ ಅಯ್ಯಂಗಾರ್ ಅವರು ರಾಗಮಾಲಿಕೆಗಳಾಗಿ ರಾಗ ಸಂಯೋಜಿಸಿದರು.

ಸುಬ್ರಹ್ಮಣ್ಯಭಾರತೀಯವರ ಹಲವು ರಚನೆಗಳು ರಾಗಮಾಲಿಕೆಗಳಾಗಿ ಸಂಯೋಜಿಸಲ್ಪಟ್ಟಿದೆ.

ತೀರಾದ ವಿಲ್ಲೆಯಾಟ್ಟು. ಚಿನ್ನಚಿರುಕುಳಿಯೇ ಕಣ್ಣಮ್ಮ್ ಲಾಲ್ಗುಡಿ ಜಿ.ಜಯರಾಮನ್ ಅವರು ರಾಗ ಸಂಯೋಜನೆ ಮಾಡಿದ್ದಾರೆ.

ಜಿ.ಎನ್. ಬಾಲಸುಬ್ರಹ್ಮಣ್ಯಂ

ತಿಕ್ಕುತೆರಿಯಾದ ಕಾತ್ತಿಲ್ –6–ರಾಗಗಳು– ಬೇಹಾಗ್, ಬೌಳಿ, ಕುಂತಲವರಾಳಿ, ಶಹನ, ಕಾಪಿ ಲಲಿತ ರಾಗಗಳನ್ನು ಒಳಗೊಂಡಿದೆ. ಸೊನ್ನದೈ ಸೇಯ್ದಿದ–4 ರಾಗಗಳು–ವಂದನದಾರಿಣಿ, ಜಯಂತಶ್ರೀ–ದೇವಮನೋಹರಿ–ಮಾಂಡ್ ರಾಗಗಳು, ಬಹಳ ಅಪರೂಪದ ರಾಗಗಳಿಂದ ಹೆಣೆಯಲ್ಪಟ್ಟಿದೆ.

ಈ ರಾಗಮಾಲಿಕೆಗಳನ್ನು ಬಹಳವಾಗಿ ಜನಪ್ರಿಯಗೊಳಿಸಿದರು ಹಾಗೂ ಇತ್ತೀಚಿಗಿನ ದಿನಗಳಲ್ಲಿಯೂ ಕಚೇರಿಗಳಲ್ಲಿಯೂ ಕೇಳಿ ಬರುವ ರಾಗಮಾಲಿಕೆಯಾಗಿದೆ.
ವಿದುಷಿ ಡಿ.ಕೆ.ಪಟ್ಟಮ್ಮಾಳ್‌ರವರು ಅನೇಕ ರಾಗಮಾಲಿಕೆಗಳನ್ನು ಪ್ರಸಿದ್ಧಿ ಪಡಿಸಿದರೆನ್ನಬಹುದು.

ವೇಲನ್ ವರುವಾಡಿ – ಅನ್ನಯಂಪಟ್ಟಿ ಆದಿಶೇಷ ಅಯ್ಯರ್ ರಚನೆ – ಜೋನ್ಪುರಿ, ಕಾಂಬೋದಿ, ದೇವಮನೋಹರಿ, ಬಿಲಹರಿ, ಸಾವೇರಿ, ಕಾಪಿ, ಧನ್ಯಾಸಿ ಮತ್ತು ಮೋಹನ.

ಅಂಬುಜಕೃಷ್ಣ–ಕಣ್ಣನಿಡಂ ಎಡುತ್ತು ಸೊಲ್ಲಡಿ – ವಿದುಷಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಬಹಳವಾಗಿ ಹಾಡುತ್ತಿದ್ದರು. ಕಣ್ಣಾ ವಾ ಮಣಿ ವಣ್ಣ ವಾ ಬಹಳ ಜನಪ್ರಿಯವಾದ ರಾಗಮಾಲಿಕೆಯಾಗಿದೆ.

ರಾಗಮುದ್ರೆ ಸ್ವರಗಳು ವಿಲೋಮ ಕ್ರಮದಲ್ಲಿ ಅಳವಡಿಸಿಕೊಂಡಿರುವ ರಾಗಮಾಲಿಕೆಗಳು:

ರಂಜಿನಿ ರಾಗಮಾಲಿಕೆ – 4 ರಾಗಗಳು – ತಂಜಾವೂರ್ ಶಂಕರ ಅಯ್ಯರ್.

ಮನೋಹರಿ ರಾಗ ಮಾಲಿಕೆ – 12– ರಾಗಗಳು –ಟಿ.ಆರ್. ಸುಬ್ರಹ್ಮಣ್ಯಂ (1929–2013). ಪ್ರತಿ ಖಂಡದಲ್ಲಿಯೂ ನಾಲ್ಕು ರಾಗಗಳನ್ನು ರಾಗಮುದ್ರೆಯನ್ನು ಒಳಗೊಂಡಿದೆ. ಚಿಟ್ಟೇಸ್ವರದ ನಂತರ ವಿಲೋಮ ಕ್ರಮಗಳನ್ನು ಹೊಂದಿ ಪಲ್ಲವಿಯನ್ನು ಸೇರಿಕೊಳ್ಳುತ್ತವೆ.

ಅಧ್ಯಾಯ –11

ಪ್ರಸಿದ್ಧ ರಾಗಮಾಲಿಕೆಗಳು

1–ಬ್ರಹ್ಮಾನಂದ ಸುಳಾದಿ–ಮುತುಸ್ವಾಮಿ ದೀಕ್ಷಿತರು

2–– ಪೂರ್ಣಚಂದ್ರಬಿಂಬ

3– ಶ್ರೀ ವಿಶ್ವನಾಥಂ

4– ಸಿಂಹಾಸನ ಸ್ಥಿ

5– ಮಾಧವೂ ಮಾಂ ಪಾತು–ರಾಮಸ್ವಾಮಿ ದೀಕ್ಷಿತರು

6– ನಾಟಕದಿ

7– ಶಿವೇ ಮೋಹನ ಶಕ್ತಿ

8– ಮನಸಾವೇರಿ ತರುಲ

9–– ಸಾಮಾಜಗಮನ

10–ಸುಬಬ್ರಾಮ ದೀಕ್ಷಿತರು

11 ಈ ಕನಕಾಂಬರಿ ನೆನೆಯುಮು

12– ಎಂದುಕು ರಾ ಈ ಕೋಪಮು

13– ನೀ ಸರಿಲೇರನಿ ಕೋರಿನ

14– ಗಾರವಮುಗನ್ನ

15– ವಲಪು ಮೀರಿತೋಡಿ

16– ಮನತೋಡಿಣಂಗಿನ

17– ವನಿತರು ಏಮಿ

18– ವೇಡುಕತೋ

ಡಾ. ಹರಿಕೇಶ ನಲೂರ್ಲು ಮುತಯ್ಯಭಾಗವತರ ರಾಗಮಾಲಿಕೆಗಳು

19– ಮಂಗಳದಾಯಿನಿ

20- ಓಂಕಾರೇಶ್ವರ

21-ಸ್ವರ್ಣಾಕರ್ಷಣ ಸ್ವಾತಿ ತಿರುನಾಳ್ ಮಹಾರಾಜರು

22- ಪಂಚರಾಗ ಜತಿಸ್ವರ

23- ಭಾವಯಾಮಿ ರಘುರಾಮಂ

24-- ಕಮಲಜಾಸ್ಯ

25- ಸಾನಂದಂ ಕಮಲ

26- ಪನ್ನಗೇಂದ್ರಶಯನ

27-- ಸುಮ ಸಾಯಕ - ವರ್ಣ

28- ಕಲ್ಯಾಣಿ ಕಲಯತಿ

29-- ನಾದ್ರು ತಿಲಾನ್ನ ತನ ತಿಲಾನ್ನ

30-- ಯೋಜಾಯ ಪದ ನಳಿನೇನ ರಾಮಾಯಣ ಕೀರ್ತನ- ಸಂಸ್ಕೃತ

31- ಭಾವಯೇ ಶ್ರೀ ಗೋಪಾಲನ್ - ಘನಪಂಚಕ ರಾಗಮಾಲಿಕೆ

ಮೈಸೂರು ವಾಸುದೇವಾಚಾರ್ಯರು

32- ಯದುಕುಲವಾರಿದಿ ಚಂದ್ರ

33- ಶ್ರೀ ಮುತುಸ್ವಾಮಿ ದೀಕ್ಷಿತ ಚರಿತಂ

34- ಶ್ರೀ ರಾಮ ಶಾಸ್ತ್ರಿಚರಿತಂ

35--ಶ್ರೀ ತ್ಯಾಗರಾಜ ಚರಿತಂ

36- ಶ್ರೀ ರಾಜಾಶೀರ್ವಾದ

37--ಜಯ ಚಾಮರಾಜ ಪಂಚ ರತ್ನ

38--ದಧಿ ವಾಮನ ಸ್ತೋತ್ರಂ

39- ಶ್ರೀ ನರಸಿಂಹ ಸ್ತೋತ್ರಂ

40- ಶ್ರೀ ಮಾತಂಗಿ ಸ್ತೋತ್ರಂ ವಿದುಷಿ ಟಿ. ಎಸ್. ವಸಂತ ಮಾಧವಿ

41- ಭಗವತಿ ಕೃತ ವಿಷ್ಣುದಶಾವತಾರಗಳು

42- ಪಂಚ ತತ್ವ(ಭೂತ) ವರ್ಣನಂ

43- ಸಪ್ತ ಮಾತೃಕಾ ಕೃತಿ ಮೀನಾಕ್ಷಿಸುತ (ಬೆಂಗಳೂರು ನಾಗರಾಜ್)

44-- ಮೋಹನ ಕಲ್ಯಾಣಿ

45- ಭುವನತ್ರಯ

46- ಸ್ವರ ಲಲಿತಾಂ ರಾಗಮಾಲಿಕಾ ವರ್ಣಗಳು

47- ವಲಚಿ ವಚ್ಚಿ- ನವರಾಗಮಾಲಿಕೆ - ವರ್ಣ

48-- ಇಂಥ ಕೋಪಮೇಲೇರ-ವೀಣಾ ಕುಪ್ಪಯ್ಯರ್

49--ಕಾಮಕೋಟಿ ಸುಂದರಾಗುಡು -

ಚತುರ್ದಶ ರಾಗಮಾಲಿಕಾ ವರ್ಣ

50--ಮಹಿಷಾಸುರ ಸಂಹಾರಣಿ - ವೀಣೆ ಶೇಷಣ್ಣನವರು

51- ಕಾಮಿತಾರ್ಥದಾಯಕಿ ಕಾಮಾಕ್ಷಿ- ಪಂಚ ರಾಗಮಾಲಿಕೆ

52--ರಾಗಮಾಲಿಕ ವರ್ಣಮು -ಪ್ರೊಫೆಸರ್ ಪಿ ಂಬಮೂರ್ತಿ

53- ಪ್ರಿಯ ರಾಗಮಾಲಿಕಾ ವರ್ಣ" -ಶಂಕರ ಹರಪ್ರಿಯಾ -

ಸುಗುಣ ಪುರುಷೋತ್ತಮ್

54--ಗ್ರಹಭೇಧ ವರ್ಣ - ಚಾರುಮತಿ ರಾಮಚಂದನ್

55 -ಅಂಗ್ಯೆಯಾರ್ ಕಣ್ಣಿ- ನವರಸ ರಾಗಮಾಲಿಕಾ -

ಲಾಲುಡಿ ಜಯ ರಾಮನ್

56-- ನವರಸ ಗಾನಂ - ಎಂ. ವಿ. ನರಸಿಂಹಾಚಾರಿ

ಪ್ರೊಫೆಸರ್ ರಾ. ವಿಶ್ವೇಶ್ವರನ್

57--ಗಜಮುಖ ಮುನನುಂಡಿ

58--ರಾಜರಾಜೇಶ್ವರಿ ಮಂಗಳ

59- ಪ್ರಣತಾರ್ಥಿ ಹರ ಪ್ರಭೂ - ಮಹಾ ವೈದ್ಯನಾಥ ಅಯ್ಯರ್

60- ವನಿತರೊ - ಪೊನ್ನಯ್ಯ

61-ಶಿವ ಭೂಪತೇ - ಮನಂಬುಚಾವಡಿ ವೆಂಕಟಸುಬ್ಬಯ್ಯ

62-ಅಂಬಾ ನೀನ್ನು ನೆರನಮ್ಮಿತಿ - ಚಿನ್ನಿಕೃಷ್ಣದಾಸರು

63- ಪಾಲಯ ಕರುಣಾಸಾಗರ -ವೈಕುಂಠಪುರಂ ಎಸ್ ಕೃಷ್ಣಮೂರ್ತಿ,

ಟಿ ಕೆ ರಾಮಮೂರ್ತಿ

64- ನಿತ್ಯ ಕಲ್ಯಾ - ಸೀತಾರಾಮಯ್ಯ

65- ಕರ್ನಾಟಕ ಕೊಂಕಣಿ - ವೀಣಾ ವರದಯ್ಯ - ಗೀತೆ

66- ಶ್ರೀ ರಮಣ ಪದ್ಮ ನಯನ ಹರಿ - ತಿರುವೊಟ್ಟಿಯೂರ್ ತ್ಯಾಗಯ್ಯ

67- ರಾಮಾಯಣ ರಾಗಮಾಲಿಕೆ -ಸಿ. ರಂಗಯ್ಯನವರು - 13 ರಾಗಗಳು

68- ಕನ್ನತಲ್ಲಿಕರುಣಿಂಚಿ ಬ್ರೋವುಮಿಕ - ಸಾರಂಗ ಪಾಣಿ

69- ಪರಿಪಾಹಿ - ವೀಣಾ ಸುಬ್ಬಣ್ಣ

70- ಅಂಬಾ ನೀನು ನೆರನಮ್ಮಿ - ಗರ್ಭಪುರಿವಾಸರು

71- ಗುರುಗಳ ದರುಶನ - ಬಿ. ಕೆ. ಪದ್ಮನಾಭರಾಯರು

72- ಪಣಮಾಮ್ಯಹಂ- ಆರ್ ಕೆ ಸೂರ್ಯನಾರಾಯಣ್

73- ಇವರೇ ಮಂತ್ರಾಲಯದ-ಬಿ. ಕೆ. ಪದ್ಮನಾಭರಾಯರು

74- ಮಂಗಳಂ ಮೀನಾಕಿಕ್ಷೇ - ಕೃಷ್ಣಸ್ವಾಮಯ್ಯ

75- ಶ್ರೀ ವೆಂಕಟೇಶ ನವ ರಾಗಮಾಲಿಕೆ - ದೊರೆಸ್ವಾಮಿ ಅಯ್ಯಂಗಾರ್

76- ಮಾತಂಗ ಮುಖ ಶಿವಸುತಂ - ದೊರೆಸ್ವಾಮಿ ಅಯಂಗಾರ್

77- ವಸುದೇವಸುತಂ ದೇವಂ - ಪ್ರೊಫೆಸರ್ ಡಾ. ನಾಗಮಣಿ ಶ್ರೀನಾಥ್

78- ಕರಾರವಿಂದೇನ ಬಾಲ ಮುಕುಂದ ಶ್ಲೋಕ -

ಪ್ರೊಫೆಸರ್ ಡಾ. ನಾಗಮಣಿ ಶ್ರೀನಾಥ್

79- ಸಾರಾಮತಿ ಸುಮತಿ ಗಣಪತಿ - ಶತಾವಧಾನಿ

ಡಾ. ಆರ್ ಗಣೇಶ್ - ರಾಗ ಸಂಯೋಜನೆ - ನಾಗವಲ್ಲಿನಾಗರಾಜ್

80- ಅಷ್ಟಲಕ್ಷ್ಮೀನಮೋಸ್ತುತೇ - ಚಿತ್ರವೀಣಾ ಎನ್ ರವಿಕಿರಣ್

81- ಉಚ್ಚಿಷ್ಟಗಣಪತೇ -

82- ಸಾರಂಗಮರುಗನ್ನೈ-ಯಾಳ್ಪಾಣಂ ಎನ್ . ವೀರಮಣಿ ಅಯ್ಯರ್ -

ಮಹಾರಾಜಪುರ ಸಂತಾನಮ್

83- ಆರಭಿಮಾನಂ - ತರಂಗಂ ಬಾಡಿಪಂಚನದಯ್ಯ

84- ಶ್ರೀ ಚಕ್ರರಾಜಸಿಂಹಾನೇಶ್ವರಿ

85- ರಾಗತ್ತಿನ್ ಸಿ ಂದ - ನಿತಶ್ರೀ ಮಹಾದೇವನ್

86- ಕೈ ಕಲಿಲ್ ಕರಂಬು - ಮಧುರೈ ಸೋಮ ಸುಂದರಂ

87- ಕಣ್ಣಾ ವಾ ಮಣಿವಣ್ಣ ವಾ - ಅಂಬುಜಂ ಕೃಷ್ಣ

88- ದೇವಕಿತಾನ್ ಕುಲ - ಎಂ ಎಲ್ ವಸಂತಕುಮಾರಿ -

ಅಂಬುಜಂ ಕೃಷ್ಣ

89- ಸಂಗೀತ ಸಂಸಾರ ವಾಣಿ - ಡಾ. ಶತಾವಧಾನಿ ಗಣೇಶ್

90- ರಂಜನಿಮಾಲಾ - ಪಂಚನದ ಅಯ್ಯರ್

91- ಮನೋಹರಿ ಮಾಲಾ

92- ಮನೋಹರಿ ಮಾಲಾ

93-ಕಾರ್ಪಗವಲ್ಲಿನಿನ್ -ಯಾಳ್ಪಾಣಂ ಎನ್ . ವೀರಮಣಿ ಅಯ್ಯರ್

94-ನೀನ್ನಾದನ್ - N. C. ಚಿದಂಬರಮ್

95-ವೇಲನ್ ವಾರುವಾರಡಿ - ಅನಯ್ಯಪಟ್ಟಿಆದಿಶೇಷನ್ -

D. K. ಪಟ್ಟಮ್ಮಾಳ್

96-ಗೋವಿಂದ ಹರೇ - ಸುಗುಣ ಪುರುಷೋತ್ತಮನ್

97-ಕ್ಷೀ ರಾಭ್ಧಿಕನ್ನಿ - ಪುರಂದರದಾಸರು- ಮಹಾರಾಜಪುರ

ಸಂತಾನಂ

98- ಚಂದ್ರಚೂಡಶಿವ -ಪುರಂದರದಾಸರು -

99- ಎಂ. ಎಲ್. ವಸಂತಕುಮಾರಿ

99-ಬಾರೋ ಕೃಷ್ಣಯ್ಯ ಕನಕದಾಸರು -ಸುಧಾ ರಘುನಾಥನ್

100-ಯಾದವರಾಯ ಬೃಂದಾವನದೊಳು -

101- ಏಕೆ ಬೃಂದಾವನದಿ ನೆಲೆಸಿರುವೆ - ಕಮಲೇಶ ವಿಠಲರು

102- ಓಂ ನಮೋ ಮಹಿಷಾಸುರ ಮರ್ದಿನಿ - ನವರಾಗಮಾಲಿಕೆ - ಕಮಲೇಶ ವಿಠಲರು

103- ಮಂಗಳ ರಾಗಮಾಲಿಕೆ - ಕಮಲೇಶ ವಿಠಲರು

104- ಜಯ ಜಯ ಗೋಕುಲ ಬಾಲ - ನಾರಾಯಣ ತೀರ್ಥರು

105- ನಂದ ನಂದನ ಬಾರೋ - ವಸಂತ, ಶಹನಾ, ಘರಸ್, -

106- ಕುಣಿದಾಡೋ ಕೃಷ್ಣಕುಣಿದಾಡೋ - ಪುರಂದರದಾಸರು

107- ಷಣ್ಮುಖಪ್ರಿಯನಾಯಗನೇ -ತಂಜಾವೂರು S ಕಲ್ಯಾಣರಾಮನ್

108- ಎಂತ ಮತಥುನಾ - ಅನ್ನಮಚಾರ್ಯ - ಎಮ್. ಎಸ್. ಸುಬ್ಬುಲಕ್ಷ್ಮಿ

109- ರಾಮಚರಿತ ಗೀತಂ - ಪಾಪನಾಶಂ ಶಿವನ್

110- ನವರಾತ್ರಿನಾಯಕಿ ರಂಜನಿ

111- ನಳಿನ ಕಾಂತಿಮತಿ - ಮಹಾರಾಜಪುರ ಸಂತಾನಮ್

ಕಲ್ಯಾಣಿಕಲಯತಿ ಚತುರ್ರಾಗಮಾಲಿಕೆ ಸ್ವಾತಿತಿರುನಾಳ್ಮಹಾರಾಜರು.

ರೂಪಕತಾಳ

ಶುದ್ಧ ಸಾಹಿತ್ಯ

1–ಕಲ್ಯಾಣಿ

ಕಲ್ಯಾಣಿ ಕಲೆಯತಿ ಕದಾ ತ್ರಿಜಗತಮ್

ಪಾಪೌಘ ವಿದ್ವಂಸಿನೀಂ

2–ಮೋಹನ

ಯಲ್ಲಾವಣ್ಯಮಶೇಷ ಗೋಪ ಕಮನೀಯ ನೇತ್ರೈಕ ಸಂಮೋಹನಂ

3–ಸಾರಂಗ

ಸಾರಂಗಂ ಪದ ನಕ್ರಭೀತ ಮಗತಿಂ

ಯೋಪಾಲಯತ್ ಸತ್ವರಂ

4–ಶಂಕರಾಭರಣ

ಬಾಹು ಬಾಹುರ್ ಯಸ್ಯಶಂಕರಾಭರಣ

ಜಿತ್ವಾಯಾತ್ ಸವ ಕೇಶವ ।

ಅಂಬಾ ನಿನ್ನು ನೆರನಮ್ಮಿತಿ ಪಂಚರಾಗ ಮಾಲಿಕೆ ಗರ್ಭಪುರಿವಾಸರು

ರೂಪಕತಾಳ

ಶುದ್ಧ ಸಾಹಿತ್ಯ

1 **ಕಲ್ಯಾಣಿ**

ಅಂಬಾ ನಿನ್ನು ನೆರನಮ್ಮಿತಿ ಆಲೋಚನನೆಂದುಕೇ।

ನನ್ನಾದರಿಂಪ ಸಮಯಮಮ್ಮ।

ಕಂಬುಗಳನಿ ಕಲ್ಯಾಣಿ ಕದಂಬ ವನವಾಸಿನಿ।

2–ಗೌಳಿ ಪಂತು

ನೀರಜದಳ ನಯನೇ ನಿನ್ನುನಮ್ಮಿನವಾಡನಿ।

ನಿರತಮುಗಾ ರಕ್ಷಿಂಚು ನೆರದಾತ

ನಿರತಮುಗಾ ರಕ್ಷಿಂಚು ನೆರೆದಾತ ನೀವೇಗಾನಿ।

3–ನಾಟಕುರಂಜಿ

ನೀದು ಮಹಿಮ ಪೊಗಡುಟಕುನಾದು ತರಾಮೇ

ವಾರಿತಮಾ।

ಆದಿಶೇಷುನಿ ಕೈನ ತಮಾ ಆದ ಸ್ವರೂಪಿಣಿ ತಲ್ಲಿ।

4–ಚಕ್ರವಾಕ

ಸಾಧು ಚೇಲನಿ ಚಿತ್ತರಂಜನಿ ಶ್ರೀಹರಿವರ ಸೋದರಿ ಅಂಬ।

ಆದಿಪರಾಶಕ್ತಿದೇವಿ ನಾಡು ಕೋರಿಕಲಿಚ್ಚೆತಲ್ಲಿ।ನೀಲಾಂಬರಿ

5–ನೀಲಾಂಬರಿ

ವರಗರ್ಪುರ ಮುನಂದು ವರಮುಲಿಚ್ಚುದಾನನುಚು।

ಬಿರುದುಗಲ ಭಾರತಿ ಪದ ಶರಣಂಟಿನಿ ಸೌಂದರ್ಯ ನಾಯಕಿ।

ಮಂಗಳದಾಯಿನಿ ಮಾತಂಗಿ ಪಂಚರಾಗಮಾಲಿಕೆ ಮುತ್ತಯ್ಯ ಭಾಗವತರು

ಆದಿತಾಳ

1–ಕಲ್ಯಾಣಿ

ಮಂಗಳದಾಯಿನಿ ಮಾತಂಗಿ ಮಹಿಷಾಸುರಮರ್ದಿನಿ ಕಲ್ಯಾಣಿ ಅಂಗಜ ಸಹೋದರಿ ಶಂಕರಿ

ಅಖಿಲಾಂಡೇಶ್ವರಿ ಕರುಣಿಸುದೌ ಗೌರಿ

2–ಭೈರವಿ

ಮಹಿಮಾನ್ವಿತ ಮಹನೀಯ ಸುಗುಣ ಸಾಂದ್ರ ಮಹಾದೇವ ಭಕ್ತ ದುರೀಣ ಘನ

ಮಹಿಶೂರಾಧಿಪ ನಾಲ್ವಡಿ ಶ್ರೀಕೃಷ್ಣ ಮಹಾರಾಜರ ಸದಾಸಲಹೌ ಭೈರವಿ

3–ಕಾಂಭೋಧಿ

ಕಂಠೀರವ ಶ್ರೀನೃಸಿಂಹಭೂವರ ಕಮನೀಯಗುಣ ಘನವಚನ ಮಧುರ ಮಂಡಲಾಧಿಪ

ಮಾನ್ಯಾದಿ ಗಂಭೀರ ವಸುಧಾ ಪತಿಗಳ ಪೊರೆಯೌ ಕಾಂಭೋಧಿ

4–ಆನಂದ ಭೈರವಿ

ಶ್ರೀಜಯಚಾಮರಾಜೇಂದ್ರ ಭೂವರರನು ಶ್ರೀಸತ್ಯ ಪ್ರೇಮಕುಮಾರಿ ದೇವಿಯರ ಶ್ರೀ

ಆಯುರಾರೋಗ್ಯವನು ಕರುಣಿಸಿ ಶ್ರೀಕರಿ ಆನಂದಭೈರವಿ ಪಾಲಿಸು

5–ಶ್ರೀರಾಗ

ಶ್ರೀಕರಾಯದು ರಾಜಕುಲದವರು ಶಿವ ಹರಿಕೇಶ ವರಪದ ಆಕಳಂಕರು ಆಚಂದ್ರಾರ್ಕವು

ಅವನಿಯಾಳಲು ಅನುಗ್ರಹಿಸು ಜನನಿ (ಮಂಗಳ)

ಪೂರ್ಣಚಂದ್ರಬಿಂಬ ಷಡ್ರಾಗ ಮಾಲಿಕೆ ಮುತ್ತುಸ್ವಾಮಿ ದೀಕ್ಷಿತರು

ರೂಪಕ ತಾಳ

ಶುದ್ಧ ಸಾಹಿತ್ಯ

1–ಪೂರ್ಣಚಂದ್ರಿಕೆ – 29 ನೇ ಧೀರಶಂಕರಾಭರಣ ಜನ್ಯ

ಪೂರ್ಣಚಂದ್ರಬಿಂಬ ವಿಜಯ ವದನೇನೆ ಕಮಲಾಂಬಿಕೇ

2–ನಾರಾಯಣಿ– 28 ನೇ ಹರಿಕಾಂಬೋದಿ ಜನ್ಯ

ಪುಣ್ಯಜನ ಪೂಜಿತೇ ನಾರಾಯಣಿ ಜಗದಂಬಿಕೆ

3–ಸರಸ್ವತಿ ಮನೋಹರಿ– 28 ನೇ ಹರಿಕಂಬೋದಿ ಜನ್ಯ

ಪೂರ್ಣ ಫಲಪ್ರದ ಚರಣೇಣೆ ಸರಸ್ವತಿ ಮನೋಹರೇ

4–ಶುದ್ಧ ವಸಂತ – 29ನೇ ಧೀರಶಂಕರಾಭರಣ ಜನ್ಯ

ಪುಷ್ಪಿತ ಶುದ್ಧವಸಂತೇತೇ ಪುಂಡರೀಕ ಸದೃಶಕರೇ

5–ಹಂಸಧ್ವನಿ – 29ನೇ ಧೀರಶಂಕರಾಭರಣ ಜನ್ಯ

ಅಹರ್ನಿಶಂ ಪ್ರಕಾಶಮಾನ ಹಂಸಧ್ವನಿ ವಿರಾಜಿತೇ

6–ನಾಗಧ್ವನಿ – 29ನೇ ಧೀರಶಂಕರಾಭರಣ ಜನ್ಯ

ಪರ್ಣೆ ಕುಂಡಲಿನೀನೀ ನಾಗಧ್ವನಿ ಸಹಿತೇ

ಧ್ವನಿ ಸಹಿತೇ ಹಿತೇ ತೇ ಏ

ಪಾಲಯ ಕರುಣಾಸಾಗರ ಸಪ್ತರಾಗಮಾಲಿಕೆ ವೈಕುಂಠಪುರಂ ಎಸ್ ಕೃಷ್ಣಶಾಸ್ತ್ರಿ ಮತ್ತು ಟಿ.ಕೆ ರಾಮಮೂರ್ತಿ

ಶುದ್ಧಸಾಹಿತ್ಯ

1 ಪೂರ್ವಿಕಲ್ಯಾಣಿ

ಪಾಲಯ ಕರುಣಾಸಾಗರ ಗುಣಧಾಮನ್

ಭೋಶ್ರೀರಾಮ।

ಅನುಪಲ್ಲವಿ

ದಶರಥ ನಂದನ ಭವಭಯಭಂಜನ ಜನ ಮನೋರಂಜನ

ಭೋಶ್ರೀರಾಮ।

ಚರಣ

ಋಷ್ಯಶ್ರಂಗ ಮಹರ್ಷಿ ದಯಾಭಾವ ಕೃಷಿಕಜ ಮುಖ ಸಂರಕ್ಷಕ।

ಗೌತಮಪತ್ನಿ ಶಾಪ ವಿಮೋಚಕ ಹರಧನುರ್ಭಂಜಕ।

2–ಅಠಾಣ

ಜಾನಕಿ ಮನು ಕಮಲಾತ್ತವಿಲಾಸಕ ಭಾರ್ಗವ ಮುದಹಾರಕ।

ಜನಕ ವಚೋದ್ಧಾರಣಾರ್ಥ ಮಹಾವಿಭವಾದಿ ವಿಮುಂಚಕ।

3–ಮಲಯಮಾರುತ

ಚೀರ ಜಟಾಜೀನಧಾರಣ ಭೂಷಣ ಜಾನಕೀ ಲಕ್ಷ್ಮಣಯುತಗಮನ।

ಘೋರ ಮಹಾವನ ಭೂರಿ ನಿವಾಸನ ನಿಶಿಚರಮಾರಣ।

4–ವರಾಳಿ

ಭಿಕ್ಷುಕಭೀಷಣ ರಾವಣಪಹೃತ ದು:ಖಿತ ಸೀತಾನ್ವೇಷಣ ಸೂರ್ಯಜ ಭಾಷಣ ವಾಲಿ ವಿಭಂಜನ ವಾರಿಧಿ ಬಂಧನ।

5–ಶಹನ

ಶರಣ ವಿಭೀಷಣ ಸಾಹಸಕಾರಣ ಯಾಗ ವಿನಾಶಕಮಾರಣ।

ರಾವಣ ಪರಿಜನ ಮಾರಣ ಸುರಗಣ ಋಷಿಗಣಪಾಲನ।

6–ಆಂದೋಳಿಕಾ

ವಹ್ನಿ ವಿವರ್ಧಿತ ಸೀತಾ ಭೂಷಣ ಪುಷ್ಪಕಯಾನಾರೋಹಣ।

ಸತತಂ ರಾಮಧ್ಯಾನಪರಾಯಣ ಭರತಭಾಷಣ।

7–ಮಣಿರಂಗು

ಪಟ್ಟಾಭಿಷೇಚನ ಮಾನರಗಣ ಮನೋಭೂಷಣ ಕೃತತೋಷ।

ಏತತ್ಸಾರ ರಾಮಾಯಣ ಪಾಠನ ದಾಸಕೃಷ್ಣಕೃತ।

ಅಂಬಾ ನಿನ್ನುನೆರನಮ್ಮಿತಿ　　　ನವರಾಗ ಮಾಲಿಕೆ　　　ಚಿನ್ನಿಕೃಷ್ಣದಾಸ

ರೂಪಕತಾಳ

1–ಆನಂದಭೈರವಿ: 20ನೇ ನಟಭೈರವಿ ಜನ್ಯ

ಅಂಬಾ ನೀನುನೆರನಮ್ಮಿತಿ

ಆದರಿಂಪ ಸಮಯವಮ್ಮ

2– ಭೈರವಿ: 20ನೇ ನಟಭೈರವಿ ಜನ್ಯ

ಕಂಬು ಕಂದರಿ ಬೈರವಿ ಘನನಿಭವಾನಿವಾಸಿನಿ ಅಂಬ

3– ಕಲ್ಯಾಣಿ: 65ನೇ ಮೇಳಕರ್ತ

ಕೋಕಿಲಾಂಬ ಶ್ರೀಕಾಮೇಶ್ವರಿ ನಾರಾಯಣಿ ಕಲ್ಯಾಣಿ

4– ಬೇಗಡೆ: 29ನೇಧೀರಶಂಕರಾಭರಣ ಜನ್ಯ

ದಿಬ್ಬೆಗಡಲೆದನುಚು ದಗ್ಗರಿಕನಿ ವಚ್ಚಿಚೇರಿ

5– ಶಹನ: 28ನೇ ಹರಿಕಾಂಬೋಧಿಯಲ್ಲಿ ಜನ್ಯ

ನೀ ಪದ ಮೂಲನೆರನಮಿತಿ ನೀ ಶಹನ ದಾಸುಡೈತಿ

6– ಸುರಟಿ: 28ನೇ ಹರಿಕಾಂಬೋಧಿಯಲ್ಲಿ ಜನ್ಯ

ಸುಂದರಾಂಗಿ ನಿರುಗಡಲನು ಸುರಟಿ ಚಾಮರಮುಲಿವೆ

7– ಗೌರಿ:15ನೇ ಮಾಯಾಮಾಳವಗೌಳ ಜನ್ಯ

ಮುಂದು ವರಮುಲಿಚ್ಚಿ ಗೌರಿ ಬ್ರೋತುವನುಚು ಕೌಮಾರಿ

8– ಕೇದಾರ:29ನೇಧೀರಶಂಕರಾಭರಣ ಜನ್ಯ

ಕಲಿಕೇದಾರ ಪೂಸಿನದಿ ಕಾಂತಮಣಿ ಬಾಲೆ

9– ಶ್ರೀರಾಗ: 22ನೇ ಖರಹರಪ್ರಿಯ ಜನ್ಯ

ಚಿನ್ನಿಕೃಷ್ಣದಾಸಸಹೋದರಿ ಶ್ರೀ ರಾಜರಾಜೇಶ್ವರಿ

ನವರಾತ್ರಿನಾಯಕಿ ರಚನೆ– ಮಂಗಳಂ ಗಣಪತಿ ಆದಿತಾಳ

ರಾಗ–ರಂಜನಿ–59ನೇ ಮೇಳ

ನವರಾತ್ರಿನಾಯಕಿ ರಂಜನಿ

ನತಜನರಕ್ಷಕಿ ಶಕ್ತಿ ಸ್ವರೂಪಿಣಿ

ರಂಜನಿ ರಂಜನಿ

ರಾಗ–ಶಿವರಂಜನಿ– 22ನೇ ಮೇಳ

ಶಿವಲೋಕರಾಜ್ಞಿ ಶಿವರಂಜನಿ

ಚಿನ್ಮಯ ರೂಪಿಣಿ ಶಿವಕಾಮೇಶ್ವರಿ

ಶಿವರಂಜನಿ ಶಿವರಂಜನಿ

ರಾಗ–ಜನರಂಜನಿ–29ನೇ ಮೇಳ

ಜಗನ್ಮೋಹಿನಿ ಜನನಿ ಜನರಂಜನಿ

ಜಗತ್ಕಾರಿಣಿ ಶ್ರೀ ಮಹಾಲಕ್ಷ್ಮೀ

ಜನರಂಜನಿ ಜನರಂಜನಿ

ರಾಗ ಶ್ರೀರಂಜನಿ–22ನೇ ಮೇಳ

ನಾದ ಬ್ರಹ್ಮಮಯಿ ಶ್ರೀರಂಜನಿ

ನಾರಾಯಣಿ ದೇವಿ ಶ್ರೀಸರಸ್ವತಿ

ಶ್ರೀರಂಜನಿ ಶ್ರೀರಂಜನಿ

ರಾಗ ಭೈರವಿ–20 ನೇ ಮೇಳ

ಭಗಮಾಲಿನಿ ಭೈರವಿದೇವಿ

ಪರಮಪಾವನಿ ದುರ್ಗಾ ಪರಮೇಶ್ವರಿ

ಭೈರವಿ ಭೈರವಿ

ರಾಗ: ಆನಂದ ಭೈರವಿ

ಅಖಿಲಲೋಕೇಶ್ವರಿ ಆನಂದಭೈರವಿ

ಅಂಬಾಶ್ರೀಲಲಿತೇ ಕಾಮಾಕ್ಷಿದೇವಿ

ಆನಂದಭೈರವಿ ಆನಂದಭೈರವಿ

ರಾಗ ಮಧ್ಯಮಾವತಿ: 22ನೇ ಮೇಳ

ಸಕಲ ಸೌಭಾಗ್ಯ ವರಪ್ರದಾಯಿನಿ

ಶುಭ ಮಂಗಳ ಪ್ರಿಯೆ ಮಧ್ಯಮಾವತಿ ಮಾತೆ

ಮಧ್ಯಮಾವತಿ ಮಧ್ಯಮಾವತಿ

ಸಮಾರೋಪ

ಸಂಗೀತವು ಲಕ್ಷ್ಯ ಪ್ರಧಾನವಾದರೂ, ರಾಗಗಳನ್ನು, ಸಂಗೀತ ರಚನೆಗಳನ್ನು ಸರಿಯಾಗಿ ಉಳಿಸಿಕೊಳ್ಳಲು ಶಾಸ್ತ್ರಾಭ್ಯಾಸವು ಅತ್ಯಗತ್ಯ ಸಂಗೀತಶಾಸ್ತ್ರ ಚರಿತ್ರೆಯನ್ನು ಅವುಗಳ ಸಂಶೋಧನೆಗಳನ್ನು ಒಳಗೊಂಡಿರುವ ಪ್ರಬಂಧಗಳನ್ನು ಅಧ್ಯಯನ ಮಾಡುವುದರ ಮೂಲಕ ಪ್ರಾಚೀನ ಕಾಲದ, ಮಧ್ಯಕಾಲದ, ಆಧುನಿಕ ಕಾಲದ ಸಂಗೀತದ ಬೆಳವಣಿಗೆಯನ್ನು ತಿಳಿದುಕೊಂಡು ಪರಸ್ಪರ ತುಲನಾತ್ಮಕ ಪರಿಶೀಲನೆಯಿಂದ ಸಂಪ್ರದಾಯವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಸಂಗೀತಕ್ಕೆ ಶ್ರುತಿ ಮತ್ತು ತಾಳ ಪ್ರಧಾನ ಅಂಗಗಳು. ಸಂಗೀತವು ಸಂಗೀತಗಾರನಿಂದ ಸೃಷ್ಟಿಗೊಂಡಾಗ ಅವನಲ್ಲೇ ಲಯವನ್ನು ಹೊಂದುತ್ತದೆ. ನಾದ ಪ್ರಧಾನವಾಗಿರುವ ಸಂಗೀತದಲ್ಲಿ ಸಂಗೀತಗಾರ ಮತ್ತು ಪ್ರೇಕ್ಷಕರು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ.

ಕಲಾವಿದರು ತಮ್ಮ ಸಂಗೀತವನ್ನು ಸ್ವರ, ಲಯ ಮತ್ತು ಭಾವನೆಗಳ ಸುಂದರ ಅಭಿವ್ಯಕ್ತಿಗಳನ್ನಾಗಿಸಿ ಪ್ರದರ್ಶಿಸುತ್ತಾರೆ. ಪ್ರೇಕ್ಷಕರು ರಾಗ ರಂಜಿತವಾದ, ರಸಮಯವಾದ ಸಂಗೀತವನ್ನು ಆಸ್ವಾದಿಸಿ ಕಲಾವಿದರನ್ನು ಪ್ರೋತ್ಸಾಹಿಸುವುದರ ಮೂಲಕ ಸಂಗೀತ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ಮಾಡುತ್ತಾರೆ.

ಭಾರತೀಯ ಸಂಗೀತದಲ್ಲಿ ಗಾಯಕನಿಗೆ (ಸಂಗೀತಗಾರನಿಗೆ)

ಪಾಶ್ಚಾತ್ಯ ಸಂಗೀತದಲ್ಲಿರುವಂತೆ ಒಳ್ಳೆಯ ಶರೀರ ಮಾತ್ರವಿದ್ದರೆ ಸಾಲದು. ಒಳ್ಳೆಯ ಮನೋಧರ್ಮ, ಕಲ್ಪನೆ, ಜ್ಞಾಪಕ ಶಕ್ತಿ, ಸೂಕ್ಷ್ಮ ಶ್ರುತಿಗಳ ಅರಿವುಗಳು ಇರಬೇಕು.

ಕರ್ನಾಟಕ ಭಾರತೀಯ ಸಂಗೀತವನ್ನು ಮೂರು ಪ್ರಮುಖ ಹಂತಗಳಲ್ಲಿ ವಿಶಾಲವಾಗಿ ಅಧ್ಯಯನ ಮಾಡಬಹುದು.-

ಪ್ರಾಚೀನ ಕಾಲ – ವೈದಿಕ ಕ್ರಿ.ಶ. 8ನೇ ಶತಮಾನ

ಮಧ್ಯಕಾಲೀನ ಅವಧಿ – ಕ್ರಿ.ಶ. 9 ರಿಂದ 15ನೇ ಶತಮಾನ.

ಆಧುನಿಕ ಅವಧಿ – ಕ್ರಿ.ಶ. 16 ರಿಂದ ಇಂದಿನವರೆಗೆ.

ರಾಗಮಾಲಿಕಾ ಅಧ್ಯಯನವನ್ನು ಈ ದೃಷ್ಟಿಕೋನದಿಂದ ವಿವರಿಸಲಾಗಿದೆ. ಕರ್ನಾಟಕ ಸಂಗೀತವು ವಿಶಿಷ್ಟವಾದ ಗಮಕಗಳಿಂದ ಕೂಡಿದ ರಾಗ ಭಂಡಾರವಾಗಿದೆ ಹಾಗೂ ವಿಭಿನ್ನ ತಾಳಗಳ ಸಮ್ಮೇಳನದಿಂದ ಬೇರೆ ಎಲ್ಲ ಸಂಗೀತಗಳಿಗಿಂತಲೂ ಪ್ರಖ್ಯಾತವಾಗಿದೆ.

"ರಾಗರತ್ನಮಾಲಿಕಚೇ" ಕೃತಿಯಲ್ಲಿ ತ್ಯಾಗರಾಜರು, ರಾಗಗಳ ರತ್ನಗಳ ಮಾಲಿಕೆಯನ್ನು ಭಗವಂತನಿಗೆ ಅರ್ಪಿಸಿ ಕೃಪೆಗೆ ಪಾತ್ರನಾಗುವ ಪರಿಯನ್ನು ತಿಳಿಸಿದ್ದಾರೆ.

ಸಂಪತ್ಭರಿತವಾಗಿರುವ ಕರ್ನಾಟಕ ಸಂಗೀತದ ವಿಶಿಷ್ಟತೆಯನ್ನು ಲಾಕ್ಷಣಿಕರ ಲಕ್ಷ್ಯ ಲಕ್ಷಣಗಳಿಂದಲೂ, ವಿದ್ವಾಂಸರುಗಳ ಸಂಗೀತ ಪ್ರದರ್ಶನಗಳಿಂದಲೂ ತಿಳಿದುಕೊಳ್ಳ-ಬಹುದಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗಮಾಲಿಕೆಗಳು ಬೆಳೆದು ಬಂದ ಹಾದಿ ಮತ್ತು ಅನೇಕಾನೇಕ ವಾಗ್ಗೇಯಕಾರರುಗಳ ಪ್ರತಿಭಾಪೂರ್ಣ ರಚನೆಗಳ ವಿವರಣೆ ಮತ್ತು ಬೆಳಕಿಗೆ ಬಾರದ ಅನೇಕ ಕರ್ನಾಟಕ ವಾಗ್ಗೇಯಕಾರರುಗಳ ಹಲವಾರು ವಿದ್ವತ್ಪೂರ್ಣ ರಾಗಮಾಲಿಕೆಗಳ ವಿವರಣಾತ್ಮಕ ಪರಿಚಯಗಳೊಂದಿಗೆ ಈ ಪ್ರಬಂಧವು ಸಂಗೀತ ಕಲಾರಸಿಕರಿಗೂ, ಸಂಗೀತದಲ್ಲಿ ವಿಶೇಷ ಅಧ್ಯಯನ ಮಾಡಬೇಕೆನ್ನುವವರೆಗೂ ಕೈಪಿಡಿ ಆಗಬಹುದು.

"ಸಂಗೀತ ರತ್ನಾಕರ"ದ ಸಾರಂಗದೇವನಿಂದ ಪ್ರಾರಂಭಿಸಿ ಶ್ರೀಪಾದರಾಯರು, ಅಣ್ಣಮಾಚಾರ್ಯರು, ರಾಮಸ್ವಾಮಿದೀಕ್ಷಿತರು, ಮತ್ತುಸ್ವಾಮಿ ದೀಕ್ಷಿತರು, ಸುಬ್ಬರಾಮ ದೀಕ್ಷಿತರು, ಸ್ವಾತಿತಿರುನಾಳ್‌ರವರು, ಮುತ್ತಯ್ಯ ಭಾಗವತರು, ಸಿ.ರಂಗಯ್ಯನವರು, ಮೈಸೂರು ವಾಸುದೇವಾಚಾರ್ಯರು ಇನ್ನೂ ಮುಂತಾದ ವಿಶಿಷ್ಟ ವಾಗ್ಗೇಯಕಾರರುಗಳ ಪರಿಚಯದೊಂದಿಗೆ ಅವರ ರಚನೆಗಳ ಅವಲೋಕನ ಮಾಡಲಾಗಿದೆ. ಹಾಗೆಯೇ ಕರ್ನಾಟಕ ಸಂಗೀತದ ಲಕ್ಷಣ ವಿಭಾಗ ಮೇಳಕರ್ತ ರಾಗಗಳು, ಜನ್ಯ ರಾಗಗಳು, ರಾಗ ರಸ, ಸಂಗೀತ ಮುದ್ರೆಗಳ ಅಧ್ಯಯನವನ್ನೂ ಮಾಡಲಾಗಿದೆ.

ವಾಗ್ಗೇಯಕಾರರು ರಾಗಮಾಲಿಕೆಗಳ ರಚನೆಗಳಲ್ಲಿ ಅನುಸರಿಸುವ ಕ್ರಮಗಳನ್ನು ಅರಿತು ಗಾಯಕ ಮತ್ತು ವಾದಕರು, ರಾಗಮಾಲಿಕೆಗಳಲ್ಲಿ ರಾಗಗಳ ಭಾವ, ರಚನಾಕಾರನ ರಚನೆಯ ಉದ್ದೇಶ ಅರಿತು ಸಂಗೀತ ವೇದಿಕೆಗಳಲ್ಲಿ ಪ್ರದರ್ಶಿಸಿದಾಗ ಕಲಾರಸಿಕರಿಗೆ ಆತ್ಮ ಸಂತೋಷ

ವನ್ನುಂಟು ಮಾಡುತ್ತದೆ. ಈ ಪ್ರಬಂಧದಲ್ಲಿ ಪೂರಕವಾಗುವಂತೆ (ಬಹಳ ವರ್ಷಗಳ ಹಿಂದೆ ಸಂಗ್ರಹಿಸಿದ್ದ ರಚನೆಗಳು ಸೇರಿಸಲಾಗಿದೆ ಹಾಗೂ ಸ್ವರಮಟ್ಟು ಅಳವಡಿಸಿರುವುದನ್ನೂ ಸೇರಿಸಲಾಗಿದೆ. ಮುಂದೆ ರಾಗಮಾಲಿಕಾ ರಚನೆಗಳನ್ನು ಕಲಿಯಲು ಅನುಕೂಲ ಆಗುವುದು ಎಂಬುದಷ್ಟೇ ನನ್ನ ಉದ್ದೇಶವಾಗಿದೆ).

ಈ ಎಲ್ಲಾ ವಿಷಯಗಳೊಂದಿಗೆ ಹಿರಿಯ ವಿದ್ವಾಂಸರುಗಳು ರಾಗಸಂಯೋಜಿಸಿ ಜಯಪ್ರಿಯಗೊಳಿಸಿದ ಕೆಲವು ರಚನೆಗಳನ್ನು ಈ ಮಹಾಪ್ರಬಂಧದಲ್ಲಿ ಸೇರಿಸಲಾಗಿದೆ. ರಾಗಮಾಲಿಕಾ ಅಧ್ಯಯನ ಇಷ್ಟಕ್ಕೆ ಮುಗಿಸುವಂತಹುದಲ್ಲ.

ಸಂಗೀತದ ವಿವಿಧ ಪ್ರಕಾರಗಳಾದ ಭಕ್ತಿಗೀತೆ, ಸುಗಮ ಸಂಗೀತ, ಹಿಂದೂಸ್ತಾನಿ ಸಂಗೀತ ಮುಂತಾದವುಗಳ ವಿವರಣೆ ಗಣನೆಗೆ ತೆಗೆದುಕೊಂಡಿಲ್ಲ. ಈ ಮಹಾ ಪ್ರಬಂಧದಲ್ಲಿ ಕೆಲವೊಂದು ಸ್ತೋತ್ರ ಅದರಲ್ಲೂ, ಸ್ವರಮಟ್ಟುಗಳು ಅಳವಡಿಸಿರುವಂತಹು ಪರಿಚಯ ಮಾಡಲಾಗಿದೆ. ಹಿಂದಿನಿಂದಲೂ ಸೌಂದರ್ಯಲಹರಿ, ಪಂಚರತ್ನಗಳನ್ನೂ (ಉದಾ: ಗಣೇಶ ಪಂಚರತ್ನ) ಅಲ್ಲದೆ ಅಷ್ಟಕಗಳನ್ನು, ದಾಸರಪದಗಳನ್ನೂ, ವಿದ್ವಾನ್ ಆರ್.ಕೆ. ಪದ್ಮನಾಭರಾಯರು, ವಿದುಷಿ ಶ್ರೀಮತಿ. ನಾಗಮಣಿ ಶ್ರೀನಾಥ್, ವಿದುಷಿ ಟಿ.ಎಸ್. ಸತ್ಯವತಿ, ವಿದುಷಿ ನಾಗವಲ್ಲಿನಾಗರಾಜ್‌ರವರು ಇನ್ನೂ ಮುಂತಾದ ವಿದ್ವಾಂಸರು ರಾಗಮಾಲಿಕೆಗಳಾಗಿ ಸಂಯೋಜನೆ ಮಾಡಿ ರಾಗಮಾಲಿಕೆಗಳ ಬೆಳವಣಿಗೆ ಸಹಾಯಕರಾಗಿದ್ದಾರೆ.

ಕರ್ನಾಟಕ ಸಂಗೀತದ ಹಿರಯ ಕಲಾವಿದರುಗಳಾದ ಶ್ರೀಮತಿ ಬಾಂಬೆ ಜಯಶ್ರೀ, ಶ್ರೀಮತಿ. ಸೌಮ್ಯಶ್ರೀನಿವಾಸ್, ಶ್ರೀಮತಿ. ಪಂತುಲರಮಾ, ಯುವಕಲಾವಿದರುಗಳಾದ ವಿದುಷಿ ಅಮೃತ ಮುರುಳಿ, ಅಮೃತ ವೆಂಕಟೇಶ್, ವಿದ್ವಾನ್ ಸಾಕೇತರಾಮನ್, ವಿದ್ವಾನ್ ಎಮ್.ಎಸ್.ದೀಪಕ್, ವಿದುಷಿ ಮಾನಸಿ ಪ್ರಸಾದ್ ಮುಂತಾದವರು ಸಂಗೀತ ವೇದಿಕೆಗಳಲ್ಲಿ ಮನೋಧರ್ಮ ಪ್ರಾಕರಗಳಲ್ಲಿ ತಮ್ಮ ವಿದ್ವತ್ಪರಿಪೂರ್ಣ ಪ್ರದರ್ಶನವನ್ನು ನೀಡುತ್ತಿದ್ದಾರೆ.

ರಾಗಮಾಲಿಕೆಗಳಲ್ಲಿ ಕೃತಿ, ಸ್ತೋತ್ರಮುಂತಾದವುಗಳನ್ನು ಸಂಯೋಜಿಸುವುದರಿಂದ “ಸ್ವಲ್ಪದರಲ್ಲಿ ಸ್ವಾರಸ್ಯ” ಎಂಬಂತೆ ರಾಗಗಳ ಅಧ್ಯಯನ ಮಾಡಿ, ಪ್ರಥಮ ಅಭ್ಯಾಸದ ಅವಧಿಯಲ್ಲಿ ಸಂಗೀತಾಭ್ಯಾಸಿಗಳನ್ನು ಬೆಳೆಸುವುದು ಆದರಣೀಯವಾಗುತ್ತದೆ ನನ್ನ ಅನಿಸಿಕೆ.

ನಮ್ಮ ಕರ್ನಾಟಕ ಸಂಗೀತದಲ್ಲಿ ಬೆಳಿಗೆಬಾರದ ರಾಗಗಳು, ಏಕರಾಗ ಕೃತಿಗಳು ಬಹಳವಾಗಿದೆ, ಅಂತಹ ರಾಗಗಳು ಬೆಳಕಿಗೆ ಬರುತ್ತದೆ. ರಾಗ ಅಧ್ಯಯನವು ಸಾಧ್ಯವಾಗುತ್ತದೆ.

ಈ ಎಲ್ಲ ಪ್ರಯತ್ನಗಳಿಗೆ ಪೂರಕವಾಗುವಂತೆ ಸಂಗೀತದ ಅಭ್ಯಾಸಗಾನದ ಅವಧಿಯಲ್ಲಿ ಪಾಠಗಳಲ್ಲಿ ಕಲಿತಿರುವಂತಹ ರಾಗಗಳಲ್ಲಿ ರಾಗಮಾಲಿಕಾ ರೂಪದಲ್ಲಿ ಸಣ್ಣ ಸಣ್ಣ ಭಜನೆಗಳನ್ನೂ ಹೇಳಿಕೊಡುವ ಪ್ರಯತ್ನ ಮಾಡಿ ಸಂಗೀತಾಭ್ಯಾಸಿಗಳ ರಾಗಗಳ ಅಧ್ಯಯನದ ಹುಟ್ಟು ಹಾಕುವುದು ಬಹಳ ಒಳ್ಳೆಯದು.

ಈ ನಿಟ್ಟಿನಲ್ಲಿ ನಾನು ಮಡಿದ ಮಹಾ ಗ್ರಂಥಗಳ ಅಧ್ಯಯನವು ನನಗೆ ಸಂಗೀತ ಕ್ಷೇತ್ರದಲ್ಲಿ ಅಧಿಕ ಜ್ಞಾನವನ್ನೂ, ಹಿರಿಯ ಕಿರಿಯ ಕಲಾವಿದರ ಪ್ರೌಢಿಮೆ ಮುಂತಾದ ವಿಷಯಗಳಲ್ಲಿ ಆಶ್ಚರ್ಯವನ್ನೂ ಉಂಟುಮಾಡಿತೆನ್ನಬಹುದು.

ಈ ಮಹಾಪ್ರಬಂಧ ಮಂಡಿಸುವಲ್ಲಿ ಉತ್ತೇಜನ, ಸಹಕಾರ, ಪ್ರೋತ್ಸಾಹ ನೀಡಿದ ಪ್ರತಿಯೊಬ್ಬರಿಗೂ ನನ್ನ ಅನಂತಾನಂತ ಧನ್ಯವಾದಗಳು.

ಗ್ರಂಥ–ಋಣ

1. ಕರ್ನಾಟಕದ ಕಲೆಗಳು–ಡಾ ಆರ್ ಸತ್ಯನಾರಾಯಣ
2. ಕರ್ನಾಟಕ ಸಂಗೀತ ದೀಪಿಕೆ– ವಿ.ಎಸ್ ಸಂಪತ್‌ಕುಮಾರ್ ಆಚಾರ್ಯ ವಿ ರಾಮರತ್ನಂ
3. ಕೀರ್ತನ ದರ್ಪಣ ಭಾಗ–2–ಪ್ರೊಫೆಸರ್ ವಿ. ರಾಮರತ್ನಂ
4. ಸಂಗೀತಾಶಾಸ್ತ್ರಸಾರ–ಮೈಸೂರು ಎನ್ ರಾಜಾರಾವ್
5. ಸಂಗೀತ ಲಕ್ಷ್ಯಜ್ಞಾನ –ಆರ್.ಆರ್ ಕೇಶವಮೂರ್ತಿ
6. ಕರ್ನಾಟಕ ಸಂಗೀತ ಲಕ್ಷ್ಯ–ಲಕ್ಷಣಪದ್ಧತಿ–ಗಾನವಿಶಾರದ, ತಿಟ್ಟೆ ಕೃಷ್ಣ ಐಯ್ಯಂಗಾರ್
7. ಸಂಗೀತ ಇತಿಹಾಸ ಪರಂಪರೆ ಎಸ್.ಕೆ ರಾಮಚಂದ್ರರಾವ್
8. ಗಾನಕಲೆ–ರಾಳ್ಳಪಳ್ಳಿ ಅನಂತಕೃಷ್ಣಮೂರ್ತಿ
9. ಸಂಗೀತ ಚಿಕಿತ್ಸೆ–ದಿವ್ಯಚಂದ್ರ ಪ್ರಕಾಶನ
10. ಕಾಂಪೋಸಿಶನ್ಸ್ ಅಫ್ ಮಹಾರಾಜ ಶ್ರೀ ಸ್ವಾತಿತಿರುನಾಳ್–ಸಂಗೀತ ಕಲಾನಿಧಿ ಟಿ.ಕೆ .ಗೋವಿಂದರಾವ್
11. ಗಾಯಕ ಶಿಖಾಮಣಿ ಡಾ ಎಲ್ ಮುತ್ತಯ್ಯಭಾಗವತರ ರಚನಾ ಸಂಗ್ರಹ –ಸಂಕಲನ– ಕರ್ನಾಟಕ ಕಲಾಶ್ರೀ ಡಾ ಟಿ.ಎನ್ ಪದ್ಮ
12. ಚಂದ್ರಶೇಖರ ಕೃತಿ ರತ್ನಮಾಲಾ–ಆರ್ ಚಂದ್ರಶೇಖರಯ್ಯ
13. ಸಂಗೀತಾತ್ಮಕ ಚಿಂತನ ಸೌರಭ–ಡಾ ಸುಕನ್ಯ ಪ್ರಭಾಕರ್
14. ಕರ್ನಾಟಕ ಸಂಗೀತ ದರ್ಪಣ– ಬಾಗಗಳು ನಾಲ್ಕು–ಐದು– ತಿರುಮಲೈ ಸಹೋದರಿಯರು
15. ಪ್ರಸಿದ್ಧ ರಾಗಮಾಲಿಕೆಗಳು– ಮತ್ತೂರು ಆರ್ ಶಂಕರಮೂರ್ತಿ
16. ಕರ್ನಾಟಕ ಸಂಗೀತವಾಹಿನಿ– ಡಾ ರಾ ಸತ್ಯನಾರಾಯಣ

17. ವಾಗ್ಗೇಯ ರತ್ನಾವಳಿ ಭಾಗ–2–ಕರ್ನಾಟಕ ಕಲಾಶ್ರೀ ವಿದುಷಿ ಟಿ ಎಸ್ ವಸಂತಮಾಧವಿ

18. ವರ್ಣಸಾಗರ–ಸಂಗೀತ ಕಲಾನಿಧಿ ಟಿ.ಕೆ ಗೋವಿಂದರಾವ್

19. ವಾಸುದೇವ ಕೀರ್ತನ ಮಂಜರಿ–ಎಸ್ ಕೃಷ್ಣಮೂರ್ತಿ

20. ಮೈಸೂರು ವಾಗ್ಗೇಯಕಾರರ ಸಾಧನೆ,ಸಿದ್ಧಿ ಹಾಗೂ ವರ್ಣಗಳು– ಡಾ ಸುಕನ್ಯ ಪ್ರಭಾಕರ್

21. ಅಭಿಜ್ಞಾನ ಗುರುರಾಯರ ಕೃತಿ ರತ್ನಮಾಲಾ–ಆರ್.ಕೆ ಸೂರ್ಯನಾರಾಯಣ್

22. ಮೀನಾಕ್ಷಿಸುತ ಅವರ ಕೃತಿಗಳು–ಆನಂದರಾಮ ಉಡುಪ

23. ಜನಪ್ರಿಯ ತಮಿಳು ರಚನೆಗಳು–ಡಾ.ರಮಾ.ವಿ.ಬೆನ್ನೂರು–ವಿದುಷಿ ನೀಲಾ ರಾಮಗೋಪಾಲ್

24. ಅನನ್ಯ ಕಲಾ ಸಿಂಚನ ಮಾಸಪತ್ರಿಕೆಗಳು

25. ಲಕ್ಷ್ಮೀನಾರಾಯಣ ಕೃತಿ ಮಂಜರಿ

26. The Holistics Garland -N Rajagopalan

27. South Indian Music-Sri P. Samba Murthy

28. Music Research Library(Internet)

29. Sri P P.Narayana Swamy and Sri Lakshman Ragde articles(Internet)